# ಕಾರ್ಯಕಾರಿ ಸಾರಾಂಶ

ಸೇವೆಗಳನ್ನು ಒದಗಿಸುವವರು ಅವುಗಳ ಪ್ರಯೋಜನದಾರರೆಲ್ಲರಿಗೂ ಸೇವೆಗಳನ್ನು ಒದಗಿಸಲು ಸಮರ್ಥ ಮತ್ತು ಪರಿಣಾಮಕಾರಿ ಸೇವಾ ಪೂರೈಕೆ ಪದ್ಧತಿಗಳನ್ನು ಹೊಂದಿರಬೇಕಾಗುತ್ತದೆ. ಇದು ಒಂದು ಸಂಘಟನೆ, ರಾಜ್ಯ, ಸಹಕಾರಿ ಘಟಕ ಅಥವಾ ಸಂಸ್ಥೆಯಾಗಿರಬಹುದು. ಸಮರ್ಥ ಮತ್ತು ಪರಿಣಾಮಕಾರಿ ಸೇವಾ ವ್ಯವಸ್ಥೆಯ ಫಲಿತಾಂಶವನ್ನು ಪರಿಮಾಣ ಮತ್ತು ಗುಣಾತ್ಮಕವಾಗಿ ಮಾಪಿಸಿ/ಅಳೆದು ನೋಡಬೇಕಾಗುತ್ತದೆ. ಇದನ್ನು ಪ್ರತೀಕ್ಷೆಯಾಗಿಟ್ಟುಕೊಂಡು ಮೆ. ರಿಮೋಟ್ ಸೆನ್ಸಿಂಗ್ ಇನ್‌ಸ್ಟ್ರುಮೆಂಟ್ಸ್, ಬೆಂಗಳೂರುರವರಿಗೆ ರಾಜ್ಯದ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು 2008-2013ರ ಅವಧಿಯಲ್ಲಿ ಅನುಷ್ಠಾನಿಸಿರುವ ಹಾಲು ಪ್ರೋತ್ಸಾಹಧನ ಯೋಜನೆಯ ಮೌಲ್ಯ ಮಾಪನವನ್ನು ಕೈಗೊಳ್ಳಲು ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರ (ಕಮೌಪ್ರಾ) ದಿಂದ ಕಾರ್ಯಾದೇಶ ನೀಡಲಾಗಿರುತ್ತದೆ.

ಕರ್ನಾಟಕ ಸರ್ಕಾರವು ದಿನಾಂಕ: 08-09-2008ರ ಆದೇಶದಲ್ಲಿ ಗ್ರಾಮೀಣ ಭಾಗದಲ್ಲಿರುವ ಹಾಲು ಉತ್ಪಾದಕರ ಸಂಘಗಳಿಗೆ (ಎಂಪಿಸಿಎಸ್) ಹಾಲನ್ನು ಪೂರೈಸುವ ರೈತರಿಗೆ ಪ್ರತಿ ಲೀಟರ್ ಹಾಲಿಗೆ ರೂ. 2.00 ರಂತೆ ಪಾವತಿಸಲು "ಹಾಲು ಪ್ರೋತ್ಸಾಹಧನ ಯೋಜನೆ"ಯನ್ನು ಜಾರಿಗೆ ತಂದಿರುತ್ತದೆ.

ದಿನಾಂಕ:09-09-2008ರಿಂದ ಈ ಯೋಜನೆಯು ಜಾರಿಯಲ್ಲಿದ್ದು 2013-14ನೇ ಸಾಲಿನಲ್ಲಿ ದಿನಾಂಕ: 14-05-2013ರಿಂದ ಜಾರಿಗೆ ಬರುವಂತೆ ರೂ.2.00ರ ಪ್ರೋತ್ಸಾಹಧನವನ್ನು ರೂ.4.00ಕ್ಕೆ ಪರಿಷ್ಕರಿಸಿರುತ್ತದೆ. ಮುಖ್ಯವಾಗಿ ಸಹಕಾರಿ ಕ್ಷೇತ್ರದಲ್ಲಿ ಹೈನುಗಾರಿಕಾ ಚಟುವಟಿಕೆಯನ್ನು ಪ್ರೋತ್ಸಾಹಿಸಲು ಈ ದರ ಪರಿಷ್ಕರಣೆಯನ್ನು ಮಾಡಲಾಗಿರುತ್ತದೆ. 2012-13ರ ವರ್ಷಾಂತ್ಯಕ್ಕೆ ಇಲಾಖೆಯು ರೂ. 1279.45 ಕೋಟಿ ಹಣವನ್ನು ಖರ್ಚು ಮಾಡಿರುತ್ತದೆ. ರಾಜ್ಯಾದ್ಯಂತ ಸುಮಾರು 19.41 ಲಕ್ಷ ರೈತರು ಯೋಜನೆಯ ಪ್ರತಿಫಲ ಪಡೆದಿರುತ್ತಾರೆ.

## ಯೋಜನೆಯ ಧ್ಯೇಯೋದ್ದೇಶಗಳು

1. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ/ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು/ ಭೂರಹಿತರು, ಮಹಿಳೆಯರು ಮತ್ತು ಸಮಾಜದ ಇತರ ದುರ್ಬಲ ವರ್ಗದ ಜನರು ಹೈನುಗಾರಿಕೆಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.
2. ಗ್ರಾಮೀಣ ಯುವಕರು ಹೈನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸುವುದು ಮತ್ತು ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಮತ್ತು ನಗರ ಪ್ರದೇಶಗಳಿಗೆ ಜೀವನೋಪಾಯಕ್ಕಾಗಿ ವಲಸೆ ಬರುವುದನ್ನು ತಡೆಯುವುದು.
3. ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಉತ್ಪಾದಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವುದು
4. ಆಹಾರ ಭದ್ರತೆಯನ್ನು ಒದಗಿಸಲು ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದು
5. ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ವಲಯಕ್ಕೆ ಬೆಂಬಲ ನೀಡುವುದು ಮತ್ತು ಪ್ರೋತ್ಸಾಹಿಸುವುದು.

ಅನುಮೋದಿತ ಕ್ರಿಯಾ ಯೋಜನೆಯ ಪ್ರಕಾರ, ಪದೋಲ್ಲೇಖಗಳ ಉಲ್ಲೇಖಿತ ನಿಯಮಗಳಲ್ಲಿ ತಿಳಿಸಲಾಗಿರುವ ಅಂಶಗಳಿಗೆ ಬದ್ಧರಾಗಿ ಅಧ್ಯಯನವನ್ನು ನಡೆಸಲಾಗಿರುತ್ತದೆ.

## ಮಾದರಿಗಳ ವಿನ್ಯಾಸ ಮತ್ತು ವಿಧಾನ

- ರಾಜ್ಯದಲ್ಲಿ 14 ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳಿವೆ (ಡಿಎಂಯು) ಹೊಸದಾಗಿ "ಚಾಮರಾಜನಗರ ಡಿಎಂಯು" (1,ಏಪ್ರಿಲ್,2015ರಂದು ಸ್ಥಾಪಿಸಲ್ಪಟ್ಟಿದ್ದು) ಮೌಲ್ಯ ಮಾಪನ ಅಧ್ಯಯನಕ್ಕೆ ಒಳಪಡಿಸಲಾಗಿರುತ್ತದೆ.
- ಕಾರ್ಯನಿರತ ಎಂಪಿಸಿಎಸ್ ಗಳಿಲ್ಲದ ಕಾರಣ ಯಾದಗಿರಿ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ 29 ಜಿಲ್ಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

- ಪ್ರತಿ ಜಿಲ್ಲಾ ಹಾಲು ಒಕ್ಕೂಟದಿಂದ ಹಾಲು ಉತ್ಪಾದಕರ ಸಂಘಗಳಿಗೆ ಹತ್ತಿರದ 300 ಹಾಲು ಪೂರೈಕೆದಾರರ ಒಟ್ಟು 13 ಅಧ್ಯಯನ ಸಮೂಹಗಳನ್ನು ಗುರುತಿಸಲಾಯಿತು (ಒಟ್ಟು 3900 ಹಾಲು ಪೂರೈಕೆದಾರರು). ನಿಯಂತ್ರಿತ ಸಮೂಹಗಳಾಗಿ ಖಾಸಗಿ ಹಾಲು ಮಾರಾಟಗಾರರಿಗೆ ಹಾಲು ಪೂರೈಸುವ 325 ರೈತರ ಗುಂಪನ್ನು ಗುರುತಿಸಲಾಯಿತು
- ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಕೇಂದ್ರ ಸ್ಥಾನದ 3 ಹಿರಿಯ ಅಧಿಕಾರಿಗಳು, 21 ಜಿಲ್ಲಾ ಉಪ ನಿರ್ದೇಶಕರುಗಳು ಮತ್ತು 48 ಕ್ಷೇತ್ರ ಮಟ್ಟದ ಪಶುವೈದ್ಯರು, 14 ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮತ್ತು 44 ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿಗಳನ್ನು ಅಧ್ಯಯನದ ಪಾಲುದಾರರೆಂದು ಪರಿಗಣಿಸಲಾಯಿತು.
- ಎಲ್ಲಾ 13 ಹಾಲು ಉತ್ಪಾದಕರ ಒಕ್ಕೂಟಗಳಿಗೆ 11 ತರಬೇತಿ ಹೊಂದಿದ ನಿವೃತ್ತ ಹಿರಿಯ ಪಶುವೈದ್ಯರು ಸಲಹಾ ನೋಡಲ್ ಅಧಿಕಾರಿಗಳಾಗಿದ್ದರು. ಮೌಲ್ಯಮಾಪನ ಅಧ್ಯಯನಕ್ಕೆ ಅಗತ್ಯವಾದ ಮಾರ್ಗಸೂಚಿಗಳು, ಸಂಬಂಧಪಟ್ಟ ಪರಿಕರಗಳು ಮತ್ತು ಉಪಯೋಗಿಸತಕ್ಕ ವಿಧಾನಗಳನ್ನು ನೀಡಲಾಯಿತು. ಅನುಮೋದಿತ ನಮೂನೆಗಳು (1 ರಿಂದ 5) ಮತ್ತು ಹೆಚ್ಚುವರಿಯಾಗಿ ವಾಡಿಕೆಯ ನಮೂನೆಗಳು, ಮಾರ್ಗಸೂಚಿಗಳು ಮತ್ತು ಪರಿಶೀಲನಾ ನಮೂನೆಗಳನ್ನು ಸಹಾ ನೀಡಲಾಯಿತು.
- ಗ್ರಾಮೀಣ ಪ್ರದೇಶಗಳಲ್ಲಿ ಅಧ್ಯಯನ ಸಂಬಂಧಿತ ಅಂಕಿಅಂಶ ಮತ್ತು ಮಾಹಿತಿಯನ್ನು ಸಂಗ್ರಹಿಸಲು 38 ಮೌಲ್ಯಮಾಪಕರು ನೋಡಲ್ ಅಧಿಕಾರಿಗಳಿಂದ ಆಯ್ಕೆಗೊಂಡು ತರಬೇತಿ ಹೊಂದಿರುತ್ತಾರೆ.
- ನಿಗದಿತ ಸಮಯಾವಳಿ ಮತ್ತು ಕಾರ್ಯತಂತ್ರದಂತೆ 83 ಅಧಿಕಾರಿಗಳು, 44 ಹಾಲು ಉತ್ಪಾದಕರ ಸಂಘಗಳ ಕಾರ್ಯದರ್ಶಿಗಳು ಮತ್ತು 4225 ಹಾಲು ಪೂರೈಕೆದಾರರನ್ನು ( ಅಧ್ಯಯನ ಸಮೂಹದ 3900 ಮತ್ತು ನಿಯಂತ್ರಿತ ಸಮೂಹದ 325 ) ಕನ್ನಡ ಭಾಷೆಯಲ್ಲಿದ್ದ ಪ್ರಶ್ನಾವಳಿಗಳನ್ನು ಉಪಯೋಗಿಸಿ ಸಂದರ್ಶಿಸಲಾಯಿತು.
- ಸದಸ್ಯರ ತಂಡವು ಅಂಕಿಅಂಶ ಮತ್ತು ಮಾಹಿತಿ ಸಂಗ್ರಹಣೆ ಕಾರ್ಯದ ನಿಗಾವಣೆ ತಂಡದ ಸದಸ್ಯರಿಗೆ ವಹಿಸಿತ್ತು. ಅಧ್ಯಯನ ಸಮೂಹದ ಗ್ರಾಮಕ್ಕೆ ಭೇಟಿ ನೀಡಿ, ಸತ್ಯಾಂಶದ ಪರಿಶೀಲನೆಯನ್ನು ಕೂಡ ಭದ್ರತೆ ಹೊಂದಿದ ತಂಡ ಮಾಡಿತು.
- ಎಲ್ಲಾ ಪಾಲುದಾರರಿಂದ ಅಗತ್ಯವಾದ ಪ್ರಾಥಮಿಕ ಮತ್ತು ಎರಡನೇ ಹಂತದ ಕ್ಷೇತ್ರ ಅಂಕಿ ಅಂಶ ಮತ್ತು ಮಾಹಿತಿಯನ್ನು ಸಮರ್ಥವಾಗಿ ಸಂಗ್ರಹಿಸಲಾಯಿತು. ಮುಂದುವರಿದು, ಅಂಕಿಅಂಶವನ್ನು ವಿಶ್ಲೇಷಿಸಿ ಶೋಧಾಂಶಗಳ ಮೇಲೆ ನಿರ್ಣಯಗಳನ್ನು ಮಾಡಲಾಯಿತು.

## ಪ್ರೋತ್ಸಾಹಧನ ಬಿಡುಗಡೆ ಮತ್ತು ವಿತರಣಾ ವ್ಯವಸ್ಥೆ

- ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಆಧರಿಸಿ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಮೂಲಕ ಅಧ್ಯಯನದ ಅವಧಿಯಲ್ಲಿ ಎಲ್ಲಾ 13 ಜಿಲ್ಲಾ ಹಾಲು ಒಕ್ಕೂಟಗಳು (2008–13) ಮತ್ತು ಏಪ್ರಿಲ್ 2015ರಿಂದ ಹೊಸದಾಗಿ ಸ್ಥಾಪಿತವಾದ ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟಕ್ಕೆ ಪ್ರೋತ್ಸಾಹಧನವನ್ನು ಪಾವತಿಸಲಾಗಿರುತ್ತದೆ.
- ಪ್ರತಿ ಮಾಹೆಯ ಮೊದಲ ವಾರದಲ್ಲಿ ಜಿಲ್ಲಾ ಹಾಲು ಒಕ್ಕೂಟಗಳು ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಗೆ ಪ್ರೋತ್ಸಾಹಧನದ ಮೊತ್ತಕ್ಕೆ ಬೇಡಿಕೆ ಬಿಲ್ಲುಗಳನ್ನು ಸಲ್ಲಿಸಿರುತ್ತವೆ.

- ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಈ ಬಿಲ್ಲುಗಳನ್ನು ಪರಿಶೀಲಿಸಿ ಕ್ರಮವಹಿಸಿ ಚೆಕ್‌ಗಳ ಮೂಲಕ ಕ್ಲೇಮು ಮಾಡಲಾದ ಮೊತ್ತವನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳ ವ್ಯಾಪ್ತಿಯ ಹಾಲು ಪೂರೈಕೆದಾರರು/ರಾಸುಗಳ ಮಾಲೀಕರಿಗೆ ವಿತರಿಸಲು ಆಯಾ ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ನೀಡಲಾಗಿರುತ್ತದೆ.
- ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಯು ಹಣ ವಿತರಣೆಯ ವಹಿಯನ್ನು ನಿರ್ವಹಿಸಿರುತ್ತಾರೆ.

## ಪದೋಲ್ಲೇಖಗಳ ಆಧಾರದ ಮೇಲೆ, ಶೋಧಗಳು ಮತ್ತು ಚರ್ಚೆ

**1. ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಒಟ್ಟಾರೆ ಕಾರ್ಯನಿರ್ವಹಣೆ**

ಹಾಲು ಪ್ರೋತ್ಸಾಹಧನ ಯೋಜನೆಯಡಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯು ಶೇ.83 ರಿಂದ 98ರಷ್ಟು ವೆಚ್ಚ ಮಾಡಿರುತ್ತದೆ. ಇದರಿಂದಾಗಿ ಗ್ರಾಮೀಣ ಹೈನುಗಾರರಿಂದ ಸಂಗ್ರಹಿಸಿದ ಹಾಲಿನ ಪ್ರಮಾಣವು 7 ವರ್ಷಗಳ ಅವಧಿಯಲ್ಲಿ ಶೇ.11 ರಿಂದ 2016ರ ಹೊತ್ತಿಗೆ ಶೇ. 39ಕ್ಕೆ ಹೆಚ್ಚಾಗಿರುವುದನ್ನು ಗಮನಿಸಲಾಯಿತು. ಈ ಹೆಚ್ಚಳವು ಹಾಲು ಪೂರೈಕೆದಾರರು ಕ್ರಮೇಣ ಖಾಸಗಿ ಹಾಲು ಸಂಗ್ರಾಹಕರಿಂದ ಸುರಕ್ಷಿತ ಸಹಕಾರಿ ಕ್ಷೇತ್ರಕ್ಕೆ ಬದಲಾದ್ದರಿಂದ ಆಗಿರುತ್ತದೆ. ಈ ಬೆಳವಣಿಗೆಯು ಸಂಪೂರ್ಣವಾಗಿ ಹಾಲು ಪ್ರೋತ್ಸಾಹಧನ ಯೋಜನೆಯ ಧನಾತ್ಮಕ ಪರಿಣಾಮವಾಗಿರುತ್ತದೆ. ರಾಜ್ಯದ ಸಹಕಾರಿ ಸಂಸ್ಥೆಗಳಿಗೆ ಇದು ದೊಡ್ಡ ಬೆಂಬಲವಾಗಿರುತ್ತದೆ. ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಒಟ್ಟಾರೆ ಕಾರ್ಯನಿರ್ವಹಣೆಯು ಪ್ರಭಾವಶೀಲವಾಗಿದ್ದು **ಅತ್ಯುತ್ತಮವೆಂದು** ಶ್ರೇಯಾಂಕ ನೀಡಬಹುದಾಗಿದೆ. ಹಾಲು ಉತ್ಪಾದಕರ ಒಕ್ಕೂಟಗಳು ನಿರ್ವಹಿಸಿದ ಪಾತ್ರವೂ **ಅಧಿಕ ತೃಪ್ತಿಕರವಾಗಿರುತ್ತದೆ**. ಭವಿಷ್ಯತ್ತಿನಲ್ಲಿ ಹೆಚ್ಚಿನ ಸಾಧನೆಗೈಯಲು ಇದೊಂದು ಹೆಗ್ಗುರುತಾಗಿರುತ್ತದೆ.

**2. ರಾಜ್ಯ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಪ್ರೋತ್ಸಾಹಧನದ ಮೊತ್ತವು ಹಾಲು ಪೂರೈಕೆದಾರನನ್ನು ತಲುಪಲು ತೆಗೆದುಕೊಂಡ ಸರಾಸರಿ ಸಮಯಾವಧಿ**

- ಸರಾಸರಿ ಸಮಯವು 2008-09ರಲ್ಲಿ 80 ದಿನಗಳಾಗಿತ್ತು ಮತ್ತು 2013-14ರಲ್ಲಿ 104 ದಿನಗಳಾಗಿತ್ತು. ಇದನ್ನು ವಿಳಂಬ ಮತ್ತು ಧೀರ್ಘಾವಧಿ ಎಂದು ಪರಿಗಣಿಸಿದೆ.
- ಹಲವು ಸಂದರ್ಭಗಳಲ್ಲಿ ಈ ಸಮಯವು 3-6 ತಿಂಗಳಷ್ಟು ವಿಳಂಬವಾಗಿತ್ತೆಂದು ಬಹುತೇಕ ಪಾಲುದಾರರು ವರದಿಸಿರುತ್ತಾರೆ.
- ಈ ವಿಳಂಬವು ವಿವಿಧ ಹಂತಗಳಲ್ಲಿ ಬಿಲ್ಲುಗಳನ್ನು ಪುರಸ್ಕರಿವುದು ಮತ್ತು ಅನುದಾನದ ಲಭ್ಯತೆಯ ಮೇಲೆ ಉಂಟಾಗಿರಬಹುದು.

**3. ಬಿಡುಗಡೆಯಾದ ಹಣವು ಸಂಪೂರ್ಣವಾಗಿ ರೈತರಿಗೆ ತಲುಪುತ್ತಿದೆಯೇ ಅಥವಾ ವಿತರಣೆಯ ಹಂತದಲ್ಲಿ ಯಾವುದೇ ಅನೈಚ್ಛಿಕ/ಅನ್ಯಾಯಿಕ ಕಡಿತಗಳನ್ನು ಮಾಡಲಾಗುತ್ತಿದೆಯೇ?**

- ನ್ಯಾಯಯುತ ಕ್ಲೇಮುಗಳು ಸಂಪೂರ್ಣವಾಗಿ ಪಾವತಿಯಾಗಿರುತ್ತವೆ. ಅನ್ಯಾಯಿಕ ಮತ್ತು ಅನಧಿಕೃತ ಕಡಿತಗಳನ್ನು ಮಾಡಿರುವುದಿಲ್ಲವೆಂದು ಫಲಿತಾಂಶಗಳು ಸೂಚಿಸಿರುತ್ತವೆ.
- 2008-09 ರಿಂದ 2012-13ರ ವರೆಗಿನ ಪ್ರೋತ್ಸಾಹಧನವು ಪೂರ್ಣವಾಗಿ ಆಯಾ ಹಾಲು ಪೂರೈಕೆದಾರನಿಗೆ ತಲುಪಿದೆಯೆಂದು ಎಲ್ಲಾ 13 ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು ವರದಿಸಿರುತ್ತಾರೆ.

- ಏಪ್ರಿಲ್, 2015ರಿಂದ ಯಾವುದೇ ಸಮಸ್ಯೆಯಿಲ್ಲದೆ. ರೈತರ ಬ್ಯಾಂಕ್ ಖಾತೆಗೆ ನೇರವಾಗಿ ವಿದ್ಯುನ್ಮಾನ ತೀರುವಳಿ ಪದ್ಧತಿಯ ಮೂಲಕ ಪ್ರೋತ್ಸಾಹಧನವನ್ನು ವರ್ಗಾಯಿಸಲಾಗುತ್ತಿದೆಯೆಂದು ವರದಿಸಲಾಗಿದೆ.

**4. ಹಾಲು ಉತ್ಪಾದನೆ, ಗುಣಮಟ್ಟದ ಹೈನುರಾಸುಗಳ ಸಂಖ್ಯೆ ಮತ್ತು ನಗರ ಪ್ರದೇಶಗಳಿಗೆ ಗ್ರಾಮೀಣ ಯುವಕರ ವಲಸೆಯನ್ನು ಕಡಿಮೆ ಮಾಡುವಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಭಾವ**

**ಅ. ಹಾಲು ಉತ್ಪಾದನೆ**

- ಅಧ್ಯಯನ ಸಮೂಹದಲ್ಲಿ ಹಾಲು ಉತ್ಪಾದನೆಯ ಹೆಚ್ಚಳವನ್ನು ಪರೋಕ್ಷವಾಗಿ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪೂರೈಕೆಯಾದ ಹಾಲಿನ ಪ್ರಮಾಣದ ಆಧಾರದಲ್ಲಿ ಅಳೆಯಲಾಗಿದೆ. ಹಾಲಿನ ಉತ್ಪಾದನೆಯು ಶೇ.8.16 ರಿಂದ ಶೇ.70ರಷ್ಟಿದ್ದು ನಿಯಂತ್ರಿತ ಮಾದರಿಗೆ ಹೋಲಿಸಿದಾಗ ಗಣನೀಯವಾಗಿರುತ್ತದೆ.
- ಒಟ್ಟು ಉತ್ಪಾದನೆಯ ಸಂಚಿತ ಬೆಳವಣಿಗೆಯು 2012-13 ರಲ್ಲಿ ಶೇ.32.7 ಮತ್ತು 2014-15ರಲ್ಲಿ ಶೇ. 42.24ರಷ್ಟಿತ್ತೆಂದು ರಾಜ್ಯ ಮಟ್ಟದ ಮಾದರಿ ಸಮೀಕ್ಷಾ ಫಲಿತಾಂಶಗಳು ಸೂಚಿಸುತ್ತವೆ.
- ಒಟ್ಟಾರೆಯಾಗಿ ಹಾಲು ಪ್ರೋತ್ಸಾಹಧನ ಯೋಜನೆಯು ರಾಜ್ಯದ ಹಾಲು ಉತ್ಪಾದನೆಯ ಮೇಲೆ ಅತಿ ಗಣನೀಯ ಧನಾತ್ಮಕ ಪ್ರಭಾವವನ್ನು ಬೀರಿರುತ್ತದೆ.

**ಆ. ಹೈನು ರಾಸುಗಳ ಸಂಖ್ಯೆಯ ಮೇಲೆ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಭಾವ**

ಹೈನೋತ್ಪಾದಕ ಮಿಶ್ರತಳಿ ಹಸುಗಳು ಮತ್ತು ಎಮ್ಮೆಗಳ ಸಂಖ್ಯೆಯಲ್ಲಿ ಶೇ. 2.18 ರಿಂದ ಶೇ.9.52 ರಷ್ಟು ಧನಾತ್ಮಕ ಬೆಳವಣಿಗೆಯಾಗಿರುವುದನ್ನು ಮತ್ತು ನಿಯಂತ್ರಿತ ಮಾದರಿಗೆ ಹೋಲಿಸಿದಾಗ ಇದು ಗಣನೀಯವಾಗಿರುವುದನ್ನು ಅಧ್ಯಯನ ಸಮೂಹದಲ್ಲಿ ಸಂಗ್ರಹಿಸಿದ ದತ್ತಾಂಶದ ವಿಶ್ಲೇಷಣೆಯು ತೋರಿಸಿರುತ್ತದೆ. ಹೈನು ರಾಸುಗಳ ಗುಣಮಟ್ಟದಲ್ಲಿನ ಹೆಚ್ಚಳವು ಮುಖ್ಯವಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸಿದ ಹಾಲು ಪ್ರೋತ್ಸಾಧನ ಯೋಜನೆಯಿಂದ ಉಂಟಾಗಿರುವುದನ್ನು ಗಮನಿಸಲಾಗಿದೆ.

**ಇ. ಹಾಲು ಪ್ರೋತ್ಸಾಹಧನ ಯೋಜನೆಯಿಂದ ಇತರೆ ಸಂಬಂಧಿತ ಅಂಶಗಳ ಮೇಲೆ ಉಂಟಾದ ಪ್ರಭಾವ**

- ಜಿಲ್ಲಾ ಹಾಲು ಒಕ್ಕೂಟಗಳಿಂದ ಪಡೆದ ಅಂಕಿಅಂಶಗಳು 2008-13ರ ಅಧ್ಯಯನಾವಧಿಯಲ್ಲಿ ಎಲ್ಲಾ 13 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಕಾರ್ಯನಿರತ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆಯಲ್ಲಿ (ಶೇ.26.62), ಮಹಿಳಾ ಹಾಲು ಪೂರೈಕೆದಾರರು (ಶೇ.30.8), ಪರಿಶಿಷ್ಟ ಜಾತಿ ಹಾಲು ಪೂರೈಕೆದಾರರು (ಶೇ.28.44), ಪರಿಶಿಷ್ಟ ಪಂಗಡದ ಹಾಲು ಪೂರೈಕೆದಾರರು (ಶೇ. 37.19), ಒಟ್ಟು ಹಾಲು ಉತ್ಪಾದಕರು (ಶೇ.24.31) ಮತ್ತು ಒಟ್ಟು ಹಾಲು ಖರೀದಿ (ಶೇ.120.48), ಮಹಿಳೆಯರಿಂದ (ಶೇ.117.18), ಪ.ಜಾ. (ಶೇ.137.32) ಮತ್ತು ಪ.ಪಂ. (ಶೇ.131.16) ಗಣನೀಯ ಸರಾಸರಿ ಹೆಚ್ಚಳವಾಗಿರುವುದನ್ನು ತೋರಿಸಿಕೊಟ್ಟಿವೆ.
- ಎಲ್ಲಾ 9 ಸೂಚಕಗಳಲ್ಲಿ ಧನಾತ್ಮಕ ಬೆಳವಣಿಗೆಯು ಹಾಲು ಉತ್ಪಾದಕರು/ಹೈನುಗಾರರು ಖಾಸಗಿ ಹಾಲು ಸಂಗ್ರಾಹಕರಿಂದ ಹಾಲು ಉತ್ಪಾದಕರ ಸಹಕಾರಿ ಸಂಘಗಳತ್ತ ಬಂದ ಕಾರಣ ಮತ್ತು ಪ್ರತಿ ಕುಟುಂಬವಾರು ಹಾಲಿನ ಉತ್ಪಾದನೆ ಹಾಗೂ ಉತ್ಪಾದಕತೆಯಲ್ಲಿ ಉಂಟಾದ ಹೆಚ್ಚಳದಿಂದಾಗಿರುತ್ತದೆ. ಈ ಪರಿಣಾಮವು ಸರ್ಕಾರದಿಂದ ಹಾಲು ಪ್ರೋತ್ಸಾಹಧನ ಯೋಜನೆಯಡಿ ನೀಡಲ್ಪಡುತ್ತಿರುವ ಪ್ರೋತ್ಸಾಹಧನದ ಪ್ರಭಾವ ಮತ್ತು ಪ್ರೇರಣೆಯಿಂದಾಗಿದೆ ಎಂಬುದನ್ನು ಗಮನಿಸಲಾಗಿದೆ.

**ಈ. ಅಧ್ಯಯನ ಮತ್ತು ನಿಯಂತ್ರಿತ ಸಮೂಹದಲ್ಲಿ ಗ್ರಾಮೀಣ ಯುವಕರ ವಲಸೆ**

- ಹಲವಾರು ಕಾರಣಗಳಿಂದ ನಗರಗಳಿಗೆ ಗ್ರಾಮೀಣ ಯುವಕರು ವಲಸೆ ಬರುತ್ತಾರೆ. ಆದರೆ, ಅಧ್ಯಯನದ ಗ್ರಾಮಗಳಲ್ಲಿ ಕೆಲವೇ ಗ್ರಾಮೀಣ ಯುವಕರು ಹೈನುಗಾರಿಕೆಯನ್ನು ಕೈಗೊಂಡಿರುವುದಾಗಿ ಅಂಕಿಅಂಶಗಳು ತಿಳಿಸಿಕೊಟ್ಟಿವೆ.
- ಹೈನುಗಾರಿಕೆಯು ನಿರಂತರ ಆದಾಯ ತರುವುದರಿಂದ ಆರ್ಥಿಕ ಸ್ಥಿತಿ ಮತ್ತು ಅವಕಾಶಗಳನ್ನಾಧರಿಸಿ ಕೆಲ ಸಂಖ್ಯೆಯಲ್ಲಿ ಯುವಕರು ವಿಶೇಷವಾಗಿ ಶಾಲೆ ತೊರೆದವರು ಇಲ್ಲವೆ ನಿರುದ್ಯೋಗಿಗಳು ಹೈನುಗಾರಿಕೆಯನ್ನು ಕೈಗೊಂಡಿರುತ್ತಾರೆ.
- ಅಂಕಿಅಂಶಗಳ ವಿಶ್ಲೇಷಣೆಯೂ ಇದನ್ನು ದೃಢಪಡಿಸಿರುತ್ತದೆ.
- ಯುವಕರ ವಲಸೆಯ ಮೇಲೆ ಹಾಲು ಪ್ರೋತ್ಸಾಹಧನ ಯೋಜನೆಯ ಯಾವುದೇ ಪ್ರಭಾವ ಇಲ್ಲವೆಂದು ಅಂಕಿಅಂಶಗಳ ವಿಶ್ಲೇಷಣೆಯು ತಿಳಿಸಿರುತ್ತದೆ. ಗ್ರಾಮಗಳಿಗೆ ಭೇಟಿ ನೀಡಿ ಸತ್ಯಾಂಶವನ್ನು ಪರಿಶೀಲಿಸಿದಾಗ ಇದು ದೃಢಪಟ್ಟಿರುತ್ತದೆ.

**5. ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹಧನ ದರ ರೂ. 2.00(ಹಿಂದಿನ) ಅಥವಾ ರೂ.4.00 (ಪ್ರಸ್ತುತ), ಪರಿಷ್ಕರಣೆ ಮತ್ತು ಪರಿಷ್ಕರಣೆಗೆ ಕಾರಣಗಳ ಬಗ್ಗೆ ಪಾಲುದಾರರ ಪ್ರತಿಕ್ರಿಯೆ**

- ಬಹುತೇಕ ಜನರು ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹಧನದ ದರ ಕಡಿಮೆಯೆಂದು ಪ್ರತಿಕ್ರಿಯೆ ನೀಡಿರುತ್ತಾರೆ.
- ಆಹಾರದ ವೆಚ್ಚ ಮತ್ತು ಹೈನು ರಾಸುಗಳ ಒಟ್ಟು ನಿರ್ವಹಣಾ ವೆಚ್ಚದಲ್ಲಿ ಏರಿಕೆಯಾಗಿರುವುದರಿಂದ ಹೆಚ್ಚಿನ ದರದಲ್ಲಿ ಪ್ರೋತ್ಸಾಹಧನ ಬೇಕಾಗಿರುತ್ತದೆ. ಇದರಿಂದಾಗಿ, ಒಂದು ಲೀಟರ್ ಹಾಲಿನ ಉತ್ಪಾದನಾ ದರಕೂಡ ಗುರುತರವಾಗಿ ಹೆಚ್ಚಿದೆ.
- ಪ್ರೋತ್ಸಾಹಧನ ಹೆಚ್ಚಳಕ್ಕೆ ರೈತರ ಬೇಡಿಕೆಯು ವಿಶ್ವಾಸನೀಯ ಮತ್ತು ಸಕಾರಣವೆಂದು ಅಂಕಿಅಂಶಗಳು ತೋರಿಸಿರುತ್ತವೆ.
- ಸಹಕಾರಿ ವಲಯದಲ್ಲಿ ಹೈನು ಅಭಿವೃದ್ಧಿ ಚಟುವಟಿಕೆಗಳು ಕಡಿಮೆಯಿರುವ ಜಿಲ್ಲೆಗಳಿಗೆ ಇತರ ರೈತರೊಂದಿಗೆ ಸಮಾನತೆ ಸಾಧಿಸಲು ಬೆಂಬಲವಾಗಿ ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹಧನದ ದರವನ್ನು ಸರ್ಕಾರವು ರೂ.6.00ಕ್ಕೆ ಪರಿಷ್ಕರಿಸಲು ಮಾದರಿ ಅಂಕ ಪಟ್ಟಿ ವಿಧಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ಸಲಹೆ ನೀಡಲಾಗಿದೆ.
- ಪ್ರಸ್ತಾಪಿಸಿರುವ ಈ ವಿಧಾನವನ್ನು ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಪ್ರತಿ ಲೀಟರ್ ಹಾಲಿನ ಉತ್ಪಾದನಾ ವೆಚ್ಚ, ಹಾಲಿನ ಖರೀದಿ ದರ, ಹಾಲು ಪೂರೈಕೆದಾರರ ಸಂಖ್ಯೆ ಮತ್ತು ಹಾಲು ಉತ್ಪಾದಕ ಹೈನು ರಾಸುಗಳ ಸಂಖ್ಯೆಯ ಆಧಾರದಲ್ಲಿ ಅಸ್ಥಿರ ಪ್ರೋತ್ಸಾಹಧನದ ದರಗಳನ್ನು ನಿರ್ಧರಿಸಲು ಬಳಸಬಹುದಾಗಿರುತ್ತದೆ.

**6. ರೈತರು ಮತ್ತು ಭೂರಹಿತರ ಸಾಮಾಜಿಕ-ಆರ್ಥಿಕ ಸ್ಥಿತಿಯ ಮೇಲೆ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಭಾವ**

- 2008-13ರ ಅವಧಿಯಲ್ಲಿ ಅಧ್ಯಯನ ಕ್ಷೇತ್ರ ವ್ಯಾಪ್ತಿಯಲ್ಲಿ ರೈತರ ವೈಯಕ್ತಿಕ ವಾರ್ಷಿಕ ಆದಾಯದಲ್ಲಿ ಶೇ.7 ರಿಂದ ಶೇ.20ರಷ್ಟು ಬೆಳವಣಿಗೆಯಾಗಿರುವುದಾಗಿ ಅಂಕಿಅಂಶಗಳ ವಿಶ್ಲೇಷಣೆಯು ಸೂಚಿಸಿರುತ್ತದೆ. ಸಂಚಿತ ಬೆಳವಣಿಗೆಯು ಶೆ.94ರಷ್ಟಿರುವುದನ್ನು ಗಮನಿಸಲಾಗಿದೆ.
- ಆದಾಯವನ್ನು ತೊಡಗಿಸಿರುವ ರೀತಿಗೆ ಸಂಬಂಧಿಸಿದಂತೆ ಶೇ.29 ರಿಂದ ಶೇ.36 ರೈತರು ಗೃಹೋಪಯೋಗಿ ವಸ್ತುಗಳಾದ ಟಿವಿ, ಫ್ರಿಡ್ಜ್ ಮತ್ತಿತರ ವಸ್ತುಗಳನ್ನು ಖರೀದಿಸಿದ್ದಾರೆ. ಬಹುತೇಕ ಹೈನುಗಾರರು (ಶೇ.62.4) ಬ್ಯಾಂಕ್ ಉಳಿತಾಯ ಖಾತೆಗಳಲ್ಲಿ ತೊಡಗಿಸಿದ್ದಾರೆ.

- ಶೇ. 13.4 ರಷ್ಟು ರೈತರು ಭೂಮಿಯನ್ನು ಸಹ ಖರೀದಿಸಿದ್ದಾರೆ.
- ಶೇ.9ರಷ್ಟು ರೈತರು ದನಗಳ ಕೊಟ್ಟಿಗೆಯ ದುರಸ್ತಿ ಮಾಡಲು ಆದಾಯವನ್ನು ತೊಡಗಿಸಿದ್ದಾರೆ.
- ಹೆಚ್ಚುವರಿ ಆದಾಯವನ್ನು ಶೇ.67ರಷ್ಟು ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಉಪಯೋಗಿಸಿದ್ದಾರೆ.
- ಗ್ರಾಮ ಪಂಚಾಯತಿಯ ಸದಸ್ಯರಾಗಿ, ಹಾಲು ಉತ್ಪಾದಕರ ಸಹಕಾರಿ ಸಂಘಗಳ ನಿರ್ದೇಶಕರಾಗಿ ಮತ್ತು ಸ್ಥಳಿಯ ನಾಟಕ ಹಾಗೂ ಹಬ್ಬಗಳಲ್ಲಿ ಭಾಗವಹಿಸುವ ಮೂಲಕ ಬಹುತೇಕ ರೈತರ (ಶೇ.88-95) ಸಾಮಾಜಿಕ ಸ್ಥಿತಿಯು ಸುಧಾರಿಸಿರುತ್ತದೆ.
- ಆದ್ದರಿಂದ, ಫಲಿತಾಂಶಗಳು ಹಾಲು ಪ್ರೋತ್ಸಾಹಧನ ಯೋಜನೆಯು ಸಹಕಾರಿ ವಲಯದಲ್ಲಿ ನಿಯಂತ್ರಿತ ಸಮೂಹದ ರೈತರಿಗೆ ಹೋಲಿಸಿದಾಗ ಸಾಮಾಜಿಕ – ಆರ್ಥಿಕ ಸ್ಥಿತಿಯ ಮೇಲೆ ಧನಾತ್ಮಕ ಪ್ರಭಾವ ಬೀರಿದೆಯೆಂದು ಸೂಚಿಸುತ್ತವೆ.

7. **ಆಹಾರ ನೀಡಿಕೆ, ಲಸಿಕೆ ಹಾಕಿಸುವುದು, ಜಂತು ನಿವಾರಣೆ, ಕರುಗಳ ಪಾಲನೆ ಮತ್ತು ಆಹಾರದ ಸಮಂಜಸ ಬಳಕೆಯ ನಿರ್ವಹಣಾ ಪದ್ಧತಿಗಳ ತಿಳುವಳಿಕೆ ಕುರಿತು ಸುಧಾರಣೆಯ ಮೇಲೆ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಭಾವ**

- ಅಧ್ಯಯನ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯು ರೈತರ ಹಂತದಲ್ಲಿ ಹೈನು ಕ್ಷೇತ್ರ ನಿರ್ವಹಣೆಯಲ್ಲಿರುವ ತಿಳುವಳಿಕೆಯನ್ನು ಸುಧಾರಿಸಲು ಗಣನೀಯ ಧನಾತ್ಮಕ ಪ್ರಭಾವವನ್ನು ಬೀರಿದೆ.
- ಈ ಸುಧಾರಣೆಯು ಜಿಲ್ಲಾ ಹಾಲು ಒಕ್ಕೂಟಗಳು ಆಯೋಜಿಸಿದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳಾದ ಯಶಸ್ವೀ ರೈತರ ಭೇಟಿ, ಅಲ್ಪಾವಧಿ ತರಬೇತಿಗಳು ಹಾಗೂ ಸ್ಥಳೀಯ ಪಶುವೈದ್ಯರು ಚಿಕಿತ್ಸೆ ನೀಡುವಾಗ ಸಮಾಲೋಚಿಸಿದ ಪರಿಣಾಮವಾಗಿರುತ್ತದೆ.
- ಗ್ರಾಮ ಭೇಟಿಯ ವೇಳೆ ನೈಜ ಸ್ಥಿತಿಯನ್ನು ಪರಿಶೀಲಿಸಲಾಗಿ ಇದು ದೃಢಪಟ್ಟಿರುತ್ತದೆ.

8. **ಹೈನುಗಾರಿಕಾ ಚಟುವಟಿಕೆಗಳನ್ನು ಕೈಗೊಳ್ಳಲು ಹಾಲು ಪ್ರೋತ್ಸಾಹಧನ ಯೋಜನೆಯೊಂದರಿಂದಲೇ ಗ್ರಾಮೀಣ ಯುವಕರ ಮೇಲಾದ ಪ್ರಭಾವ**

- ಹಾಲಿನ ಮಾರಾಟದಿಂದ ಆದಾಯ ಹೆಚ್ಚಳವಾದುದರಿಂದ ಕೆಲವು ಯುವಕರು ಹೈನುಗಾರಿಕೆಯನ್ನು ಮುಂದುವರಿಸಲು ಹಾಲು ಪ್ರೋತ್ಸಾಹಧನ ಯೋಜನೆಯು ಪ್ರಭಾವ ಬೀರಿರಬಹುದು.
- ಪ್ರೋತ್ಸಾಹಧನದಿಂದಾಗಿಯೇ ಯುವಕರು ಹೈನುಗಾರಿಕೆಯನ್ನು ಕೈಗೊಳ್ಳುವಂತೆ ಈ ಯೋಜನೆಯು ಪ್ರಭಾವ ಬೀರಿದೆಯಂದು ಕಂಡುಬರುವುದಿಲ್ಲ.
- ಅಧ್ಯಯನ ಕ್ಷೇತ್ರ ಮತ್ತು ನಿಯಂತ್ರಿತ ಕ್ಷೇತ್ರದಲ್ಲಿ ಅಂತಹುದ್ದೇನು ವ್ಯತ್ಯಾಸವಿರುವಂತೆ ಅಂಕಿಅಂಶಗಳ ವಿಶ್ಲೇಷಣೆಯು ತೋರಿಸಿರುವುದಿಲ್ಲ.

9. **ಗ್ರಾಮೀಣ ಪ್ರದೇಶಗಳಲ್ಲಿ ಹೈನುಗಾರಿಕೆಯ ಲಾಭದಾಯಕತೆಯ ಮೇಲೆ ಹೈನು ಪ್ರೋತ್ಸಾಹಧನ ಯೋಜನೆಯ ಪ್ರಭಾವ**

- 2008-13ರ ಅವಧಿಯಲ್ಲಿ ರೈತರ ವೈಯಕ್ತಿಕ ವಾರ್ಷಿಕ ಆದಾಯವು ಶೇ.7ರಿಂದ ಶೇ.20ರಷ್ಟು ಹೆಚ್ಚಳವಾಗಿದೆ ಎಂದು ಅಧ್ಯಯನ ಗೊಂಚಲುಗಳ ಅಂಕಿಅಂಶಗಳ ವಿಶ್ಲೇಷಣೆಯು ಸೂಚಿಸಿರುತ್ತದೆ.
- ಸರ್ಕಾರವು ಪ್ರೋತ್ಸಾಹಧನ ಪಾವತಿಸಿದ್ದರಿಂದಾಗಿ ರೈತರ ಆದಾಯವು ಏರಿಕೆಯಾಗಿರುತ್ತದೆ. ರೈತರು ತಾವು ಪಡೆದ ಹೆಚ್ಚುವರಿ ಪ್ರೋತ್ಸಾಹಧನವನ್ನು ಲಾಭವೆಂದು ಆಲೋಚಿಸಿದ್ದಾರೆ.

- ಅದಾಗಿಯು, ಆದಾಯದಲ್ಲಿನ ಶೇಕಡ ಧನಾತ್ಮಕ ಬೆಳವಣಿಗೆಯು, ನಿಯಂತ್ರಿತ ಸಮೂಹದ, ಹಾಲು ಪ್ರೋತ್ಸಾಹಧನ ಯೋಜನೆ ವಂಚಿತರಾದ ರೈತರಿಗೆ ಹೋಲಿಸಿದರೆ ಪ್ರಭಾವವು ಗಣನೀಯವಾಗಿರುವುದನ್ನು ಗಮನಿಸಿದೆ. ಇದು ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ಬಹು ಮುಖ್ಯ ಧನಾತ್ಮಕ ಪ್ರಭಾವವಾಗಿರುತ್ತದೆ.

**೧೦. ಯಾವುದೇ ಹಂತದಲ್ಲಿ ಹೆಚ್ಚು ದರ ವಿಧಿಸುವುದು ಮತ್ತು ಅನ್ಯಾಯದ ಕ್ಲೇಮು ತಡೆಯಲು ನಿಗಾವಣೆ ಬಗ್ಗೆ ಅಂಕಿ ಅಂಶ ಮತ್ತು ಮಾಹಿತಿ**

- ಅಧಿಕ ದರ ವಿಧಿಸುವ ಮೂಲಕ ತಾವು ಹೆಚ್ಚು ಹಣ ಪಡೆದಿಲ್ಲವೆಂದು ಅಧ್ಯಯನ ಸಮೂಹದ ವ್ಯಾಪ್ತಿಯ ಬಹತೇಕ (ಶೇ.೯೮) ರೈತರು ವರದಿಮಾಡಿರುತ್ತಾರೆ. ಅದಾಗಿಯು, ಕೆಲವು ಅನ್ಯಾಯದ ಕ್ಲೇಮು ಪ್ರಕರಣಗಳು ವರದಿಯಾಗಿರುತ್ತವೆ.
- ಸಾಮಾನ್ಯವಾಗಿ ಹಾಲು ಒಕ್ಕೂಟದ ವಿಸ್ತರಣಾಧಿಕಾರಿಗಳು, ಸ್ಥಳೀಯ ಅಧಿಕಾರಿಗಳು ಮತ್ತು ಲೆಕ್ಕ ಪರಿಶೋಧಕರು ಕಾಲಾನುಕ್ರಮವಾಗಿ ಲೆಕ್ಕ ಪತ್ರಗಳು ಮತ್ತು ಪಾವತಿಗಳನ್ನು ಪರಿಶೀಲಿಸಿರುತ್ತಾರೆ. ಈ ಉದ್ದೇಶಕ್ಕಾಗಿಯೇ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಿಂದ ರಚಿತವಾದ ತಂಡಗಳು ಒಂದೊಮ್ಮೆ ಕ್ಷೇತ್ರಮಟ್ಟದಲ್ಲಿ ಲೆಕ್ಕ ಪತ್ರಗಳನ್ನು ಪರಿಶೀಲಿಸುತ್ತಿದ್ದಾರೆ.
- ನಿಯತಕಾಲಿಕವಾಗಿ ವೀಡಿಯೊ ಕಾನ್ಫರೆನ್ಸ್ ಮೂಲಕವೂ ಪ್ರಧಾನ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಇವರು ರಾಜ್ಯ ಮಟ್ಟದಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಗತಿಯನ್ನು ಪರಿಶೀಲಿಸುತ್ತಿದ್ದಾರೆ. ಅದಾಗಿಯು, ನಿಯಮಿತವಾಗಿ ಸಭೆಗಳನ್ನು ನಡೆಸುವಂತೆ ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿ ರಚಿಸಿದ ಪರಿಶೀಲನಾ ಸಮಿತಿಗಳಿಗೆ ಸಲಹೆಯನ್ನು ನೀಡಲಾಗಿದೆ.

## ಹಾಲು ಪ್ರೋತ್ಸಾಹಧನ ಸ್ಕೀಂ / ಯೋಜನೆ ಕುರಿತಂತೆ, ಎಲ್ಲ ಪಾಲುದಾರರು ನೀಡಿರುವ ಅಭಿಪ್ರಾಯಗಳು

- ಯೋಜನೆ ಕುರಿತಂತೆ ರೈತರು ಸಂತೋಷವಾಗಿದ್ದಾರೆ.
- ನೀಡುತ್ತಿರುವ ಪ್ರೋತ್ಸಾಹಧನ ಕಡಿಮೆ ಇದ್ದು, ಹೆಚ್ಚಿನ ಪ್ರಮಾಣಕ್ಕೆ ಪರಿಷ್ಕರಿಸಬೇಕು.
- ಪ್ರೋತ್ಸಾಹಧನವನ್ನು ರೈತರಿಗೆ ತಡವಾಗಿ ಪಾವತಿಸುವುದನ್ನು ನಿವಾರಿಸಲು, ಪಾಕ್ಷಿಕವಾಗಿ ಪಾವತಿಸಬೇಕಾದ ಹಾಲಿನ ಬಾಬ್ತಿನೊಂದಿಗೆ ಪ್ರೋತ್ಸಾಹಧನವನ್ನು ಪಾವತಿಸಬೇಕು.
- ಸ್ಕೀಂನ ಧನಾತ್ಮಕ ಪ್ರಭಾವ ಹಾಲಿನ ಉತ್ಪಾದನೆ, ಗುಣಮಟ್ಟದ ಹೈನುಗಳ ಹೆಚ್ಚಳ ಮತ್ತು ನಿರ್ವಹಣೆಯಲ್ಲಾಗಿದೆ.
- ಗ್ರಾಮೀಣ ರೈತರು ಸ್ಕೀಂನಿಂದ ಆಕರ್ಷಿತರಾಗಿ, ಸಹಕಾರಿ ವಲಯದ ಆಸರೆಗೆ, ಹಾಲು ಹಾಕುವವರಾಗಿ, ಹಾಲು ಸರಬರಾಜಿಗೆ ಹಿಂತಿರುಗುತ್ತಿದ್ದಾರೆ.
- ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟಗಳು, ಲಾಭದಾಯಕ ಖರೀದಿದರ ನೀಡುವವರಗೆ, ಹಾಲು ಪ್ರೋತ್ಸಾಹಧನ ಸ್ಕೀಂಅನ್ನು ಮುಂದುವರಿಸ ಬೇಕು.
- ಹಾಲುಹಾಕುವರ ಸಾಮಾಜಿಕ, ಆರ್ಥಿಕ ಸ್ಥಿತಿಯ ಮೇಲೆ, ಸ್ಕೀಂನ ಪ್ರಭಾವ ಧನಾತ್ಮಕವಾಗಿದೆ.

## ಕಲಿತ ಪಾಠಗಳು

**ಪ್ರೋತ್ಸಾಹ ಧನ ಅಥವಾ ಸೇವಾ ನೀಡಿಕೆ ಪದ್ಧತಿ**

*"ಯಾವುದೇ ಪ್ರೋತ್ಸಾಹಧನ ನೀಡಿಕೆ ಅಥವಾ ಯಾವುದೇ ಸೇವೆ ಅಥವಾ ಫಲ ನೀಡುವ ಯೋಜನೆಯನ್ನು ಸಮಾಜದ ವಿಶಾಲ ಹಿತಾಸಕ್ತಿಯಿಂದ, ಅನುಷ್ಠಾನಿಸುವ ಮೊದಲು ಅಳವಡಿಸಿಕೊಳ್ಳಬೇಕಾದ ಸೇವಾ ನೀಡಿಕೆ ಪದ್ಧತಿಯ ಆಗುಹೋಗುಗಳನ್ನು ಕುರಿತು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳು ಸವಿಸ್ತಾರವಾಗಿ ಚರ್ಚಿಸಬೇಕಾಗುತ್ತದೆ. ಇದರ ಫಲಿತಾಂಶದ ಆಧಾರದಲ್ಲಿ ಸಮರ್ಥ, ಸೂಕ್ತ ವಿತರಣೆ ಪದ್ಧತಿಯನ್ನು ಆಯ್ಕೆ ಮಾಡಬಹುದು ಮತ್ತು ಧ್ಯೇಯೋದ್ದೇಶಗಳನ್ನು ಸಾಧಿಸಲು ತ್ವರಿತ ಅನುಷ್ಠಾನಕ್ಕೆ ಅಳವಡಿಸಿಕೊಳ್ಳಲು ಮಾರ್ಗಸೂಚಿಗಳನ್ನು ನೀಡಬಹುದು."*

## ತೀರ್ಮಾನಗಳು

**ಹಾಲು ಪ್ರೋತ್ಸಾಹಧನ ಯೋಜನೆಯನ್ನು ಮಂಜೂರು ಮಾಡಲು ಕರ್ನಾಟಕ ಸರ್ಕಾರವು ತೆಗೆದುಕೊಂಡ ನೀತಿ ನಿರ್ಧಾರದಿಂದ ಒಟ್ಟಾರೆ ಗಣನೀಯ ಧನಾತ್ಮಕ ಪ್ರಭಾವವಾಗಿದ್ದು, ಮಹಿಳೆಯರು, ಸಣ್ಣ, ಅತಿ ಸಣ್ಣ ರೈತರು ಮತ್ತು ಭೂರಹಿತ ಕೃಷಿಕರ ಜೀವನೋಪಾಯಕ್ಕೆ ಭರವಸೆಯಾಗಿ ಸಹಕಾರಿ ವಲಯದಲ್ಲಿ ಹೈನು ಚಟುವಟಿಕೆಯ ಅಭಿವೃದ್ಧಿಯಾಗಿದೆ. ಸಹಕಾರಿ ವಲಯದಲ್ಲಿ ಹೈನುಗಾರರ ಹಿತಾಸಕ್ತಿಯಿಂದ ಪ್ರೋತ್ಸಾಹಧನ ನೀಡಿಕೆ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಲು ಸಲಹೆ ನೀಡಲಾಗಿರುವಂತೆ ಪ್ರೋತ್ಸಾಹಧನದ ದರವನ್ನು ರೂ.6.00 ಇಲ್ಲವೆ ಇನ್ನೂ ಹೆಚ್ಚು ಮಾಡಿ ಪರಿಷ್ಕರಿಸಿ ಸರ್ಕಾರವು ಯೋಜನೆಯನ್ನು ಮುಂದುವರಿಸಬಹುದಾಗಿದೆ. ಪ್ರೋತ್ಸಾಹಧನದ ದರ ಪರಿಷ್ಕರಣೆಯು ಬರಗಾಲದ ಸನ್ನಿವೇಶಗಳಲ್ಲಿಯೂ, ಆಹಾರ ಭದ್ರತೆಯ ಗುರಿಯೊಂದಿಗೆ, ಹಾಲು ಉತ್ಪಾದನೆಯಲ್ಲಿ ಇರುವ ಸುಸ್ಥಿರ ಬೆಳವಣಿಗೆಯನ್ನು ಖಂಡಿತವಾಗಿಯೂ ಕಾಯ್ದುಕೊಳ್ಳುತ್ತದೆ.**

## ಶಿಫಾರಸ್ಸುಗಳು

1. ಅನುಷ್ಠಾನದಲ್ಲಿರುವ **ಹಾಲು ಪ್ರೋತ್ಸಾಹಧನ ಯೋಜನೆ**ಯನ್ನು ಪ್ರೋತ್ಸಾಹಧನದ ದರವನ್ನು ಏರಿಕೆ ಮಾಡಿ ಮುಂದುವರಿಸುವುದು. ಹೈನು ರಾಸುಗಳ ಆಹಾರದ ಬೆಲೆ ಮತ್ತು ಒಟ್ಟಾರೆ ನಿರ್ವಹಣಾ ವೆಚ್ಚ ಹೆಚ್ಚಾಗಿರುವುದರಿಂದ, ಬಹುತೇಕ ಪಾಲುದಾರರು ವ್ಯಕ್ತಪಡಿಸಿರುವುದರಿಂದ ಗ್ರಾಮ ಮಟ್ಟದ ಹಾಲು ಉತ್ಪಾದಕರ ಸಂಘಗಳಿಗೆ ಹಾಲನ್ನು ಪೂರೈಸುವ ಹೈನುಗಾರರಿಗೆ ಪ್ರತಿ ಲೀಟರ್ ಹಾಲಿಗೆ ರೂ.6.00 ಅಥವ ರೂ.8.00 ನೀಡಬಹುದು. ಸಹಕಾರಿ ವಲಯದ ಹೈನುಗಾರಿಕೆ ಚಟುವಟಿಕೆಯು ಗರಿಷ್ಠ ಬೆಳವಣಿಗೆಯನ್ನು ಹೊಂದುವಂತೆ, ಜಿಲ್ಲಾ ಹಾಲು ಒಕ್ಕೂಟಗಳಿಂದ ಗ್ರಾಮೀಣ ರೈತರು ಪ್ರತಿಫಲದಾಯಕ / ಲಾಭದಾಯಕ ಖರೀದಿ ದರವನ್ನು ಪಡೆಯುವಂತಾಗುವವರೆಗೆ ಈ ಯೋಜನೆಯನ್ನು ಮುಂದುವರಿಸಬೇಕಾಗುತ್ತದೆ.

**2**. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆಯುಕ್ತಾಲಯದಲ್ಲಿ ಅನುಷ್ಠಾನದಲ್ಲಿರುವ ಯೋಜನೆಗಳ ಬಗ್ಗೆ ಕಲಿಕೆ ಮತ್ತು ದಾಖಲಾತಿಗಾಗಿ " **ನಿಗಾವಣೆ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲಾತಿ**" ಶಾಖೆಯನ್ನು ಸ್ಥಾಪಿಸಿ ಸಮಕಾಲೀನ ನಿಗಾವಣೆ ಮತ್ತು ಮೌಲ್ಯ ಮಾಪನ ಮಾಡುವ ಮೂಲಕ ಎದುರಾದ ಸಮಸ್ಯೆಗಳಿಗೆ ಕ್ಲಿಪ್ತ ಸಮಯದಲ್ಲಿ ತಿದ್ದುವಿಕೆ ಮತ್ತು ಸೂಕ್ತ ಪರಿಹಾರೋಪಾಯಗಳನ್ನು ಕುರಿತು ಸಲಹೆ ನೀಡಬಹುದಾಗಿರುತ್ತದೆ.

3. **ಹಾಲಿನ ಉತ್ಪಾದನಾ ವೆಚ್ಚ ಮತ್ತು ಗ್ರಾಮೀಣ ರೈತರಿಂದ ಹಾಲು ಒಕ್ಕೂಟಗಳು ಹಾಲನ್ನು ಖರೀದಿಸುವ ದರವನ್ನು ಲೆಕ್ಕ ಹಾಕುವ ಜವಾಬ್ದಾರಿ. ಎರಡು ಆಯ್ಕೆಗಳನ್ನು ಶಿಫಾರಸ್ಸು ಮಾಡಲಾಗಿದೆ.**

**ಆಯ್ಕೆ – 1 :** ಗ್ರಾಮ ಮಟ್ಟದಲ್ಲಿ ಹಾಲಿನ ಉತ್ಪಾದನಾ ವೆಚ್ಚ ಮತ್ತು ಹಾಲು ಒಕ್ಕೂಟಗಳು ಹಾಲನ್ನು ಖರೀದಿಸಬೇಕಾದ ದರವನ್ನು ಲೆಕ್ಕಾಚಾರ ಮಾಡಲು ಸರ್ಕಾರವು **ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ**ಯನ್ನು ಗುರುತಿಸಿ ಜವಾಬ್ದಾರಿಯನ್ನು ವಹಿಸಬಹುದು.

**ಆಯ್ಕೆ – 2**: ಹಾಲು ಅತ್ಯವಶ್ಯಕ ಸರಕಾಗಿದ್ದು "**ಕರ್ನಾಟಕ ರಾಜ್ಯ ಕೃಷಿ ದರ ಆಯೋಗ**"ದ ವ್ಯಾಪ್ತಿಯಲ್ಲಿ ಪರಿಗಣಿಸುವ ಮೂಲಕ ರೈತರ ಹಿತಾಸಕ್ತಿಯಿಂದ ಹಾಲಿಗೆ ಪ್ರತಿಫಲದಾಯಕ ದರವನ್ನು ನೀಡುವ ಖಾತರಿ ಇರುತ್ತದೆ.

ಮೇಲಿನ ನಿಯಂತ್ರಿಸುವ ಪ್ರಾಧಿಕಾರಗಳು, ಹಾಲಿನ ಖರೀದಿ ದರವನ್ನು ನಿಗದಿಪಡಿಸುವಾಗ, ಜಿಲ್ಲಾ ಹಾಲು ಒಕ್ಕೂಟಗಳ ಆರ್ಥಿಕ ಪರಿಸ್ಥಿತಿಯನ್ನು ಕೂಡ ಒಂದು ಅಂಶವನ್ನಾಗಿ ಪರಿಗಣಿಸಬೇಕು.

**4. ಹಾಲು ಪ್ರೋತ್ಸಾಹಧನ ಯೋಜನೆಯಡಿ ಪ್ರೋತ್ಸಾಹಧನ ನೀಡಿಕೆ ವ್ಯವಸ್ಥೆ**

**ಆಯ್ಕೆ –1**: ಗ್ರಾಮೀಣ ಹಾಲು ಪೂರೈಕೆದಾರರಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳು ಪಾಕ್ಷಿಕವಾಗಿ ಪಾವತಿಸಬೇಕಾದ ಹಾಲಿನ ಬಾಬ್ತಿನೊಂದಿಗೆ ಪ್ರೋತ್ಸಾಹಧನದ ಮೊತ್ತವನ್ನೂ ಸಹಾ ಪಾವತಿಸಲು ಸಾಧ್ಯವಾಗುವಂತೆ ಪ್ರೋತ್ಸಾಹಧನ ವಿತರಣೆ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕಾಗಿದೆ.

**ಆಯ್ಕೆ –2**: **ಹಾಲು ಪ್ರೋತ್ಸಾಹಧನ ಯೋಜನೆಯನ್ನು ಇದೇ ರೀತಿಯಲ್ಲಿ ಮುಂದುವರಿಸಿದರೆ,** ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಅನುಷ್ಠಾನದ ನಿಗಾವಣೆ ಮಾಡಲು ಕಾರ್ಯನಿರತ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಮತ್ತು ಜಿಲ್ಲಾ ಹಾಲು ಒಕ್ಕೂಟಗಳನ್ನು ಒಂದು ಸಂಪರ್ಕಜಾಲದಲ್ಲಿ ಅಳವಡಿಸಲು **ಸಮರ್ಥ ತಂತ್ರಾಂಶವನ್ನು** ರೂಪಿಸುವುದು. ತಂತ್ರಾಂಶದಲ್ಲಿ ಹಾಲು ಪೂರೈಕೆದಾರರ ದತ್ತಾಂಶವನ್ನು ಅವರ **ಆಧಾರ್ ಸಂಖ್ಯೆಯೊಂದಿಗೆ** ಜೋಡಿಸಿ ಲೆಕ್ಕ ಮತ್ತು ಪಾವತಿಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಿ ದೃಢೀಕರಿಸಲು ಅವಕಾಶವನ್ನು ಕಲ್ಪಿಸುವ ಮೂಲಕ ಪಾರದರ್ಶಕತೆ, ಜವಾಬ್ದಾರಿ ಮತ್ತು ತ್ವರಿತ ವಿಲೇವಾರಿಯ ಖಾತರಿ ನೀಡಬಹುದಾಗಿರುತ್ತದೆ.

ಮುಂದುವರಿಸುತ್ತಾ ಈ ಜಾಲವನ್ನು ಇಲಾಖೆಯ ಎಲ್ಲಾ ಸಂಬಂಧಿತ ಸಂಸ್ಥೆಗಳನ್ನು ಒಳಪಡಿಸಲು ಮತ್ತಷ್ಟು ವಿಸ್ತರಿಸಿ, ಎಲ್ಲಾ ಜಾನುವಾರು ಪಾಲಕರೊಡನೆ ಸಂಪರ್ಕ ಸಾಧಿಸಿ ಅವರ ಭೂ ವಿವರ ಮತ್ತು ಜಾನುವಾರು ಸಂಪನ್ಮೂಲ ವಿವರಗಳೊಂದಿಗೆ ಮನೆ ಬಾಗಿಲಿಗೆ ಸೇವೆಗಳ ನೀಡಿಕೆ, ಪರಿಕರಗಳ ಸರಬರಾಜು ಮತ್ತು ಮಾದರಿ ಸಮೀಕ್ಷೆ, ಜಾನುವಾರು ವಿಮೆ ಮತ್ತು ರೋಗ ಮುನ್ಸೂಚನೆ ಮಾಹಿತಿಯನ್ನು ಸಂಚಾರಿ ದೂರವಾಣಿಗೆ ಒದಗಿಸುವುದನ್ನೂ ಒಳಗೊಂಡಂತೆ ಪ್ರೋತ್ಸಾಹಗಳನ್ನು ನೀಡುವ **ದೀರ್ಘಾವಧಿ ಯೋಜನೆಯಾಗಿ** ಕೈಗೊಳ್ಳಬಹುದು.

**5. ಸಂಚಲನಾ ವ್ಯವಸ್ಥೆ ಮತ್ತು ಅಭಿವೃದ್ಧಿಗೆ ಬೆಂಬಲ**

ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನೂ ಒಳಗೊಂಡಂತೆ ಜಿಲ್ಲಾ ಹಾಲು ಒಕ್ಕೂಟಗಳು ಹಾಗೂ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಅವಶ್ಯಕತೆಯನ್ನು ಆಧರಿಸಿ ಹೆಚ್ಚುವರಿ ಮೂಲಭೂತ ಸೌಕರ್ಯ ಮತ್ತು ಮಾನವ ಶಕ್ತಿ ಒದಗಿಸಲು ಪ್ರೋತ್ಸಾಹಧನದ ಶೇ.2ರಷ್ಟು ಅನುದಾನವನ್ನು ನಿಗದಿಪಡಿಸುವುದು. ಇದರಲ್ಲಿ ಒಂದು ಭಾಗವನ್ನು ಸ್ಥಳೀಯ ಮಹಿಳಾ ಮುಂದಾಳುಗಳಿಗೆ "**ತರಬೇತಿದಾತರ ತರಬೇತಿ**" ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರತಿಕೂಲ/ಬರ ಪರಿಸ್ಥಿತಿಗಳಲ್ಲಿ ಹೈನು ರಾಸುಗಳ ಪಾಲನೆ ಕುರಿತು ಹೈನುಗಾರರಿಗೆ "**ಗ್ರಾಮ ಮಟ್ಟದ ತರಬೇತಿ**"ಗಳನ್ನು ಆಯೋಜಿಸಲು ಉಪಯೋಗಿಸಬಹುದು. ಈ ರೀತಿಯ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಯಿಂದ "**ರೈತರಿಂದ ರೈತರಿಗೆ**" ಜ್ಞಾನ ವಿಸ್ತರಣೆ ಮತ್ತು ಗ್ರಾಮ ಮಟ್ಟದಲ್ಲಿ ಹೈನು ಅಭವೃದ್ಧಿ ಚಟುವಟಿಕೆಯ ಸುಸ್ಥಿರ ಧನಾತ್ಮಕ ಬೆಳವಣಿಗೆಯಾಗುತ್ತದೆ.

# ಭಾಗ 1: ಪರಿಚಯ

### 1.1 ಹೈನು ಅಭಿವೃದ್ಧಿ – ಪ್ರಾಪಂಚಿಕ ನೋಟ

ಕಳೆದ ಎರಡು ದಶಕಗಳಲ್ಲಿ ಹಾಲಿನ ಸರಾಸರಿ ವಾರ್ಷಿಕ ಉತ್ಪಾದನೆಯು ಶೇ.2ರಷ್ಟು ವಿಸ್ತೃತಗೊಂಡು ವಿಶ್ವದ ಹೈನು ಉದ್ದಿಮೆಯು ಗಣನೀಯ ರಚನಾತ್ಮಕ ಬದಲಾವಣೆಗಳನ್ನು ಕಂಡಿದೆ. ವಿಶ್ವದ ಹಾಲು ಉತ್ಪಾದನೆಯಲ್ಲಿ ಅರ್ಧಕ್ಕಿಂತ ಹೆಚ್ಚು ಹಾಲು ಉತ್ಪಾದನೆಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಾಗಿದೆ. ಹಲವು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ತೈಲ ರಫ್ತು ದೇಶಗಳಲ್ಲಿ ಆದಂತಹ ಶೀಘ್ರ ಆರ್ಥಿಕ ಬೆಳವಣಿಗೆಯು ಹೈನು ಉತ್ಪನ್ನಗಳಿಗೆ ಬೇಡಿಕೆಯನ್ನು ಹೆಚ್ಚಿಸಿದೆ. ಜನಸಂಖ್ಯಾ ಬೆಳವಣಿಗೆ, ನಗರೀಕರಣ ಮತ್ತು ಪಾಶ್ಚಿಮಾತ್ಯ ಆಹಾರ ಪದ್ಧತಿಗಳ ಅನುಕರಣೆಯೂ ಬೇಡಿಕೆಯನ್ನು ಹೆಚ್ಚಿಸಿರುತ್ತವೆ. ಮುಂದುವರಿದು, ಹೈನುಗಾರಿಕೆಯು ಬಹತೇಕ ಗ್ರಾಮೀಣ ಜನತೆಯ ಆದಾಯ ಮತ್ತು ಪೌಷ್ಠಿಕಾಂಶಗಳ ಮುಖ್ಯ ಮೂಲವಾಗಿರುವುದರಿಂದ ಹಲವು ಅಭಿವೃದ್ಧಿಪರ ರಾಷ್ಟ್ರಗಳಲ್ಲಿ ಆಹಾರ ಮತ್ತು ಪೌಷ್ಠಿಕತೆಯ ಭದ್ರತೆಗೆ ಪ್ರಮುಖವಾಗಿದೆ. (ಎಫ್‌ಎಓ–2011) (ಡಾ॥ ರಾಂಘುಲ್, ಹೈನು ವಲಯದಲ್ಲಿ ಪ್ರಾಪಂಚಿಕ ಸ್ವರ್ಧಾಭಾವ).









Table 2: Cost of Production of Milk

| Cost of production(US $/ 100 Kg) | Country |
|---|---|
| > 20 ≤ 30 | Argentina, Pakistan, Vietnam, Indonesia , Chile (Small farms), China (small farms). |
| > 30 ≤ 40 | Estonia, Czech Republic, Brazil, Bangladesh, Thailand, Poland, India and New Zealand. |
| > 40 ≤ 50 | Spain, Denmark, Ireland, UK, USA, Germany(large Farms) and Neither land(Large farms) and Israel. |
| > 50 ≤ 60 | Austria, France, Sweden, China, Neither land Small farms) . |
| > 60 ≤ 120 | Switzerland, Norway, Finland, Canada and Germany(small Farms) |

Source: IFCN Dairy Report 2011






ಆಧುನಿಕ ಹೈನುಗಾರಿಕ ಘಟಕ



### 1.2 ಹೈನು ಅಭಿವೃದ್ಧಿ – ಭಾರತ ದೇಶದ ನೋಟ

ಜಾನುವಾರು/ಹೈನು ಉತ್ಪಾದನೆ ಮತ್ತು ಕೃಷಿ ಇವು ಪರಸ್ಪರ ಅವಲಂಬನೆಯಿಂದ, ಒಟ್ಟಾರೆ ಆಹಾರ ಭದ್ರತೆಗೆ ಅತ್ಯವಶ್ಯಕವಾಗಿರುವುದರಿಂದ ಸಹಜವಾಗಿ ಬಹು ಹತ್ತಿರವಾಗಿವೆ. ಬಹಳಷ್ಟು ರೈತರಿಗೆ ಮುಖ್ಯ ಜೀವನೋಪಾಯವಾಗಿ, ಕೃಷಿಗೆ ಪರಿಕರಗಳನ್ನು ಒದಗಿಸುವ ಮೂಲಕ, ಕುಟುಂಬಗಳ ಆರೋಗ್ಯ ಮತ್ತು ಪೌಷ್ಠಿಕತೆಯ ಮೂಲವಾಗಿ, ಆದಾಯ ತರುವ ಉದ್ಯೋಗಾವಕಾಶಗಳಾಗಿ ಮತ್ತು ಅಂತಿಮವಾಗಿ ಬೇಕೆಂದಾಗ ತನ್ನ ಕಾಲುಗಳ ಮೇಲೆ ನಿಲ್ಲಲು ಅವಲಂಬಿಸಬಹುದಾದ ಮಾರ್ಗವಾಗಿದೆ. ಇದು ಪೂರಕ ಮತ್ತು ಪರಿಪೂರಕ ಸಾಧನವಾಗಿದೆ. ಎನ್‌ಎಸ್‌ಎಸ್‌ಓ ಕೈಗೊಂಡ (ಜುಲೈ 2009–ಜೂನ್ 2010) 66ನೇ ಸುತ್ತಿನ ಸಮೀಕ್ಷೆಯಂತೆ ಜಾನುವಾರುಗಳ ಪಾಲನೆಯಲ್ಲಿ 20.5 ದಶಲಕ್ಷ ಕೆಲಸಗಾರರು ವಾಸ್ತವಿಕವಾಗಿ ತೊಡಗಿಸಿಕೊಂಡಿದ್ದಾರೆ.(ಮುಖ್ಯ ಕಾರ್ಯಚಟುವಟಿಕೆಯ ಹೊರತಾಗಿ ಉಪ ಕಾರ್ಯಚಟುವಟಿಕೆಗಳನ್ನು ಒಳಗೊಂಡು). ಅತಿ ಸಣ್ಣ, ಸಣ್ಣ ಮತ್ತು ಅರೆ ಮಧ್ಯಮ ಭೂಮಾಲಿಕರು (4 ಹೆ. ಗಳಗಿಂತ ಕಡಿಮೆ ಭೂಮಿ) ಶೇ.87.7ರಷ್ಟು ಜಾನುವಾರುಗಳನ್ನು ಹೊಂದಿರುತ್ತಾರೆ. ಆದ್ದರಿಂದ, ಜಾನುವಾರು ವಲಯದ ಅಭಿವೃದ್ಧಿಯು ಸಮಗ್ರವಾದುದು.

ಪ್ರಸ್ತುತ, ಜಾನುವಾರು ಕ್ಷೇತ್ರವು ಅಭಿವೃದ್ಧಿಪರ ದೇಶಗಳಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಕೃಷಿ ಉಪವಲಯಗಳಲ್ಲಿ ಒಂದಾಗಿದೆ. ಒಟ್ಟು ಜಿಡಿಪಿಯಲ್ಲಿ ಪಾಲು ಶೇ.3.9 ರಷ್ಟಿದ್ದು ಕೃಷಿಯಲ್ಲಿ ದೊಡ್ಡ ಭಾಗವಾಗಿದೆ. ಜನ ಸಂಖ್ಯೆಯ ಹೆಚ್ಚಳ, ನಗರೀಕರಣ ಮತ್ತು ಆದಾಯದಲ್ಲಿ ಏರಿಕೆಯಾಗಿರುವುದರಿಂದ ಜಾನುವಾರು ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಕೃಷಿ ಮತ್ತು ಸಂಬಂಧಿತ ಚಟವಟಿಕೆಗಳಿಂದಾಗುವ ರೂ. 11,79,341 ಕೋಟಿಗಳ ಒಟ್ಟು ಬಳಕೆ ಉತ್ಪನ್ನದಲ್ಲಿ ಜಾನುವಾರು ವಲಯದ ರೂ.4,59,051 ಕೋಟಿಗಳ ಮೌಲ್ಯದ ಉತ್ಪನ್ನವು ಸೇರಿದೆ. (ಪಶುಪಾಲನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ, ಭಾರತ ಸರ್ಕಾರ, ಮೂಲ ಪಶು ಪಾಲನೆ ಅಂಕಿ ಅಂಶ, 2013)

ಭರತ ಖಂಡವು ಪ್ರಪಂಚದ ಭೂವಿಸ್ತಾರದಲ್ಲಿ ಕೇವಲ ಶೇ. 2.3ರಷ್ಟನ್ನು ಹೊಂದಿದ್ದರೂ, ಜನಸಂಖ್ಯೆಯಲ್ಲಿ ಶೇ. ಶೇ.17 ರಷ್ಟು ಮತ್ತು ಜಾನುವಾರು ಸಂಪನ್ಮೂಲದಲ್ಲಿ ಶೇ. 10.7ರಷ್ಟು ಪಾಲನ್ನು ಹೊಂದಿದೆ. ಭಾರತದ ಜಾನುವಾರು ಸಂಖ್ಯೆಯು 512.05 ದಶಲಕ್ಷವಾಗಿದೆ. 19ನೇ ಜಾನುವಾರು ಸಮೀಕ್ಷೆಯಂತೆ ದನಗಳು 190.90 ದಶಲಕ್ಷ ಮತ್ತು 108.70 ದಶಲಕ್ಷ ಎಮ್ಮೆಗಳಿವೆ. ಜಾನುವಾರು ಉತ್ಪನ್ನವು 11 ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಶೇ. 4.8ರಷ್ಟು ದಾಖಲೆಯ ಬೆಳವಣಿಗೆಯನ್ನು ಕಂಡಿದ್ದು 12ನೇ ಪಂಚವಾರ್ಷಿಕ ಯೋಜನೆಯ ವೇಳೆಗೆ ಅತ್ಯುತ್ತಮ ಬೆಳವಣಿಗೆ ಕಾಣಲು ಸಮರ್ಥವಾಗಿದೆ. ಸಣ್ಣ ರೈತರು ಮತ್ತು ಭೂರಹಿತರು ಹೆಚ್ಚು ಜಾನುವಾರುಗಳನ್ನು ಹೊಂದಿದ್ದು ಪ್ರೋಟೀನ್‌ಯುಕ್ತ ಆಹಾರಗಳಿಗೆ ದೇಶದಲ್ಲಿ ಹೆಚ್ಚಾಗುತ್ತಿರುವ ಬೇಡಿಕೆಯು ಈ ಬೆಳವಣಿಗೆಯನ್ನು ಮುನ್ನಡೆಸಲಿದೆ.

ವರ್ಷಾಂತರಗಳಲ್ಲಿ ಹೈನು ವಲಯವು ಗಣನೀಯವಾಗಿ ಬೆಳೆದಿದೆ. ಪ್ರಬುದ್ಧ ನೀತಿ ಹಸ್ತಕ್ಷೇಪದ ಫಲಿತಾಂಶವಾಗಿ ಭಾರತವು 2011–12ರಲ್ಲಿದ್ದ 127.9 ದಶಲಕ್ಷ ಟನ್ ವಾರ್ಷಿಕ ಹಾಲಿನ ಉತ್ಪಾದನೆಯಲ್ಲಿ ಶೆ. 3.5ರಷ್ಟು ಬೆಳವಣಿಗೆಯನ್ನು ದಾಖಲಿಸಿ 2012–13ರಲ್ಲಿ 132.43 ದಶಲಕ್ಷ ಟನ್ ತಲುಪಿ ಪ್ರಪಂಚದ ಹೈನೋತ್ಪಾದಕ ರಾಷ್ಟ್ರಗಳಲ್ಲಿ ಮೊದಲ ಸ್ಥಾನದಲ್ಲಿದೆ. ಇದು ವಿಶ್ವದಲ್ಲಿ 2012–13ರಲ್ಲಿ ತಲಾ ದಿನವಹಿ ದೊರೆಯುವ 294 ಗ್ರಾಂ ಹಾಲಿನ ಪ್ರಮಾಣವನ್ನು ಮೀರಿ 296.5 ಗ್ರಾಂ ಮಟ್ಟವನ್ನು ತಲುಪಿ ಬೆಳೆಯುತ್ತಿರುವ ಜನಸಂಖ್ಯೆಗೆ ಹಾಲು ಮತ್ತು ಹಾಲಿನ ಉತ್ಪನ್ನಗಳ ಒದಗಿಸುವ ಮೂಲಕ ಸುಸ್ಥಿರ ಬೆಳೆವಣಿಗೆಯನ್ನು ಪ್ರತಿನಿಧಿಸುತ್ತದೆ.

ದೇಶದಲ್ಲಿ ಬಹಳಷ್ಟು ಹಾಲು ಸಣ್ಣ, ಅತಿಸಣ್ಣ ರೈತರು ಮತ್ತು ಭೂರಹಿತರಿಂದ ಉತ್ಪಾದಿಸಲ್ಪಡುತ್ತಿದೆ. ಮಾರ್ಚ್ 2013ರವರೆಗೆ ಸುಮಾರು 15.1 ದಶಲಕ್ಷ ರೈತರನ್ನು 1,55,634 ಗ್ರಾಮ ಮಟ್ಟದ ಹಾಲು ಸಹಕಾರಿ ಸಂಘಗಳ ವ್ಯಾಪ್ತಿಯಲ್ಲಿ ತರಲಾಗಿದೆ. 2012-13 ರಲ್ಲಿ ಸಹಕಾರಿ ಹಾಲು ಒಕ್ಕೂಟಗಳು ದಿನಂಪ್ರತಿ ಸರಾಸರಿ 32.8 ದಶಲಕ್ಷ ಟನ್ ಹಾಲನ್ನು ಸಂಗ್ರಹಿಸಿ ಹಿಂದಿನ ವರ್ಷದಲ್ಲಿದ್ದ 28.7 ದಶಲಕ್ಷ ಟನ್ ಸಂಗ್ರಹಣೆಗೆ ಹೋಲಿಸಿದರೆ ಶೇ. 14.3ರಷ್ಟು ಬೆಳವಣಿಗೆಯು ದಾಖಲಿಸಿವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, 2012-13ರಲ್ಲಿ ದ್ರವ ಹಾಲಿನ ಮಾರಾಟವು 23.7 ದಶಲಕ್ಷ ಲೀಟರ್‌ಗಳನ್ನು ತಲುಪಿ ಶೇ.3.7ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

**ಭಾರತದ ಹೈನುಗಾರಿಕೆಯ ಗುಣಲಕ್ಷಣಗಳು ಮತ್ತು ಆಂತರಿಕ ಬೆಳವಣಿಗೆಯೊಂದಿಗೆ ಅದರ ಸಂಬಂಧ**

- ಸಣ್ಣ ಮತ್ತು ಅತಿ ಸಣ್ಣ ರೈತರು ಶೇ.33ರಷ್ಟು ಭೂಮಿಯನ್ನು ಮತ್ತು ಶೇ. 60ರಷ್ಟು ಹಸು ಮತ್ತು ಎಮ್ಮೆಗಳನ್ನು ಹೊಂದಿದ್ದಾರೆ.
- ಸುಮಾರು ಶೇ.75 ರಷ್ಟು ಗ್ರಾಮೀಣ ಕುಟುಂಬಗಳು ಸರಾಸರಿ 2-4 ಜಾನುವಾರುಗಳನ್ನು ಹೊಂದಿವೆ.
- ಹೈನುಗಾರಿಕೆಯು ಒಂದು ಪ್ರತ್ಯೇಕ ಉದ್ದಿಮೆಯಾಗಿರದೆ ಕೃಷಿ ಪದ್ಧತಿಯ ಭಾಗವಾಗಿದೆ.
- ಆಹಾರವು ಬೆಳೆಯುಳಿಕೆಗಳಿಂದ ದೊರೆಯುತ್ತಿದ್ದು, ಸಗಣಿಯು ಗೊಬ್ಬರವಾಗಿ ಪ್ರಾಮುಖ್ಯವಾಗಿದೆ.
- ಕೃಷಿಯಿಂದ ಋತುಮಾನಗಳಲ್ಲಿ ಆದಾಯವಾದರೆ ಹೈನುಗಾರಿಕೆಯು ನಿರಂತರ ಆದಾಯದ ಮೂಲವಾಗಿದೆ.
- ಮೂರನೇ ಒಂದು ಭಾಗದಷ್ಟು ಗ್ರಾಮೀಣ ಆದಾಯವು ಹೈನುಗಾರಿಕೆಯನ್ನು ಅವಲಂಬಿಸಿದೆ.
- ಕಠಿಣ ಪರಿಸ್ಥಿತಿಗಳಲ್ಲಿ ಜಾನುವಾರುಗಳು ಮಾರಾಟ ಮಾಡಬಹುದಾದ ಭದ್ರತಾ ಆಸ್ತಿಯಾಗಿವೆ.







Fig 5: Trend in Milk production in India

Source : Author's Representation based on FAO and NDDB .

### 1.3 ಹೈನು ಅಭಿವೃದ್ಧಿ– ಕರ್ನಾಟಕ ರಾಜ್ಯದ ನೋಟ


ಹಾಲು ಹಿಂಡುತ್ತಿರುವ ಗ್ರಾಮೀಣ ಮಹಿಳೆ

ಕರ್ನಾಟಕ ರಾಜ್ಯದಲ್ಲಿ ಹೈನುಗಾರಿಕೆಯು ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವತ್ತ ಮುಖ್ಯ ಪಾತ್ರವನ್ನು ವಹಿಸಿದೆ. ಪಶು ಸಂಗೋಪನಾ ಚಟುವಟಿಕೆಗಳಲ್ಲಿ ಶೇ. 65ರಷ್ಟು ಸಣ್ಣ, ಅತಿ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ತೊಡಗಿದ್ದಾರೆ. ಸುಮಾರು ಶೇ74ರಷ್ಟು ಕುಟುಂಬಗಳು ಹೈನುಗಾರಿಕೆಯೊಂದನ್ನೇ ಅವಲಂಬಿಸಿವೆ.

2012ರ ಜಾನುವಾರು ಗಣತಿಯ ಪ್ರಕಾರ ಅತಿ ಹೆಚ್ಚು ದನ ಮತ್ತು ಎಮ್ಮೆಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವು ಒಟ್ಟು ಜಾನುವಾರು ಸಂಖ್ಯೆಯಲ್ಲಿ ಶೇ.4.3 ರಷ್ಟು ಹೊಂದಿದ್ದು ದೇಶದಲ್ಲಿ 9ನೇ ಸ್ಥಾನದಲ್ಲಿದೆ. ಸುಮಾರು ಅರ್ಧದಷ್ಟು ದೇಶೀ ದನಗಳಿದ್ದು ಉಳಿದರ್ಧದಲ್ಲಿ ಸಮವಾಗಿ ಮಿಶ್ರತಳಿ ದನ ಮತ್ತು ಎಮ್ಮೆಗಳಿರುತ್ತವೆ. 1992ರಲ್ಲಿ ಮಿಶ್ರತಳಿ ದನಗಳು ಶೇ.4ರಷ್ಟಿದ್ದು 2012ರ ವೇಳೆಗೆ ಶೇ.22ಕ್ಕೆಏರಿಕೆಯಾಗಿರುತ್ತದೆ, ಎಮ್ಮೆಗಳ ಸಂಖ್ಯೆಯಲ್ಲಿ ಅತ್ಯಲ್ಪ ಹೆಚ್ಚಳವಾಗಿದ್ದು ಶೆ.24 ರಿಂದ 27ಕ್ಕೆ ಏರಿಕೆಯಾಗಿರುತ್ತದೆ. 2007 ಮತ್ತು 2012ರ ನಡುವೆ ದೇಶೀ ದನ ಮತ್ತು ಎಮ್ಮೆಗಳ ಸಂಖ್ಯೆಯಲ್ಲಿ ಕ್ರಮವಾಗಿ ಶೇ. 4.5 ಮತ್ತು ಶೇ.4.3ರಷ್ಟು ಇಳಿಕೆಯಾಗಿದ್ದು, ಮಿಶ್ರತಳಿ ದನಗಳ ಸಂಖ್ಯೆಯಲ್ಲಿ ಶೇ. 5.8ರಷ್ಟು ಏರಿಕೆಯಾಗಿದೆ. ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಚಾಮರಾಜನಗರ, ಮಂಡ್ಯ, ರಾಮನಗರ ಇತ್ಯಾದಿ ಜಿಲ್ಲೆಗಳ ರೈತರ ಹಿಂಡುಗಳಲ್ಲಿ ಶೇ.40ಕ್ಕೂ ಮೀರಿ ಮಿಶ್ರತಳಿ ರಾಸುಗಳು ಇದ್ದು ಗಣನೀಯ ಆದಾಯವನ್ನು ಹೊಂದಲು ಸಹಾಯ ಮಾಡಿವೆ. (ಕರ್ನಾಟಕದಲ್ಲಿ ಹೈನುಗಾರಿಕೆ– ಅಂಕಿಅಂಶ 2015/ ಹೈನು ಜ್ಞಾನ ಮಾರ್ಗ)

## ಭಾಗ 2: ಸರ್ಕಾರದ ಮಧ್ಯಸ್ತಿಕೆಗೆ ತಳಹದಿ

ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಗ್ರಾಮೀಣ ಜನರಿಗೆ ಉದ್ಯೋಗ ಮತ್ತು ಆದಾಯವನ್ನು ಬೆಂಬಲಿಸಲು ಜಾನುವಾರು ಮತ್ತು ಕುಕ್ಕುಟಗಳ ಉತ್ಪಾದಕತೆಯನ್ನು ಹೆಚ್ಚಿಸುವತ್ತ ಜಾನುವಾರು ಉತ್ಪಾದನಾ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. 19ನೇ ಜಾನುವಾರು ಗಣತಿ (2012)ಯ ಪ್ರಕಾರ ರಾಜ್ಯವು 2.9 ಕೋಟಿ ಜಾನುವಾರು ಸಂಖ್ಯೆಯನ್ನು ಹೊಂದಿರುತ್ತದೆ. ಪ್ರಾಣಿಗಳಿಗೆ ಆರೋಗ್ಯ ರಕ್ಷಣೆ ನೀಡಲು ಮತ್ತು ತಳಿಗಳನ್ನು ಸುಧಾರಿಸಲು ಹಾಗೂ ಅಭಿವೃದ್ಧಿಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ತನ್ನ ಸಾಂಸ್ಥಿಕ ವ್ಯವಸ್ಥೆಯ ಮೂಲಕ ಅನುಷ್ಠಾನಗೊಳಿಸುತ್ತಿದೆ.

ರಾಜ್ಯದ ಹಾಲಿನ ಉತ್ಪಾದನೆಯು 2013–14ರಲ್ಲಿ 5.99 ದಶಲಕ್ಷ ಮೆಟ್ರಿಕ್ ಟನ್‌ಗಳಷ್ಟಿದ್ದು 2014–15ರಲ್ಲಿ 6.12 ದಶಲಕ್ಷ ಮೆಟ್ರಿಕ್ ಟನ್‌ಗಳಾಗಿರುತ್ತದೆ. 2015ರ ಡಿಸೆಂಬರ್ ವೇಳೆಗೆ ಹಾಲಿನ ಉತ್ಪಾದನೆಯು 5.37 ದಶಲಕ್ಷ ಮೆಟ್ರಿಕ್ ಟನ್‌ಗಳಷ್ಟಿರುತ್ತದೆ. "**ಕ್ಷೀರ ಪ್ರವಾಹ ಕಾರ್ಯಾಚರಣೆ**"ಯಡಿಯಲ್ಲಿ ರಾಜ್ಯ ಮಟ್ಟದಲ್ಲಿ ಕರ್ನಾಟಕ ಹಾಲು ಮಹಾಮಂಡಳಿಯು ಸಹಕಾರಿ ಸಂಸ್ಥೆಯಾಗಿ ಹೈನು ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಟಾನಿಸುತ್ತಿದೆ. ಈ ಸಂಸ್ಥೆಯು ರಾಜ್ಯದ ಗ್ರಾಮೀಣ ಹಾಲು ಉತ್ಪಾದಕರಿಗೆ ಪ್ರತಿಫಲದಾಯಕ ದರ ನೀಡುವುದು ಮತ್ತು ಹಾಲಿನ ಮಾರಾಟ ಹಾಗೂ 14 ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ಗ್ರಾಹಕರಿಗೆ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪೂರೈಸುವ ಜವಾಬ್ದಾರಿಯನ್ನು ಹೊಂದಿದೆ.

- ಸಹಕಾರಿ ಹೈನು ಅಭಿವೃದ್ಧಿಯು ಇಡೀ ರಾಜ್ಯ ವ್ಯಾಪ್ತಿಯನ್ನು ಹೊಂದಿದೆ.
- ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಮಹಾಮಂಡಳದಲ್ಲಿ ಚುನಾಯಿತ ಮಂಡಳಿಗಳಿವೆ.

- ಶೇ.97ಕ್ಕೂ ಮೀರಿ ಹೈನು ಸಹಕಾರಿ ಸಂಘಗಳು ಲಾಭ ಗಳಸುತ್ತಿವೆ.

14 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ 14962 ನೋಂದಾಯಿತ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಇದ್ದು, ಈ ಪೈಕಿ 13157 ಸಂಘಗಳು 22000 ಗ್ರಾಮಗಳಲ್ಲಿ 23.08 ಲಕ್ಷ ಸದಸ್ಯರನ್ನು ಹೊಂದಿಕೊಂಡು ಕಾರ್ಯ ನಿರ್ವಹಿಸುತ್ತಿವೆ. (ಹಾಲು ಮಹಾ ಮಂಡಳ ಮತ್ತು ಕರ್ನಾಟಕ ಆರ್ಥಿಕ ಸಮೀಕ್ಷೆ, 2014–15, ಯೋಜನೆ, ಕಾರ್ಯಕ್ರಮ ನಿಗಾವಣೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು)

**2.1 ಕರ್ನಾಟಕ ಸರ್ಕಾರದ ಹಾಲು ಪ್ರೋತ್ಸಾಹಧನ ಯೋಜನೆ**

ಕರ್ನಾಟಕ ಸರ್ಕಾರವು ದಿನಾಂಕ: 08–09–2008ರ ಆದೇಶದಲ್ಲಿ ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ನೋಂದಣಿಯಾಗಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಸಂಗ್ರಹಿಸುವ ಪ್ರತಿ ಲೀಟರ್ ಹಾಲಿಗೆ ರೂ.2.00 ರ ಪ್ರೋತ್ಸಾಹಧನವನ್ನು ರೈತರಿಗೆ ನೀಡಲು ಪ್ರಾರಂಭಿಸಿದೆ. ಈ ಯೋಜನೆಯು 09–09–2008ರಿಂದ ಅನುಷ್ಠಾನಗೊಳ್ಳುತ್ತಿದೆ ಮತ್ತು ಸಹಕಾರಿ ವಲಯದಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ದಿನಾಂಕ: 14–05–2013 ರಿಂದ ಜಾರಿಗೆ ಬರುವಂತೆ 2013–14ರಲ್ಲಿ ಪ್ರೋತ್ಸಾಹಧನದ ದರವನ್ನು ಪ್ರತಿ ಲೀಟರ್ ಹಾಲಿಗೆ ರೂ.2.00ರಿಂದ ರೂ.4.00ಕ್ಕೆ ಪರಿಷ್ಕರಿಸಿ ಮುಂದುವರಿಸಲಾಗಿರುತ್ತದೆ. ರಾಜ್ಯಾದ್ಯಂತ ಅಂದಾಜು 19.41 ಲಕ್ಷ ರೈತರು ಇದರ ಫಲ ಪಡೆದಿರುತ್ತಾರೆ. ಪ್ರಾಯಶಃ 2016ರಲ್ಲಿ ಹಾಲಿನ ಬೇಡಿಕೆಯು ಹೆಚ್ಚಾದಾಗ ಉಂಟಾಗಬಹುದಾದ ಕಠಿಣ ಪರಿಸ್ಥಿತಿಯನ್ನು ಎದುರಿಸುವ ದೂರ ದೃಷ್ಟಿಯನ್ನಿಟ್ಟುಕೊಂಡಿರುವಂತಿದೆ. ಸಾಹಿತ್ಯಾವಲೋಕನದಿಂದ ಈ ಅಂಶವು ತಿಳಿದುಬಂದಿದ್ದು 2014ರಲ್ಲಿ ಪ್ರಕಟಗೊಂಡಿರುವ ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ವಿನೂತನ ಸಂಶೋಧನೆ ಕುರಿತ ಅಂತರಾಷ್ಟ್ರೀಯ ನಿಯತಕಾಲಿಕದಲ್ಲಿ ವರದಿಯಾಗಿರುತ್ತದೆ. ಹಾಲು ಪ್ರೋತ್ಸಾಹಧನದ ದರವನ್ನು ರೂ.4.00ಕ್ಕೆ ಹೆಚ್ಚಿಸಿದ್ದರಿಂದ ಹಾಲಿನ ಸಂಗ್ರಹಣೆಯು ಶೇ. 16ರಷ್ಟು ಅಂದರೆ 2013–14ರಲ್ಲಿದ್ದ 186.16 ಕೋಟಿ ಲೀಟರ್‌ಗಳಿಂದ 2014–15ರಲ್ಲಿ 222 ಕೋಟಿ ಲೀಟರ್‌ಗಳಿಗೆ ಏರಿಕೆಯಾಗಿರುವುದಾಗಿ ಆಯವ್ಯಯ ಭಾಷಣ(2015–16)ದಲ್ಲಿ ಉಲ್ಲೇಖಿಸಲಾಗಿರುತ್ತದೆ.







| | |
|---|---|
| *ಒಂದು ದೇಶದ ಘನತೆಯನ್ನು ಪ್ರಾಣಿಗಳನ್ನು ನಡೆಸಿಕೊಳ್ಳಲಾಗುತ್ತಿರುವ ರೀತಿಯಿಂದ ತೀರ್ಮಾನಿಸಬಹುದು.*<br>**– ಮಹಾತ್ಮ ಗಾಂಧಿ** | *ರೈತರು ದುರ್ಬಲರಾದರೆ ಸ್ವಾವಲಂಬನೆಯನ್ನು ಕಳೆದುಕೊಳ್ಳುತ್ತಾರೆ ಆದರೆ, ಅವರು ಶಕ್ತಿಶಾಲಿಗಳಾದರೆ ಸ್ವಾತಂತ್ರ್ಯವೂ ಸಬಲವಾಗುತ್ತದೆ. ನಾವು ಕೃಷಿಯಲ್ಲಿ ಪ್ರಗತಿ ಸಾಧಿಸದಿದ್ದರೆ ಭಾರತ ದೇಶದಲ್ಲಿ ಬಡತನ ನಿರ್ಮೂಲನೆ ಸಾಧ್ಯವಾಗದು. ನಮ್ಮ ಬೃಹತ್ ಬಡತನ ನಿರ್ಮೂಲನ ಕಾರ್ಯಕ್ರಮದಿಂದ ರೈತರ ಜೀವನ ಮಟ್ಟ ಸುಧಾರಿಸಬೇಕಾಗಿದೆ. ರೈತರ ಉದ್ಧಾರವೇ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಮಹದಾಸೆಯಾಗಿದೆ.*<br>**– ರಾಜೀವ್ ಗಾಂಧಿ** |

# ಭಾಗ 3: ಪ್ರಗತಿಯ ವಿಮರ್ಶೆ

### 3.1 ಮೌಲ್ಯಮಾಪನಾಧ್ಯಯನ ಕಾರ್ಯ ಮಂಜೂರಾತಿ

2008-2013ರ ಅವಧಿಯಲ್ಲಿ ಅನುಷ್ಠಾನಿಸಿರುವ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ "**ಹಾಲು ಪ್ರೋತ್ಸಾಹಧನ ಯೋಜನೆ"ಯ** ಮೌಲ್ಯಮಾಪನವನ್ನು ಕೈಗೊಳ್ಳುವ ಕಾರ್ಯವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಲಹಾ ಸಂಸ್ಥೆಯಾಗಿರುವ ಮೆ. ರಿಮೋಟ್ ಸೆನ್ಸಿಂಗ್ ಇನ್‌ಸ್ಟ್ರುಮೆಂಟ್ಸ್, ಬೆಂಗಳೂರು, ಇವರಿಗೆ ವಹಿಸಿರುತ್ತದೆ. ಅಧ್ಯಯನದ ವಿಶಾಲ ಧ್ಯೇಯೋದ್ಧೇಶವು ಯೋಜನೆಯನ್ನು ಮೌಲ್ಯಮಾಪನ ಮಾಡುವುದು ಮತ್ತು ಸತ್ಯಾನ್ವೇಷಣೆಯ ಅಭಿಯಾನವಾಗಿ ಪದೋಲ್ಲೇಖದಲ್ಲಿ ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸುವುದು.

### 3.2 ಹಾಲು ಪ್ರೋತ್ಸಾಹಧನ ಬಿಡುಗಡೆ ಮತ್ತು ವಿತರಣೆ ಪದ್ಧತಿ

ಸರ್ಕಾರದಿಂದ ಲಭ್ಯವಾದ ಅನುದಾನವನ್ನು ಅವಲಂಬಿಸಿ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಮೂಲಕ ಎಲ್ಲಾ 13 ಜಿಲ್ಲಾ ಹಾಲು ಒಕ್ಕೂಟಗಳಿಗೆ (2008-2013) ಮತ್ತು ಹೊಸದಾಗಿ ಸ್ಥಾಪಿತವಾಗಿರುವ ಚಾಮರಾಜನಗರ ಹಾಲು ಒಕ್ಕೂಟಕ್ಕೆ ಏಪ್ರಿಲ್, 2015 ರಿಂದ ಪ್ರೋತ್ಸಾಹಧನದ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿದೆ. ಜಿಲ್ಲಾ ಹಾಲು ಒಕ್ಕೂಟಗಳು ತಮ್ಮ ಕ್ಲೇಮುಗಳನ್ನು ಪ್ರತಿ ತಿಂಗಳು ಮೊದಲ ವಾರದಲ್ಲಿ ಆಯುಕ್ತರು, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರಿಗೆ ಸಲ್ಲಿಸುತ್ತಿದ್ದಾರೆ. ಬಿಲ್ಲುಗಳನ್ನು ಪರಿಶೀಲಿಸಿ ಪುರಸ್ಕರಿಸಿ ಚೆಕ್‌ಗಳನ್ನು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಹಾಲು ಉತ್ಪಾದಕರ ಸಹಕಾರಿ ಸಂಘಗಳು ತಮ್ಮ ವ್ಯಾಪ್ತಿಯ ರೈತರು / ದನಗಳ ಮಾಲೀಕರಿಗೆ ಪಾವತಿಸಲು ಅನುವಾಗುವಂತೆ ವಿತರಿಸಲು ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಕಳುಹಿಸಲಾಗುತ್ತಿದೆ. ಸಂಬಂಧಪಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘದ ಕಾರ್ಯದರ್ಶಿಯು ಹಣ ಪಾವತಿಸಿದ ಬಗ್ಗೆ ಸ್ವೀಕೃತಿ ವಹಿಯನ್ನು ನಿರ್ವಹಿಸಿರುತ್ತಾರೆ. ಈ ಯೋಜನೆಯಡಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ 2013ರ ಅಂತ್ಯದ ವೇಳೆಗೆ ರೂ.1275.46 ಕೋಟಿಗಳಷ್ಟು ವೆಚ್ಚವನ್ನು ಮಾಡಲಾಗಿರುತ್ತದೆ.

# ಭಾಗ 4: ಸಮಸ್ಯೆಯ ಕಥನ

### 4.1 ಅಧ್ಯಯನದ ಉದ್ದೇಶ

ನಿಜ ಸ್ಥಿತಿಯನ್ನು ತಿಳಿದುಕೊಳ್ಳುವ ಧ್ಯೇಯದಿಂದ, ಸ್ಕೀಂನ್ನು ಮೌಲ್ಯಮಾಪನ ಮಾಡಿ, ಪದೋಲ್ಲೇಖದಲ್ಲಿ ಸೂಚಿಸಿರುವ ಪ್ರಶ್ನೆಗಳಿಗೆ ಉತ್ತರಿಸುವುದು ಸ್ಪಷ್ಟವಾದ ಅಧ್ಯಯನದ ಉದ್ದೇಶಗಳಾಗಿದೆ.

ಮೌಲ್ಯ ಮಾಪನ ಅಧ್ಯಯನಕ್ಕೆ ಪ್ರಶ್ನೆಗಳು;

1. ಪ್ರೋತ್ಸಾಹಧನವು ವಾಸ್ತವಿಕವಾಗಿ ಪ್ರೇರೇಪಣೆ ನೀಡುವಂತಿದೆಯೇ ಅಥವಾ ಸಹಾಯಧನವಾಗುತ್ತಿದೆಯೇ? ಯೋಜನೆಯು ಅಪೇಕ್ಷಿತ ಧ್ಯೇಯೋದ್ದೇಶಗಳನ್ನು ಸಂಧಿಸುತ್ತಿದೆಯೇ? ಇಲ್ಲವಾದರೆ, ಪರಿಗಣನೆಯ ಕ್ಷೇತ್ರಗಳಾವುವು ಮತ್ತು ಯಾವ ರೀತಿಯ ಸರಿಪಡಿಸುವ ಪ್ರಕ್ರಿಯೆ ಬೇಕಾಗಿದೆ?

2. ಪ್ರೋತ್ಸಾಹಧನದ ಮೊತ್ತವನ್ನು ಬದಲಾಯಿಸಬೇಕೆ? ಹಾಗಿದ್ದರೆ, ಎಷ್ಟಿರಬೇಕು? ಪ್ರೋತ್ಸಾಹಧನ ವಿತರಣೆ ವ್ಯವಸ್ಥೆಯು ಸಮರ್ಥವಾಗಿದೆಯೇ ಮತ್ತು ಪಥಭ್ರಷ್ಟತೆಯಿಂದ ಮುಕ್ತವಾಗಿದೆಯೇ? ಇಲ್ಲವಾದಲ್ಲಿ, ವ್ಯವಸ್ಥೆ ಉತ್ತಮಪಡಿಸಲು, ಅವಲಂಬಿಸ ಬೇಕಾದ ಸಲಹೆ ಏನು?

3. ಪ್ರೋತ್ಸಾಹಧನದ ಮೊತ್ತವನ್ನು ಹಾಲು ಪೂರೈಕೆದಾರರ ಬ್ಯಾಂಕ್ ಖಾತೆಗಳಿಗೆ ವಿದ್ಯುನ್ಮಾನ ತಿರುವಳಿ ಪದ್ಧತಿಯಲ್ಲಿ ವರ್ಗಾಯಿಸುವುದು ಯೋಜನೆಯ ಧ್ಯೇಯೋದ್ಧೇಶಗಳು ಮತ್ತು ಹಾಲು ಪೂರೈಕೆದಾರರ ಹಿತಾಸಕ್ತಿಯಿಂದ ಕೂಡಿದೆಯೇ? ಮತ್ತು ಅಧ್ಯಯನದ ಅವಧಿಯಲ್ಲಿ ಗಮನಿಸಿದ ಮತ್ತು ತಿಳಿಸಲ್ಪಟ್ಟ ಸಂಬಂಧಪಟ್ಟ ಅಂಶಗಳು.

# ಭಾಗ 5: ವ್ಯಾಪ್ತಿ, ವಾಸ್ತವವಾಂಶಗಳು ಮತ್ತು ಮೌಲ್ಯಮಾಪನದ ಪ್ರಶ್ನೆಗಳು

**5.1 ಸ್ಕೀಂನ ವ್ಯಾಪ್ತಿ**

ಸಮಗ್ರ ಕರ್ನಾಟಕ ರಾಜ್ಯವು ಸ್ಕೀಂನ ವ್ಯಾಪ್ತಿಗೆ ಒಳಪಟ್ಟಿದೆ.

**5.2 ಸ್ಕೀಂನ ಧ್ಯೇಯೋದ್ದೇಶಗಳು**

ಸ್ಕೀಂನ ವಿಸ್ತಾರವಾದ ಧ್ಯೇಯೋದ್ದೇಶಗಳು/ಉದ್ದೇಶಗಳು ಇಂತಿವೆ.

1. ಗ್ರಾಮೀಣ ಪ್ರದೇಶಗಳಲ್ಲಿ ಹೈನುಗಾರಿಕೆ ಚಟುವಟಿಕೆಯನ್ನು ವಿಶೇಷವಾಗಿ ಸಣ್ಣ/ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು/ಭೂರಹಿತರು ಮತ್ತು ಸಮಾಜದ ದುರ್ಬಲ ವರ್ಗದವರಿಗೆ ಲಾಭದಾಯಕವಾಗಿಸುವುದು.
2. ಗ್ರಾಮೀಣ ಯುವಕರನ್ನು ಹೈನು ಚಟುವಟಿಕೆಯನ್ನು ಕೈಗೊಳ್ಳುವಂತೆ ಪ್ರೇರೇಪಿಸುವುದು, ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಮತ್ತು ಜೀವನೋಪಾಯಕ್ಕಾಗಿ ನಗರಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದು.
3. ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಉತ್ಪಾದಕ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವುದು.
4. ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ಇದರಿಂದ ಆಹಾರ ಭದ್ರತೆ ದೊರೆಯುತ್ತದೆ.ಮತ್ತು
5. ಸಹಕಾರಿ ವಲಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹೈನುಗಾರಿಕೆ ಚಟುವಟಿಕೆಗಳಿಗೆ ಬೆಂಬಲ ಮತ್ತು ಉತ್ತೇಜನ ನೀಡುವುದು.

**5.3 ಮೌಲ್ಯಮಾಪನದ ಪ್ರಶ್ನೆಗಳು**

1. ರಾಜ್ಯ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಪ್ರೋತ್ಸಾಹಧನದ ಮೊತ್ತವು ಹಾಲು ಪೂರೈಕೆದಾರನನ್ನು ತಲುಪಲು ತೆಗೆದುಕೊಂಡ ಸರಾಸರಿ ಸಮಯಾವಧಿ? ಇದು ಸುಧೀರ್ಘವೇ, ಅಲ್ಪಾವಧಿ ಅಥವಾ ಸಮಂಜಸವೇ?
2. ಬಿಡುಗಡೆಯಾದ ಹಣವು ಸಂಪೂರ್ಣವಾಗಿ ರೈತರಿಗೆ ತಲುಪುತ್ತಿದೆಯೇ ಅಥವಾ ವಿತರಣೆಯ ಹಂತದಲ್ಲಿ ಯಾವುದೇ ಅನಪೇಕ್ಷಿತ/ಅನ್ಯಾಯಿಕ ಕಡಿತಗಳನ್ನು ಮಾಡಲಾಗುತ್ತಿದೆಯೇ?
3. ಹಾಲು ಉತ್ಪಾದನೆ, ಗುಣಮಟ್ಟದ ಹೈನುರಾಸುಗಳ ಸಂಖ್ಯೆ ಮತ್ತು ನಗರ ಪ್ರದೇಶಗಳಿಗೆ ಗ್ರಾಮೀಣ ಯುವಕರ ವಲಸೆಯನ್ನು ಕಡಿಮೆ ಮಾಡುವಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಭಾವವೇನು?
4. ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹಧನ ದರ ರೂ.2.00(ಹಿಂದಿನ) ಅಥವಾ ರೂ.4.00 (ಪ್ರಸ್ತುತ), ಸಾಕಾಗುವುದೇ? ಬದಲಾಯಿಸಬೇಕೆ ? ಏಕೆ, ಹೇಗೆ ಮತ್ತು ಎಷ್ಟು?
5. ಯೋಜನೆಯನ್ನು ಜಾರಿಗೊಳಿಸಿದ್ದರಿಂದ ರೈತರು ಮತ್ತು ಕೃಷಿಕಾರ್ಮಿಕರ ಸಾಮಾಜಿಕ–ಆರ್ಥಿಕ ಸ್ಥಿತಿಯ ಮೇಲೆ ಉಂಟಾದ ಪ್ರಭಾವವೇನು?
6. ಪ್ರೋತ್ಸಾಹಧನ ನೀಡಿದ್ದರಿಂದ ಆಹಾರ ನೀಡಿಕೆ, ಲಸಿಕೆ ಹಾಕಿಸುವುದು, ಜಂತು ನಿವಾರಣೆ, ಕರುಗಳ ಪಾಲನೆ ಮತ್ತು ಆಹಾರದ ಸಮಂಜಸ ಬಳಕೆಯ ನಿರ್ವಹಣಾ ಪದ್ಧತಿಗಳ ತಿಳುವಳಿಕೆ ಸುಧಾರಿಸಿದೆಯೇ?
7. ಯೋಜನೆಯು ಜಾರಿಯಲ್ಲಿರುವುದರಿಂದ ಹೈನುಗಾರಿಕಾ ಚಟುವಟಿಕೆಗಳನ್ನು ಕೈಗೊಳ್ಳಲು ಗ್ರಾಮೀಣ ಯುವಕರು ಪ್ರಭಾವಿತರಾಗಿದ್ದಾರೆಯೆ?
8. ಗ್ರಾಮೀಣ ಪ್ರದೇಶಗಳಲ್ಲಿ ಹೈನು ಉದ್ಯಮದ ಲಾಭದಾಯಕತೆಯಲ್ಲಿ ಯೋಜನೆಯು ಬದಲಾವಣೆ ಮಾಡಿದೆಯೇ?
9. ಯಾವುದೇ ಹಂತದಲ್ಲಿ ಹೆಚ್ಚು ಮೊತ್ತ ಪಾವತಿಸಲಾಗುತ್ತಿದೆಯೇ? ತಡೆಯಲು ಯಾವುದೇ ಪರಿಶೀಲನೆ ಮತ್ತು ಸರಿದೂಗಿಸುವ ವ್ಯವಸ್ಥೆ ಇದೆಯೇ?

# ಭಾಗ 6: ಮೌಲ್ಯ ಮಾಪನದ ವಿನ್ಯಾಸ

ಎಲ್ಲಾ ಪ್ರಶ್ನೆಗಳನ್ನು ಪರಿಗಣಿಸಿ, ಕರ್ನಾಟಕ ಸರ್ಕಾರದ ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದ ಪರವಾಗಿ ಒಂದು ವ್ಯವಸ್ಥಿತ ಅಧ್ಯಯನವನ್ನು ಯೋಜಿಸಿ ಅನುಮೋದನೆ ಪಡೆದುಕೊಳ್ಳಲಾಯಿತು. ಅನುಮೋದಿತ ಕ್ರಿಯಾ ಯೋಜನೆಯಂತೆ ಪದೋಲ್ಲೇಖದಲ್ಲಿರುವ ಅಂಶಗಳಿಗೆ ಬದ್ಧರಾಗಿ ಅಧ್ಯಯನವನ್ನು ನಡೆಸಲಾಯಿತು. ಇದರ ಪ್ರತಿಫಲವಾಗಿ ಪದೋಲ್ಲೇಖದ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ದೊರಕಿವೆ ಮತ್ತು ಹೆಚ್ಚುವರಿಯಾಗಿ, ಕರ್ನಾಟಕದಲ್ಲಿ ಜಾರಿಯಲ್ಲಿರುವ ಹಾಲು ಪ್ರೋತ್ಸಾಹಧನ ಯೋಜನೆಯ ಸುಧಾರಣೆಗೆ ಸೂಕ್ತ ವಲಯಗಳನ್ನು ಗುರುತಿಸಿ ಶಿಫಾರಸ್ಸುಗಳನ್ನು ಮಾಡಲಾಗಿದೆ.

## 6.1 ಲಾಗ್ ಫ್ರೇಮ್: ತಾರ್ಕಿಕ ಚೌಕಟ್ಟು – ಮೌಲ್ಯ ಮಾಪನಕ್ಕೆ ಅನುಸರಿಸಿದ ತಾರ್ಕಿಕ ವಿನ್ಯಾಸ

| | |
|---|---|
| ಮುಖ್ಯ ಘಟಕಗಳು | ಪಾಲುದಾರರು – ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, 13 ಜಿಲ್ಲಾ ಹಾಲು ಒಕ್ಕೂಟಗಳು, ಜಿಲ್ಲೆ ಮತ್ತು ಸ್ಥಳೀಯ ಪಶುವೈದ್ಯಕೀಯ ಸಂಸ್ಥೆಗಳು, ಅಧ್ಯಯನಕ್ಕೆ ಜೋಡಿಸಿದ ಸ್ಥಳೀಯ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಮತ್ತು ಚದುರಿದಂತಿರುವ ನಿಯಂತ್ರಿತ ಸಮೂಹದ ರೈತರು |
| ಆಧ್ಯಯನ ಅನುಷ್ಠಾನದ ಧ್ಯೇಯೋದ್ದೇಶಗಳು | ಹಾಲು ಪ್ರೋತಾಹಧನ ಯೋಜನೆಯ ಪ್ರಭಾವವನ್ನು ಅಧ್ಯಯನ ಮಾಡುವುದು – ಗ್ರಾಮೀಣ ಪ್ರದೇಶಗಳಲ್ಲಿ ಹಾಲಿನ ಉತ್ಪಾದನೆ, ಪ್ರೋತ್ಸಾಹಧನ ವಿತರಣಾ ವ್ಯವಸ್ಥೆಯ ಬಗೆಗಿನ ಸಾಂಸ್ಥಿಕ ಮನೋಭಾವ, ಹೈನುಗಾರರಲ್ಲಿ ಉಂಟಾದ ಸಾಮಾಜಿಕ – ಆರ್ಥಿಕ ಬದಲಾವಣೆಗಳು, ಹಾಲು ಉತ್ಪಾದನೆಯ ಲಾಭದಾಯಕತೆ ಮತ್ತು ಯೋಜನೆಯ ಸಾಮಾಜಿಕ ಸ್ವೀಕಾರ. ರಾಜ್ಯದಲ್ಲಿ ಯೋಜನೆಯ ಸಮರ್ಥ ವಿತರಣಾ ವ್ಯವಸ್ಥೆಗೆ ಸೂಕ್ತ ಸರಿಪಡಿಸುವ ಕ್ರಮಗಳನ್ನು ಕುರಿತು ಸಲಹೆ ಮತ್ತು ಶಿಫಾರಸ್ಸುಗಳನ್ನು ಸಹಾ ಮಾಡುವುದು |
| ಪ್ರತಿಫಲ (ಪರಿಮಾಣಾತ್ಮಕ ಅಧ್ಯಯನ) | ಹಾಲಿನ ಉತ್ಪಾದನೆ ಮತ್ತು ಹೈನು ರಾಸುಗಳ ಸಂಖ್ಯೆಯಲ್ಲಿ ಹೆಚ್ಚಳ, ಹಾಲು ಉತ್ಪಾದಕರ ಸಹಕಾರಿ ಸಂಘಗಳ ಪಾತ್ರ, ಪ.ಜಾ ಮತ್ತು ಪ.ಪಂ.ಜನರ ಭಾಗವಹಿಸುವಿಕೆ, ಸಣ್ಣ, ಅತಿ ಸಣ್ಣ ಮತ್ತು ಭೂರಹಿತ ರೈತರು ಮತ್ತು ಅವರಲ್ಲಿ ಉಂಟಾದ ಸಾಮಾಜಿಕ– ಆರ್ಥಿಕ ಬದಲಾವಣೆಗಳು, ಯುವಕರ ವಲಸೆ ಇವುಗಳನ್ನು ಬೆಳವಣಿಗೆಯಲ್ಲಾದ ಬದಲಾವಣೆಗಳು – ಈ ಎಲ್ಲಾ ಸೂಚಕಗಳನ್ನು ಪರಿಗಣಿಸಿದೆ. ಮುಂದುವರಿದು, ಋಣಾತ್ಮಕ ಇಲ್ಲವೆ ಧನಾತ್ಮಕ ಬೆಳವಣಿಗೆಯ ಪ್ರಾಮುಖ್ಯತೆಯನ್ನು ತಿಳಿಯಲು ನಿಯಂತ್ರಕ ಸಮೂಹಕ್ಕೆ ಹೋಲಿಕೆಯನ್ನೂ ಮಾಡಲಾಗಿದೆ. |
| ಯೋಜಿತ ಅಲ್ಪಾವಧಿ ಪ್ರತಿಫಲ (ಗುಣಾತ್ಮಕ ಅಧ್ಯಯನ) | ಆದಾಯದ ಮಟ್ಟದಲ್ಲಿ ಏರಿಕೆ, ಉತ್ಪಾದನೆ, ಪಾಲನೆ ಮಾಡಲಾದ ಹೈನು ರಾಸುಗಳ ಸಂಖ್ಯೆಯಲ್ಲಿ ಏರಿಕೆ, ಗ್ರಾಮ ಮಟ್ಟದಲ್ಲಿ ಹೆಚ್ಚಿದ ಹೈನು ಚಟುವಟಿಕೆ |
| ಯೋಜಿತ ಧೀರ್ಘಾವಧಿ ಪ್ರತಿಫಲ (ಗುಣಾತ್ಮಕ ಅಧ್ಯಯನ) | ಧನಾತ್ಮಕ ಸಾಮಾಜಿಕ – ಆರ್ಥಿಕ ಬದಲಾವಣೆಗಳು, ಹೈನುಗಾರಿಕೆಯನ್ನು ಅಳವಡಿಸಿಕೊಂಡು ನಗರಗಳಿಗೆ ಕಡಿಮೆಯಾದ ಯುವಕರ ವಲಸೆ, ಸ್ಥಳೀಯ ಹಾಲು ಉತ್ಪಾದಕರ ಸಂಘಕ್ಕೆ ಹಾಲು ಪೂರೈಸಿದವರಿಗೆ ಲಾಭದಾಯಕ ದರ ಪಾವತಿ ಮತ್ತು ಸಹಕಾರಿ ವಲಯದಲ್ಲಿ ಹೈನುಗಾರಿಕೆ ಚಟುವಟಿಕೆಯಲ್ಲಿ ಸುಸ್ಥಿರ ಬೆಳವಣಿಗೆಯನ್ನು ಕಾಣುವುದು. ಅಂತಿಮವಾಗಿ ರಾಜ್ಯದಲ್ಲಿ ಆಹಾರ ಮತ್ತು ಪೌಷ್ಟಿಕತೆಗೆ ಭದ್ರತೆಯ ಖಾತರಿ ನೀಡುವುದು. |

# ಭಾಗ 7: ಮೌಲ್ಯ ಮಾಪನದ ವಿಧಾನ

## 7.1: ಮಾದರಿ ವಿಧಾನ

ರಾಜ್ಯದಲ್ಲಿ 13 ಜಿಲ್ಲಾ ಹಾಲು ಒಕ್ಕೂಟಗಳು (2008-13) ಮತ್ತು 2015ರಲ್ಲಿ ಹೊಸದಾಗಿ ಸ್ಥಾಪಿತವಾದ ಚಾಮರಾಜನಗರ ಹಾಲು ಒಕ್ಕೂಟ ಇರುತ್ತವೆ. ಜಿಲ್ಲಾ ಹಾಲು ಒಕ್ಕೂಟಗಳು 19.41 ಲಕ್ಷಕ್ಕೂ ಮೀರಿ ರೈತರಿಂದ ಹಾಲನ್ನು ಸಂಗ್ರಹಿಸುತ್ತವೆ. ಈ ಮೊದಲು ಮೌಲ್ಯಮಾಪನ ಪ್ರಶ್ನೆಗಳಲ್ಲಿ ತಿಳಿಸಿರುವಂತೆ ಪ್ರತಿ ಹಾಲು ಒಕ್ಕೂಟವನ್ನು ಎಲ್ಲಾ ನಿಯತಾಂಕಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡಲಾಗಿರುತ್ತದೆ. ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸದಸ್ಯ ಬಲವನ್ನು ಆಧರಿಸಿ ಅಧ್ಯಯನ ಸಮೂಹದಲ್ಲಿ ಪ್ರತಿಯೊಂದು ಸಂಘದಿಂದ ಅನುಪಾತಾನುಸಾರ ಸಣ್ಣ ರೈತರು, ಅತಿ ಸಣ್ಣರೈತರು, ಭೂರಹಿತರು, ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 300 ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಮಾದರಿ ಸಮೂಹನ್ನು ಗುರುತಿಸುವ ಉದ್ದೇಶದಿಂದ ಒಂದು ಹಾಲು ಉತ್ಪಾದಕರ ಸಹಕಾರಿ ಸಂಘದ 325 ಸದಸ್ಯರನ್ನು ಒಂದು ಅಧ್ಯಯನ ಸಮೂಹ ಎಂದು ತೆಗೆದುಕೊಳ್ಳಲಾಯಿತು. ಅನಿಯತ ಮಾದರಿಯ ಆಯ್ಕೆಗಾಗಿ ಎಲ್ಲಾ 13 ಹಾಲು ಒಕ್ಕೂಟಗಳನ್ನು ಮೂರು ತುಕಡಿಗಳಾಗಿ ವಿಂಗಡಿಸಲಾಯಿತು.

ತುಕಡಿ 1 – 4 ಜಿಲ್ಲಾ ಹಾಲು ಒಕ್ಕೂಟಗಳು ( ಕಲಬುರಗಿ ಮತ್ತು ಬೀದರ್ ಜಿಲ್ಲಾ ಹಾಲು ಒಕ್ಕೂಟ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಹಾಲು ಒಕ್ಕೂಟ, ಧಾರವಾಡ, ಹಾವೇರಿ ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಹಾಲು ಒಕ್ಕೂಟ ಮತ್ತು ಬೆಳಗಾವಿ ಜಿಲ್ಲಾ ಹಾಲು ಒಕ್ಕೂಟ),

ತುಕಡಿ –2 ( ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲಾ ಹಾಲು ಒಕ್ಕೂಟ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಹಾಲು ಒಕ್ಕೂಟ, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟ, ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಹಾಲು ಒಕ್ಕೂಟ),

ತುಕಡಿ –3 ಐದು ಜಿಲ್ಲಾ ಹಾಲು ಒಕ್ಕೂಟಗಳನ್ನು ಒಳಗೊಂಡಿದೆ. (ಬೆಂಗಳೂರು ನಗರ ಮತ್ತು ಗ್ರಾಮಾಂತರ, ರಾಮನಗರ ಜಿಲ್ಲಾ ಹಾಲು ಒಕ್ಕೂಟ, ತುಮಕೂರು ಜಿಲ್ಲಾ ಹಾಲು ಒಕ್ಕೂಟ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ಮತ್ತು ಮಂಡ್ಯ ಜಿಲ್ಲಾ ಹಾಲು ಒಕ್ಕೂಟ).

ತುಕಡಿ –1ರಲ್ಲಿ ಅಧ್ಯಯನಕ್ಕೆ 13 ಸಮೂಹಗಳನ್ನು ಆಯ್ಕೆ ಮಾಡುವಾಗ ಜಿಲ್ಲಾ ಕೇಂದ್ರಕ್ಕೆ ಹತ್ತಿರದ ಒಂದು, ತಾಲೂಕಾ ಕೇಂದ್ರಕ್ಕೆ ಹತ್ತಿರದ ಒಂದು, ಹೋಬಳಿ ಕೇಂದ್ರಕ್ಕೆ ಹತ್ತಿರದ ಒಂದು ಮತ್ತು ಗ್ರಾಮ ಮಟ್ಟದಲ್ಲಿ ಒಂದು ಸಮೂಹವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಇದೇ ವಿನ್ಯಾಸವನ್ನು 4 ಜಿಲ್ಲಾ ಹಾಲು ಒಕ್ಕೂಟಗಳಿರುವ ತುಕಡಿ –2 ಮತ್ತು 5 ಜಿಲ್ಲಾ ಹಾಲು ಒಕ್ಕೂಟಗಳಿರುವ ತುಕಡಿ–3ಕ್ಕೂ ಅನುಸರಿಸಲಾಯಿತು. ಈ ವಿನ್ಯಾಸವು ಎಲ್ಲಾ 29 ಜಿಲ್ಲೆಗಳನ್ನು ಒಳಗೊಂಡಂತೆ ಅನಿಯತ ಸಮೂಹದ ಮಾದರಿಗಳನ್ನು ಆಯ್ಕೆ ಮಾಡಲು ಸಾಧ್ಯವಾಯಿತು. (ಯಾದಗಿರಿ ಜಿಲ್ಲೆಯಲ್ಲಿ ಕಾರ್ಯನಿರತ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಲ್ಲದ ಕಾರಣ ಗಣನೆಗೆ ತೆಗೆದುಕೊಂಡಿರುವುದಿಲ್ಲ). ಈ ವಿಧಾನವು ರಾಜ್ಯಾದ್ಯಂತ ಏಕರೂಪದ ಅಧ್ಯಯನ ಮಾದರಿಗಳ ಹಂಚಿಕೆಗೆ ಕಾರಣವಾಯಿತು. ಮಿಗಿಲಾಗಿ, ಯಾವುದೇ ಜಿಲ್ಲೆ/ಒಕ್ಕೂಟದ ವ್ಯಾಪ್ತಿಯಲ್ಲಿ ಯೋಜನೆಯ ಪ್ರಭಾವವನ್ನು ಮೌಲ್ಯಮಾಪನ ಮಾಡಲು ಪ್ರತಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ 25 ರಂತೆ 325 ಹೈನುಗಾರರನ್ನು ನಿಯಂತ್ರಿತ ಮಾದರಿಯಾಗಿ (ಎಲ್ಲಿ ಯೋಜನೆಯು ಜಾರಿಯಲ್ಲಿ ಇಲ್ಲವೋ) ಪರಿಗಣಿಸಲಾಯಿತು. ಉದಾಹರಣೆಗೆ, ಜಿಲ್ಲಾ ಹಾಲು ಒಕ್ಕೂಟಗಳನ್ನು ಬಿಟ್ಟು ಹೊಟೇಲುಗಳಿಗೆ ಹಾಲು ಪೂರೈಸುವವರನ್ನು "**ಯೋಜನೆಯು ಜಾರಿಯಲ್ಲಿಲ್ಲದ ನಿಯಂತ್ರಿತ ಮಾದರಿ ಸಮೂಹ**" ಎಂದು ಪರಿಗಣಿಸಲಾಗಿದೆ.

**7.2 ಅಧ್ಯಯನ ಸಾಧನಗಳು**: ಗಣಕ, ವ್ಯಕ್ತಿಗತ ಗಣಕ ಯಂತ್ರ, ಅಂಕ ಗಣಕ ಯಂತ್ರ, ಹಾಳೆಗಳು ಮತ್ತು ತಂತ್ರಾಂಶವನ್ನು ಪ್ರಾಯೋಗಿಕ ಅಧ್ಯಯನ ಮತ್ತು ಮುಖ್ಯ ಮೌಲ್ಯ ಮಾಪನ ಅಧ್ಯಯನಕ್ಕೆ ಸಾಧನಗಳಾಗಿ ಬಳಸಲಾಯಿತು. ನೋಡಲ್ ಅಧಿಕಾರಿಗಳಗಾಗಿ ಮಾರ್ಗಸೂಚಿಗಳು, ಪರಿಶೀಲನಾ ಪಟ್ಟಿ, ದತ್ತಾಂಶ ಪರಿಶೀಲನಾ ನಮೂನೆಗಳನ್ನು ಸಹಾ ಅಂಕಿ ಅಂಶ ಸಂಗ್ರಹಣೆ ಮತ್ತು ಸಮೀಕ್ಷೆಗಾಗಿ ತಯಾರಿಸಲಾಯಿತು.

**7.3 ಮೌಲ್ಯ ಮಾಪನದಲ್ಲಿ ಅನುಸರಿಸಿದ ಹಂತಗಳು**

1. **ಸರ್ಕಾರದ ಆದೇಶದ ಅಧ್ಯಯನ ಮತ್ತು ಪರಿಶೀಲನೆ**: ಅಧ್ಯಯನದ ಧೇಯೋದ್ದೇಶಗಳು ಮತ್ತು ಸತ್ಯಾಂಶ ಶೋಧನೆಗಾಗಿ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗೆ ಸಂಬಂಧಿಸಿದ ಎಲ್ಲಾ ಸರ್ಕಾರಿ ಆದೇಶಗಳು ಮತ್ತು ಪದೋಲ್ಲೇಖಗಳನ್ನು ಅಭ್ಯಸಿಸಲಾಯಿತು.

2. **ಅಭಿವೃದ್ಧಿಯ ಸೂಚಕಗಳು**: ಅಧ್ಯಯನದ ಧೇಯೋದ್ದೇಶಗಳು ಮತ್ತು ಪದೋಲ್ಲೇಖದಲ್ಲಿರುವ ಪ್ರಶ್ನೆಗಳನ್ನು ಆಧರಿಸಿ ಸೂಕ್ತ ಸೂಚಕಗಳನ್ನು ಗುರುತಿಸಲಾಯಿತು ಮತ್ತು ಇದನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಂಯೋಜಕರೊಡನೆ ಚರ್ಚಿಸಲಾಯಿತು.

3. **ಸಮೀಕ್ಷೆಯ ನಮೂನೆಗಳು /ಪ್ರಶ್ನಾವಳಿಗಳ ತಯಾರಿಕೆ:** ಕನ್ನಡ ಭಾಷೆಯಲ್ಲಿ ಸೂಕ್ತ ನಮೂನೆಗಳನ್ನು ಪ್ರಶ್ನಾವಳಿಗಳಾಗಿ ತಯಾರಿಸಲಾಯಿತು ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಂಯೋಜಕರೊಡನೆ ಸಮಾಲೋಚಿಸಲಾಯಿತು. ನಮೂನೆಗಳು ಇಂತಿವೆ ಮತ್ತು ಅಂತ್ಯದಲ್ಲಿ ಅಡಕಗೊಳಿಸಿದೆ.

ನಮೂನೆ ಸಂ.1 ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳಗಾಗಿ

ನಮೂನೆ ಸಂ.2 ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಗಾಗಿ

ನಮೂನೆ ಸಂ.3 ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳಗಾಗಿ

ನಮೂನೆ ಸಂ.4 ಅಧ್ಯಯನಕ್ಕೆ ಒಳಪಟ್ಟ ಸ್ಥಳೀಯ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲು ಪೂರೈಸುವ ರೈತರು

ನಮೂನೆ ಸಂ.5 ನಿಯಂತ್ರಕ ಸಮೂಹದ ಹಾಲು ಉತ್ಪಾದಕ ರೈತರು

**7.4 ಮೌಲ್ಯ ಮಾಪನ ನಡೆ ಮತ್ತು ವಿಧಾನ**

ಮೌಲ್ಯಮಾಪನಕ್ಕೆ ರೂಢಿತ ಪ್ರಶ್ನಾವಳಿಗಳನ್ನು ಉಪಯೋಗಿಸಲಾಯಿತು. ಗುಣಾತ್ಮಕ ಮತ್ತು ಪರಿಮಾಣಾತ್ಮಕ ಪ್ರಶ್ನೆಗಳನ್ನು ಕೇಳಯೂ ಪಾಲುದಾರರಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು.


**ಗ್ರಾಮದಲ್ಲಿ ಹೈನುಗಾರರ ಜೊತೆ ಮಹಿಳಾ ಎಣಿಕೆದಾರರು**


ಹಾಲು ಉತ್ಪಾದಕರ ಸಂಘದಲ್ಲಿ ಹಾಲು ಪೂರೈಸುವವರು

## 7.5 ಪಾಲುದಾರರು ಮತ್ತು ಪ್ರತಿಕ್ರಿಯಾದಾರರ ಸಂಖ್ಯೆ

ಅಧ್ಯಯನದಲ್ಲಿ ಪರಿಗಣಿಸಿ ಮಾದರಿಯಾಗಿ ತೆಗೆದುಕೊಂಡ ಪಾಲುದಾರರು ಮತ್ತು ಅವರ ಸಂಖ್ಯೆ ವಿವರಗಳನ್ನು ಕೆಳಗೆ ನೀಡಲಾಗಿದೆ. ನೋಡಲ್ ಅಧಿಕಾರಿಗಳಿಂದ ಪ್ರಶ್ನಾವಳಿಗಳನ್ನು ಕೊಟ್ಟು ಮೌಲ್ಯಮಾಪಕರು ಅಂಕಿ ಅಂಶ, ಅಭಿಪ್ರಾಯ ಮತ್ತು ಸಲಹೆಗಳನ್ನು ಮೌಲ್ಯಮಾಪನ ಅಧ್ಯಯನಕ್ಕಾಗಿ ಸಂಗ್ರಹಿಸಿರುವರು.

| **ಪಾಲುದಾರರು** | ಪ್ರತಿಕ್ರಿಯಾದಾರರ **ಸಂಖ್ಯೆ** |
|---|---|
| ಪಶು ಸಂಗೋಪನಾ ಇಲಾಖೆಯ ಕೇಂದ್ರ ಕಛೇರಿಯ ಅಧಿಕಾರಿಗಳು | **3** |
| ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು | 14 |
| ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕರುಗಳು | 21 |
| ಸ್ಥಳೀಯ ಪಶುವೈದ್ಯರು | 48 |
| ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳು | 44 |
| ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕ್ರಿಯಾಶೀಲ ಸದಸ್ಯರು | 3900 |
| ಯೋಜನೆ ಜಾರಿಯಲ್ಲಿಲ್ಲದ ಕ್ಷೇತ್ರದ ಹಾಲು ಉತ್ಪಾದಕರು | 325 |
| **ಒಟ್ಟು** | **4355** |

## 7.6 **ಪ್ರಾಯೋಗಿಕ ಅಧ್ಯಯನ**

ಪ್ರಧಾನ ಸಂಶೋದಕರು, ಮುಖ್ಯ ನೋಡಲ್ ಅಧಿಕಾರಿ, ರಿಮೋಟ್ ಸೆನ್ಸಿಂಗ್ ಇನ್‌ಸ್ಟ್ರುಮೆಂಟ್ಸ್ ಇವರಿಂದ ನಿಯೋಜಿತ ನೋಡಲ್ ಅಧಿಕಾರಿ ಮತ್ತು ಸ್ಥಳೀಯ ಮುಖ್ಯ ಪಶುವೈದ್ಯಾಧಿಕಾರಿ ಇವರುಗಳನ್ನು ಒಳಗೊಂಡ ತಂಡವು ಪ್ರಾಯೋಗಿಕ ಅಧ್ಯಯನಕ್ಕಾಗಿ ಬೆಂಗಳೂರು ನಗರ ಜಿಲ್ಲಾ ಉತ್ತರ ತಾಲೋಕಿನ ಮೀನುಕುಂಟೆ ಹೊಸೂರು ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಭೇಟಿ ನೀಡಿತು. ಪ್ರಾಯೋಗಿಕ ಅಧ್ಯಯನದ ಧ್ಯೇಯೋದ್ದೇಶವು ಅಗತ್ಯವಾದ ದತ್ತಾಂಶವನ್ನು ಸಂಗ್ರಹಿಸಲು ಪ್ರಶ್ನಾವಳಿಗಳ "ಅನ್ವಯಿಸುವಿಕೆ, ಸೂಕ್ತತೆ ಮತ್ತು ವ್ಯಾಪಕತೆ"ಯನ್ನು ಪರೀಕ್ಷಿಸುವುದಾಗಿತ್ತು. ಸತ್ಯಾಂಶಗಳು ಮತ್ತು ಸ್ಥಳೀಯವಾಗಿ ಇದ್ದ ಸನ್ನಿವೇಶಗಳಿಗನುಸಾರ ಪ್ರಶ್ನಾವಳಿಗಳನ್ನು ನಾಜೂಕುಗೊಳಿಸಲಾಯಿತು.








**ಬೆಂಗಳೂರು ಉತ್ತರ ತಾಲೋಕಿನ ಮೀನುಕುಂಟೆ ಹೊಸೂರು ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಅಧ್ಯಯನ ತಂಡದ ಭೇಟಿ**

# ಭಾಗ 8: ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ

**8.1 ಮೌಲ್ಯ ಮಾಪನ ತಂಡದ ಸದಸ್ಯರು:**

ಮೌಲ್ಯ ಮಾಪನ ಅಧ್ಯಯನಕ್ಕೆ ತೊಡಗಿಸಿದ ಮಾನವ ಶಕ್ತಿಯ ವಿವರವನ್ನು ಕೋಷ್ಟಕ–1 ರಲ್ಲಿ ನೀಡಿದೆ.

**ಕೋಷ್ಟಕ– 1: ಮೌಲ್ಯ ಮಾಪನ ತಂಡದ ಸದಸ್ಯರು ಮತ್ತು ಸಂಖ್ಯೆ**

| ಕ್ರ.ಸಂ. | **ಮೌಲ್ಯ ಮಾಪನ ತಂಡದ ಸದಸ್ಯರು** | **ಸಂಖ್ಯೆ** |
|---|---|---|
| 1 | ಪ್ರಧಾನ ಸಂಶೋಧಕರು | 1 |
| 2 | ಸಮಾಜ ವಿಜ್ಞಾನಿ | 1 |
| 3 | ಸಂಶೋಧನಾ ಸಹಾಯಕ/ಸಾಂಖ್ಯಿಕ ನಿಪುಣ | 1 |
| 4 | ಮುಖ್ಯ ನೋಡಲ್ ಅಧಿಕಾರಿ | 1 |
| 5 | ನೋಡಲ್ ಅಧಿಕಾರಿಗಳು | 11 |
| 6 | ಕ್ಷೇತ್ರ ಎಣಿಕೆದಾರರು | 38 |
| 7 | ದತ್ತಾಂಶ ಕಾರ್ಯನಿರ್ವಾಹಕರು | 1 |
| | **ಒಟ್ಟು** | **54** |

**8.2 ನೋಡಲ್ ಅಧಿಕಾರಿಗಳು ಕ್ಷೇತ್ರ ಮಟ್ಟದಲ್ಲಿ ಸಮೀಕ್ಷೆಯ ಮುಂದಾಳತ್ವ ವಹಿಸುವ ಕಾರ್ಯ:** ಅಧ್ಯಯನಕ್ಕೆ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಹಿರಿಯ ಹುದ್ದೆಗಳಲ್ಲಿದ್ದು ಕ್ಷೇತ್ರಾನುಭವವಿದ್ದ ನಿವೃತ್ತ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ಗುರುತಿಸಲಾಯಿತು. ನೋಡಲ್ ಅಧಿಕಾರಿಗಳ ಪ್ರಮುಖ ಕಾರ್ಯವು ಅಧ್ಯಯನಕ್ಕೆ ಮತ್ತು ನಿಯಂತ್ರಕ ಸಮೂಹಗಳನ್ನು ಆಯ್ಕೆ ಮಾಡುವುದು, ಆಯ್ಕೆಯಾದ ಎಣಿಕೆದಾರರನ್ನು ತರಬೇತುಗೊಳಿಸುವುದು ಮತ್ತು ಜಿಲ್ಲಾ ಹಾಲು ಒಕ್ಕೂಟದ ವಿಸ್ತರಣಾಧಿಕಾರಿಗಳು ಹಾಗೂ ಸ್ಥಳೀಯ ಪಶುವೈದ್ಯರುಗಳ ಸಹಾಯದಿಂದ ಕೆಳ ಹಂತದಲ್ಲಿ ಮಾಹಿತಿ ಸಂಗ್ರಹಣೆಯ ಪೂರ್ಣ ನಿಗಾವಣೆ ಮಾಡುವುದಾಗಿತ್ತು. ನಮೂನೆ 1 ಮತ್ತು 2 ರಲ್ಲಿ ಜಿಲ್ಲಾ ಉಪ ನಿರ್ದೇಶಕರು, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸ್ಥಳೀಯ ಪಶು ವೈದ್ಯರು ಮತ್ತು ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಂದ ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ ತಿಳಿಸಿಕೊಡಲಾಗಿತ್ತು.

**8.3 ಸಾಮರ್ಥ್ಯಾಭಿವೃದ್ಧಿ ಚಟುವಟಿಕೆ:** ಎಲ್ಲಾ 11 ನೋಡಲ್ ಅಧಿಕಾರಿಗಳ ಕಾರ್ಯವನ್ನು ನಾಜೂಕುಗೊಳಿಸಲು ಹಾಲು ಪ್ರೋತ್ಸಾಹಧನ ಯೋಜನೆಯ ಧ್ಯೇಯೋದ್ದೇಶಗಳು ಮತ್ತು ಇತರ ಪ್ರಮುಖ ಅಂಶಗಳನ್ನು ತಿಳಿಸಿಕೊಡಲು ಒಂದು ದಿನದ "ತರಬೇತಿದಾತರ ತರಬೇತಿ"ಯನ್ನು ಆಯೋಜಿಸಲಾಗಿತ್ತು. ನಮೂನೆಗಳ ಬಳಕೆ ಮತ್ತು ಅಧ್ಯಯನ ಹಾಗೂ ನಿಯಂತ್ರಕ ಸಮೂಹಗಳ ರೈತರಿಂದ ಕ್ಷೇತ್ರ ಮಟ್ಟದಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಸ್ಥಳೀಯ ಸಂದರ್ಭಾನುಸಾರ ಬೇಕಾದ ಸಂಖ್ಯೆಯ ಎಣಿಕೆದಾರರನ್ನು ಆಯ್ಕೆ ಮಾಡಿಕೊಳ್ಳಲು ಸಹಾ ತರಬೇತಿ ನೀಡಲಾಗಿತ್ತು. ತರಬೇತಿಯ ಅವಧಿಯಲ್ಲಿ ಕನ್ನಡದಲ್ಲಿದ್ದ ಎಲ್ಲಾ ನಮೂನೆಗಳು ಮತ್ತು ಉಪಯೋಗಿಸಲು ಲೇಖನ ಸಾಮಗ್ರಿಗಳನ್ನು ಅವರು ಮತ್ತು ಎಣಿಕೆದಾರರು ಬಳಸಲು ಬೇಕಾದ ಪ್ರಮಾಣದಲ್ಲಿ ಪೂರೈಸಲಾಗಿತ್ತು. ಮಾರ್ಗಸೂಚಿಗಳು ಮತ್ತು ಹೆಚ್ಚುವರಿ ನಮೂನೆಗಳು ಹಾಗೂ ಸಂಗ್ರಹಿಸಿರುವ ದತ್ತಾಂಶವನ್ನು ಅಂತಿಮವಾಗಿ ಪರಿಶೀಲಿಸಿ ಎಲ್ಲಾ ನಮೂನೆಗಳನ್ನು ಮುಖ್ಯ ನೋಡಲ್ ಅಧಿಕಾರಿಯವರಿಗೆ ಅಂಕಿ ಅಂಶ ಸಂಸ್ಕರಣೆಗಾಗಿ ರವಾನಿಸಲು ಸಹಾ ಸರಬರಾಜು ಮಾಡಲಾಗಿತ್ತು. ಕ್ಷೇತ್ರ ಮಟ್ಟದಲ್ಲಿ ಮಾಹಿತಿಯನ್ನು ಪರಿಣಾಮಕಾರಿಯಾಗಿ ಸಂಗ್ರಹಿಸಲು ಸಹಕಾರಿಯಾಗುವಂತೆ ಲೇಖನ ಸಾಮಗ್ರಿಯ ಕಿಟ್ ಸಹಾ ಒದಗಿಸಲಾಗಿತ್ತು.

**8.4 ಅಧ್ಯಯನ ಸಮೀಕ್ಷೆಯ ಸಮಕಾಲೀನ ನಿಗಾವಣೆ:** ಪ್ರಧಾನ ಸಂಶೋಧಕರು ಮತ್ತು ಮುಖ್ಯ ನೋಡಲ್ ಅಧಿಕಾರಿಯವರು ನಿಯತಕಾಲಿಕವಾಗಿ ನೋಡಲ್ ಅಧಿಕಾರಿಗಳ ಕಾರ್ಯ ಪ್ರಗತಿಯನ್ನು ಪರಿಶೀಲಿಸಿರುತ್ತಾರೆ ಮತ್ತು ಅಗತ್ಯವಿದ್ದ ಸ್ಪಷ್ಟನೆ ನೀಡಿರುತ್ತಾರೆ.

**8.5 ಕ್ಷೇತ್ರ ಮಟ್ಟದ ಸಮೀಕ್ಷೆ:** ಅಧ್ಯಯನ ಕ್ಷೇತ್ರದಲ್ಲಿ 11 ನೋಡಲ್ ಅಧಿಕಾರಿಗಳು ಮತ್ತು 38 ತರಬೇತಾದ ಎಣಿಕೆದಾರರು ಕ್ಷೇತ್ರ ಸಮೀಕ್ಷೆಯನ್ನು ಕೈಗೊಂಡಿರುತ್ತಾರೆ.

**8.6 ಕ್ಷೇತ್ರ ಸಮೀಕ್ಷೆಯ ಸತ್ಯಾಂಶ ಪರಿಶೀಲನೆ:** ಪ್ರಧಾನ ಸಂಶೋಧಕರು ಮತ್ತು ಮುಖ್ಯ ನೋಡಲ್ ಅಧಿಕಾರಿಯವರು ನೋಡಲ್ ಅಧಿಕಾರಿಗಳೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬ್ಯಾತ ಸಮೂಹ ಗ್ರಾಮಕ್ಕೆ ಭೇಟಿ ನೀಡಿ ಸತ್ಯಾಂಶ ಪರಿಶೀಲನೆ ಕೈಗೊಂಡಿರುತ್ತಾರೆ. ಸಮೀಕ್ಷೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುತ್ತಿರುವ ಕ್ರಿಯೆಯ ಸತ್ಯಾಸತ್ಯತೆಯ ಬಗ್ಗೆ ಪ್ರಾಥಮಿಕ ಮಾಹಿತಿ ಮತ್ತು ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ಬಗ್ಗೆ ರೈತರ ಅಭಿಪ್ರಾಯವನ್ನು ಪಡೆಯಲು ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಎಣಿಕೆದಾರರನ್ನು ಒಳಗೊಂಡು ಕೆಲವು ರೈತ ಸದಸ್ಯರೊಂದಿಗೆ ಮುಕ್ತ ಚರ್ಚೆ ನಡೆಸಿರುತ್ತಾರೆ.

**8.7 ಪ್ರತಿಫಲ ನಮೂನೆಗಳ ಅಭಿವೃದ್ಧಿ, ಅಂಕಿ ಅಂಶ ಸಂಗ್ರಹಣೆ ಮತ್ತು ಸಂಸ್ಕರಣೆಗಾಗಿ ಅಧ್ಯಯನ:** ದತ್ತಾಂಶ ಸಂಸ್ಕರಣೆ ಯೋಜನೆ ತಯಾರಿಸಲು ಕ್ಷೇತ್ರ ಮಟ್ಟದಿಂದ ಪಡೆದ ಅಂಕಿಅಂಶವಿರುವ ಹಾಳೆಗಳನ್ನು ಪರಿಶೀಲಿಸಲಾಯಿತು. ರೂಢಿತ ತಂತ್ರಾಂಶದ ಮುಖ್ಯ ಚೌಕಟ್ಟನ್ನು ರೂಪಿಸಿ ದತ್ತಾಂಶ ಸಂಸ್ಕರಣೆ ಮತ್ತು ಒಗ್ಗೂಡಿಸುವಿಕೆಗೆ ಸೂಕ್ತ ನಿಯತಾಂಕಗಳನ್ನು ಅಳವಡಿಸಲಾಯಿತು.

**8.8 ಸಂಸ್ಕರಿತ ದತ್ತಾಂಶದ ವಿಶ್ಲೇಷಣೆ:** ಸಮಾಜ ವಿಜ್ಞಾನಿ, ಸಾಂಖ್ಯಿಕ ನಿಪುಣ, ಮುಖ್ಯ ನೋಡಲ್ ಅಧಿಕಾರಿ ಮತ್ತು ಪ್ರಧಾನ ಸಂಶೋಧಕರ ತಂಡವು ಸಂಸ್ಕಿರಿಸಿದ ದತ್ತಾಂಶವನ್ನು ಅಭ್ಯಸಿಸಿತು ಮತ್ತು ಎಲ್ಲಾ ಸೂಚಕಗಳಿಗೆ ಹೊರಹೊಮ್ಮಿದ ಫಲಿತಾಂಶಗಳನ್ನು ಪದೋಲ್ಲೇಖದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಸಂಬಂದಿಸಿದಂತೆ ವಿಶ್ಲೇಷಿಸಿತು.

**8.9 ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳೊಡನೆ ಚರ್ಚೆ:** ಹೆಚ್ಚುವರಿ ಮಾಹಿತಿಗಾಗಿ ಮತ್ತು ಶೋಧಗಳ ಬಗ್ಗೆ ದೃಢೀಕರಿಸಿಕೊಳ್ಳಲು ಅಗತ್ಯಾನುಸಾರ ಸಂಬಂದಪಟ್ಟವರೊಡನೆ ಚರ್ಚಿಸಲಾಯಿತು.

**8.10 ಫಲಿತಾಂಶಗಳು, ವಿಶ್ಲೇಷಣೆ, ಶೋಧಗಳು ಮತ್ತು ನಿರ್ಣಯ:** ಫಲಿತಾಂಶಗಳನ್ನು ವಿಶ್ಲೇಷಿಸಲಾಯಿತು ಮತ್ತು ನಮೂನೆಗಳಲ್ಲಿ ನೀಡಿದ ಮಾಹಿತಿಯನ್ನು ಇನ್ನಷ್ಟು ಅಭ್ಯಸಿಸಲಾಯಿತು, ಹಾಗೂ ಶೋಧಗಳನ್ನು ಸೂಚಕಗಳು ಮತ್ತು ಕೇಳಲಾದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಿರ್ಣಯಗಳಾಗಿ ವ್ಯಾಖ್ಯಾನಿಸಲಾಯಿತು. ಒಟ್ಟಾರೆಯಾಗಿ, ಯೋಜನೆಯು ಗುಣಾತ್ಮಕ ಮತ್ತು ಪರಿಮಾಣಾತ್ಮಕವಾಗಿ ಗಣನೀಯ ಪ್ರಭಾವವನ್ನು ಉಂಟು ಮಾಡಿದೆಯೇ ಇಲ್ಲವೇ ಎಂದು ತಿಳಿಯಲು ಸೂಕ್ತ ಸಾಂಖ್ಯಿಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಯಿತು.

**8.11 ಮೌಲ್ಯ ಮಾಪನ ಅಧ್ಯಯನದ ಕರಡು ವರದಿ ತಯಾರಿಕೆ:** ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳೊಡನೆ ಚರ್ಚಿಸಿ ಉತ್ತಮ ಗೊಳಿಸಲು ಸಾಧ್ಯಾವಾಗುವ ಶಿಫಾರಸ್ಸುಗಳೊಂದಿಗೆ ಮೊದಲ ಕರಡು ವರದಿಯನ್ನು ತಯಾರಿಸಲಾಯಿತು.

# ಭಾಗ 9: ತನಿಖಾಂಶಗಳು ಮತ್ತು ಚರ್ಚೆ

## 9.1 ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಒಟ್ಟಾರೆ ಕಾರ್ಯನಿರ್ವಹಣೆ

ಅನುದಾನದ ಬಳಕೆ ಮತ್ತು ಹಾಲು ಒಕ್ಕೂಟಗಳಿಂದ ಹಾಲಿನ ಸಂಗ್ರಹಣೆಯಲ್ಲಿ ಏರಿಕೆಗೆ ಸಂಬಂಧಪಟ್ಟಂತೆ ಕಾರ್ಯ ನಿರ್ವಹಣೆಯನ್ನು 2008ರಿಂದ2013 (ಮೊದಲನೇ ಐದು ವರ್ಷಗಳು) ಮತ್ತು ಆನಂತರ 2013-2016 (ಎರಡನೇ ಮೂರು ವರ್ಷಗಳು) ಅವಧಿಗೆ ಅಧ್ಯಯನ ಮಾಡಲಾಯಿತು. ಮೊದಲ ಐದು ವರ್ಷಗಳಲ್ಲಿ ರೈತರಿಗೆ ಹಾಲು ಉತ್ಪಾದಕರ ಸಂಘಕ್ಕೆ ಪೂರೈಸಿದ ಪ್ರತಿ ಲೀಟರ್ ಹಾಲಿಗೆ ರೂ.2.00 ಪಾವತಿಸಲಾಯಿತು. 2013-16ರ ಅವಧಿಯಲ್ಲಿ (ಎರಡನೇ ಮೂರು ವರ್ಷಗಳು) ದಿನಾಂಕ: 14-05-2015ರಿಂದ ರೈತರು ಪರಿಷ್ಕೃತ ದರ ಪ್ರತಿ ಲೀಟರ್ ಹಾಲಿಗೆ ರೂ. 4.00 ರಂತೆ ಪಡೆದಿರುತ್ತಾರೆ.

***ಕೋಷ್ಟಕ -2: ವರ್ಷವಾರು ಅನುದಾನ ಬಿಡುಗಡೆ, ವೆಚ್ಚ, ಹಾಲಿನ ಅಂದಾಜು ಉತ್ಪಾದನೆ, ವಾಸ್ತವಿಕ ಹಾಲಿನ ಸಂಗ್ರಹಣೆ ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳು ಸಂಗ್ರಹಿಸಿದ ಹಾಲಿನ ಶೇಕಡಾವಾರು ವಾರ್ಷಿಕ ಬೆಳವಣಿಗೆಯ ವಿವರಗಳು***

| ಕ್ರ. ಸಂ. | ವರ್ಷ | ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ) | ಮಾಡಲಾದ ವೆಚ್ಚ (ರೂ.ಲಕ್ಷಗಳಲ್ಲಿ) | ಶೇ. | ರಾಜ್ಯದಲ್ಲಿ ಹಾಲಿನ ಉತ್ಪಾದನೆ (.000 ಟನ್) | ಹಾಲು ಒಕ್ಕೂಟಗಳು ಸಂಗ್ರಹಿಸಿದ ಹಾಲು (ಲಕ್ಷ ಲೀ.) | ಹಾಲು ಒಕ್ಕೂಟಗಳು ಸಂಗ್ರಹಿಸಿದ ಹಾಲು ಶೇ. |
|---|---|---|---|---|---|---|---|
| 1 | 2008-09 | 11000.00 | 9832.61 | 89.40 | 4487 | 4916.30 | 11.00 |
| 2 | 2009-10 | 25000.00 | 22250.00 | 89.00 | 4769 | 11125.25 | 23.30 |
| 3 | 2010-11 | 30165.00 | 29445.03 | 97.61 | 5058 | 14722.51 | 29.11 |
| 4 | 2011-12 | 34700.00 | 33477.60 | 96.47 | 5390 | 16738.80 | 31.10 |
| 5 | 2012-13 | 34185.00 | 32940.58 | 96.36 | 5659 | 16470.29 | 29.10 |
| 6 | 2013-14 | 81700.00 | 67957.87 | 83.18 | 5937 | 18616.51 | 31.36 |
| 7 | 2014-15 | 82500.00 | 71871.74* | 87.12 | 6065 | 21324.30 | 35.16 |
| 8 | 2015-16 | 99602.00 | 96518.8 | 96.90 | 6199 | 24129.70 | 39.00*** |

**(* ಡಿಸೆಂಬರ್ 2014ರವರೆಗೆ ವೆಚ್ಚ) (*** ಅಂದಾಜು)** **ಮೂಲ: ಪಪಾ ಮತ್ತು ಪವೈಸೇ ಇಲಾಖೆ**

**ಶೋಧಗಳು** :

ಅ) ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಶೇ. 83.18 ರಿಂದ ಶೇ.97.61ರಷ್ಟನ್ನು ವೆಚ್ಚ ಮಾಡಿದೆ.

ಆ) ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಒಕ್ಕೂಟಗಳು ಸಂಗ್ರಹಿಸಿದ ಹಾಲಿನ ಸಂಗ್ರಹಣೆಯಲ್ಲಿ ಗಮನಾರ್ಹ ಏರಿಕೆಯಾಗಿರುತ್ತದೆ. ರಾಜ್ಯದಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯನ್ನು ಪರಿಚಯಿಸಿದಾಗ 2008-09 ರಲ್ಲಿ ಇದು ಒಟ್ಟು ಉತ್ಪಾದಿತ ಹಾಲಿನ (ಅಂದಾಜು) ಶೇ.11ರಷ್ಟಿತ್ತು. ಹಾಲು ಸಂಗ್ರಹಣೆಯ ಮೇಲೆ ಯೋಜನೆಯ ಪ್ರಭಾವವಾಗಿ 2012-13 ರಲ್ಲಿ ಶೇ.29 ಮತ್ತು 2015-16 ರಲ್ಲಿ ಶೇ.39ಕ್ಕೆ ಏರಿಕೆಯಾಯಿತು.

**ನಿರ್ಣಯ:** ಜಿಲ್ಲಾ ಹಾಲು ಒಕ್ಕೂಟಗಳೊಂದಿಗಿನ ಸಹಭಾಗಿತ್ವದಲ್ಲಿ ಅನುದಾನದ ಬಳಕೆ ಮತ್ತು ಹಾಲು ಪೂರೈಕೆದಾರರಿಗೆ ವಿತರಣೆಯು ಹೆಚ್ಚು ತೃಪ್ತಿಕರವಾಗಿದೆ.

ಗ್ರಾಮೀಣ ಹೈನುಗಾರರಿಂದ ಸಂಗ್ರಹಿಸಿದ ಹಾಲಿನ ಪ್ರಮಾಣದಲ್ಲಿ ಗಮನಿಸಿದ ಬೆಳವಣಿಗೆಯು ಏಳು ವರ್ಷಗಳ ಅವಧಿಯಲ್ಲಿ ಶೇ.11 ರಿಂದ 2015-16ರ ವೇಳೆಗೆ ಶೇ.39ಕ್ಕೆ ಏರಿಕೆಯಾಯಿತು ಮತ್ತು ಇದು ಗ್ರಾಮೀಣ ಹಾಲು ಪೂರೈಕೆದಾರರು ಖಾಸಗಿ ಹಾಲು ಸಂಗ್ರಾಹಕರಿಂದ ಸುರಕ್ಷಿತ ಕ್ಷೇತ್ರವಾದ ಸಹಕಾರಿ ಸಂಘಗಳಿಗೆ ಸ್ಥಳಾಂತರಗೊಂಡಿದ್ದರಿಂದಾಗಿರುತ್ತದೆ. ಹಾಲು ಪ್ರೋತ್ಸಾಹಧನ ಯೋಜನೆಯ ಗಮನಾರ್ಹ ಪ್ರಭಾವದಿಂದ ಹೈನುಗಾರರ

ಮನೋಭಾವ ಬದಲಾವಣೆಯಾಗಿ ಸಹಕಾರಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವ ಧನಾತ್ಮಕ ಬದಲಾವಣೆ ತಂದಿದೆ. ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಇದು ಬಹು ದೊಡ್ಡ ಬೆಂಬಲವಾಗಿದೆ. ಆದ್ದರಿಂದ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಒಟ್ಟಾರೆ ಕಾರ್ಯನಿರ್ವಹಣೆಯು ಮೆಚ್ಚಿಗೆಯಾಗುವಂತಹುದು ಮತ್ತು ಇದಕ್ಕೆ **ಅತ್ಯುತ್ತಮವೆಂದು** ಶ್ರೇಯಾಂಕ ನೀಡಬಹುದು. ಹಾಲು ಒಕ್ಕೂಟಗಳು ವಹಿಸಿದ ಪಾತ್ರವೂ **ಹೆಚ್ಚು ತೃಪ್ತಿದಾಯಕವಾಗಿದೆ.** ಭವಿಷ್ಯತ್ತಿನಲ್ಲಿ ಉತ್ಕೃಷ್ಟ ಸಾಧನೆಗೈಯಲು ಇದೊಂದು ಹೆಗ್ಗುರುತಾಗಿರುತ್ತದೆ.

ನಕ್ಷೆ 1: ನಿಯಂತ್ರಿತ ಸಮೂಹದ ವರ್ಗವಾರು ರೈತರ ವಿಧ




ನಕ್ಷೆ 2: ನಿಯಂತ್ರಿತ ಸಮೂಹದ ಜಾತಿವಾರು ರೈತರ ವಿಧ




ನಕ್ಷೆ 4: ಅಧ್ಯಯನ ಸಮೂಹದ ರೈತರು ಜಾತಿವಾರು (ಶೇ.)




ನಕ್ಷೆ 3: ಅಧ್ಯಯನ ಸಮೂಹದ ರೈತರು ವರ್ಗವಾರು (ಶೇ.)




**9.2 ಮೌಲ್ಯ ಮಾಪನ ಅಧ್ಯಯನಕ್ಕೆ ಸಂಬಂದಿಸಿದಂತೆ ಎಲ್ಲಾ ಸೂಚಕಗಳನ್ನು ಒಳಗೊಂಡಂತೆ 2008-2013ರ ಅವದಿಯ ದತ್ತಾಂಶ ವಿಶ್ಲೇಷಣೆ, ಫಲಿತಾಂಶಗಳು, ಶೋಧಗಳು ಮತ್ತು ನಿರ್ಣಯಗಳು**

***ಕೋಷ್ಟಕ-3 : ಲಿಂಗ, ರೈತರ ವರ್ಗ ಮತ್ತು ಜಾತಿ ವಿವರಗಳು – 29 ಜಿಲ್ಲೆಗಳ 13 ಹಾಲು ಒಕ್ಕೂಟಗಳ ನಿಯಂತ್ರಕ ಸಮೂಹದ 325 ರೈತರು ಮತ್ತು ಅಧ್ಯಯನ ಸಮೂಹದ 3900 ಹೈನುಗಾರರು***

| ಕ್ರ.ಸಂ. | ನಿಯತಾಂಕಗಳು/ ಪ್ರಶ್ನೆಗಳು | ನಿಯಂತ್ರಕ ಸಮೂಹ | ಅಧ್ಯಯನ ಸಮೂಹ |
|---|---|---|---|
| 1 | **ಲಿಂಗ** | **ಶೇ.(%)** | **ಶೇ.(%)** |
| | ಪುರುಷ | 74.40 | 62.3 |
| | ಮಹಿಳೆ | 25.60 | 37.7 |
| 2 | **ರೈತರ ವರ್ಗ** | | |
| | ದೊಡ್ಡ ರೈತರು | 11.60 | 14.0 |
| | ಸಣ್ಣ ರೈತರು | 32.80 | 37.4 |
| | ಅತಿ ಸಣ್ಣ ರೈತರು | 1.40 | 28.5 |
| | ಭೂರಹಿತರು | 54.20 | 20.1 |
| 3 | **ಜಾತಿ** | | |
| | ಪರಿಶಿಷ್ಟ ಜಾತಿ | 16.70 | 12.9 |
| | ಪರಿಶಿಷ್ಟ ಪಂಗಡ | 5.10 | 5.9 |
| | ಇತರೆ | 78.20 | 81.2 |

- ಅಧ್ಯಯನ **ಸಮೂಹದ** ವಿವರವಾದ ಫಲಿತಾಂಶಗಳನ್ನು (ನಮೂನೆ-4) ಅನುಬಂಧ 6ರಲ್ಲಿ ನೀಡಲಾಗಿದೆ
- ನಿಯಂತ್ರಕ **ಸಮೂಹದ** ವಿವರವಾದ ಫಲಿತಾಂಶಗಳನ್ನು (ನಮೂನೆ-5) ಅನುಬಂಧ 7ರಲ್ಲಿ ನೀಡಲಾಗಿದೆ.

**9.2.1 ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ತಲುಪಲು ತೆಗೆದುಕೊಂಡ ಸರಾಸರಿ ಸಮಯಾವಧಿ ಎಷ್ಟು? ಇದು ಸುಧೀರ್ಘ, ಅಲ್ಪ/ ಸಮಂಜಸ ಅವಧಿಯೇ?**

- ಕ್ಲೇಮು ಬಿಲ್ಲನ್ನು ತಯಾರಿಸಲು, ಹಾಲು ಒಕ್ಕೂಟಕ್ಕೆ ಸಲ್ಲಿಸುವುದು,ಹಾಲು ಒಕ್ಕೂಟದಲ್ಲಿ ಪರಿಶೀಲಿಸಿ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಸಲ್ಲಿಸಿ, ಇಲಾಖೆಯು ಬಿಲ್ಲನ್ನು ಪುರಸ್ಕರಿಸಿ ಹಾಲು ಒಕ್ಕೂಟಗಳಿಗೆ ಪ್ರೋತ್ಸಾಹಧನವನ್ನು ಬಿಡುಗಡೆಗೊಳಿಸಿದ ನಂತರ ಹಾಲು ಉತ್ಪಾದಕರ ಸಹಕಾರಿ ಸಂಘದಿಂದ ಹಾಲು ಪೂರೈಕೆದಾರರಿಗೆ ತಲುಪಲು 2009-10ರಲ್ಲಿ ಸರಾಸರಿ 80 ದಿನಗಳಾಗಿರುತ್ತದೆ. ಇದು ಗರಿಷ್ಠ 89 ದಿನ ಮತ್ತು ಕನಿಷ್ಠ 51 ದಿನಗಳಾಗಿರುತ್ತದೆ. 2011-12ರಲ್ಲಿ ಸರಾಸರಿ ಸಮಯವು 104 ದಿನಗಳು, ಗರಿಷ್ಠ 142 ದಿನಗಳು ಮತ್ತು ಕನಿಷ್ಠ 73 ದಿನಗಳು.
- ಬಿಲ್ಲುಗಳನ್ನು ಸಲ್ಲಿಸಿದ ನಂತರ ಹಾಲು ಒಕ್ಕೂಟಗಳಿಗೆ ಪ್ರೋತ್ಸಾಹದನ ತಲುಪಲು ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ವರ್ಗಾಯಿಸಲು ತೆಗೆದುಕೊಂಡ ಸರಾಸರಿ ಸಮಯ 2009-10ರಲ್ಲಿ 71 ದಿನಗಳು ಮತ್ತು 2010-11 ರಲ್ಲಿ 64ದಿನಗಳಾಗಿರುತ್ತದೆ.
- ಅಧ್ಯಯನ **ಸಮೂಹಗಳಲ್ಲಿ** ಶೇ. 99.5 ರಷ್ಟು ರೈತರು ತಾವು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲನ್ನು ಪೂರೈಸಿದ ನಂತರ ತೀರಾ ವಿಳಂಬವಾಗಿ ಪ್ರೋತ್ಸಾಹಧನ ತಲುಪುತ್ತಿದೆಯೆಂದು ವರದಿಸಿದ್ದಾರೆ.

**ನಿರ್ಣಯ:** ಅಧ್ಯಯನದ ನಿಗದಿತ ಅವಧಿಯಲ್ಲಿ ಗಮನಿಸಿದಂತೆ ಪ್ರೋತ್ಸಾಹಧನದ ಹಣವು ಸಾಮಾನ್ಯವಾಗಿ 30-45 ದಿನಗಳಲ್ಲಿ ತಲುಪಬಹುದಾಗಿದ್ದು ಹಾಲು ಸರಬರಾಜು ಮಾಡಿದ ರೈತರಿಗೆ ತುಂಬಾ ವಿಳಂಬವಾಗಿ ತಲುಪಿರುತ್ತದೆ. ಯೋಜನೆಯು ಅನುಷ್ಠಾನದಲ್ಲಿರುವಾಗ ಹಲವು ಸಂದರ್ಭಗಳಲ್ಲಿ 4-6 ತಿಂಗಳುಗಳಷ್ಟು ವಿಳಂಬವಾಗಿರುವುದಾಗಿ ಸಹಾ ವರದಿಯಾಗಿರುತ್ತದೆ. ಈ ವಿಳಂಬಕ್ಕೆ ಮುಖ್ಯವಾಗಿ ವಿವಿಧ ಹಂತಗಳಲ್ಲಿ ಕ್ಲೇಮುಗಳ ಸಂಸ್ಕರಣೆ ಮತ್ತು ಅನುದಾನದ ಬಿಡುಗಡೆಯಲ್ಲಾದ ವಿಳಂಬವೇ ಕಾರಣವಾಗಿರುತ್ತದೆ.

**9.2.2 ಬಿಡುಗಡೆಯಾದ ಹಣವು ಹಾಲು ಉತ್ಪಾದಕರಿಗೆ ಪೂರ್ಣವಾಗಿ ತಲುಪಿದೆಯೋ ಅಥವಾ ಸಂದಾಯದ ಯಾವುದೇ ಹಂತದಲ್ಲಿ ಅನೈಚ್ಛಿಕ/ಅನ್ಯಾಯಿಕ ಕಡಿತಗಳನ್ನು ಮಾಡಲಾಗುತ್ತಿದೆಯೇ?**

- ಬಹತೇಕ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳು (ಶೇ.95) ಪ್ರೋತ್ಸಾಹಧನದ ಮೊತ್ತವು ಪಾವತಿಸುವಾಗ ಸಂಪೂರ್ಣವಾಗಿ ಯಾವುದೇ ಅನೈಚ್ಛಿಕ/ಅನ್ಯಾಯಿಕ ಕಡಿತಗಳಿಲ್ಲದೆ ರೈತರಿಗೆ ತಲುಪಿದೆಯೆಂದು ವರದಿಸಿದ್ದಾರೆ. ಶೇ. 5ರಷ್ಟು ಜನರು ಪ್ರತಿಕ್ರಿಯಿಸಿರುವುದಿಲ್ಲ.
- ಅಧ್ಯಯನ ಸಮೂಹಗಳಲ್ಲಿ ಬಹುತೇಕ (ಶೇ.97) ಹೈನುಗಾರರು ಪ್ರೋತ್ಸಾಹಧನದ ಮೊತ್ತವು ಪಾವತಿಸುವಾಗ ಸಂಪೂರ್ಣವಾಗಿ ಯಾವುದೇ ಅನೈಚ್ಛಿಕ/ಅನ್ಯಾಯಿಕ ಕಡಿತಗಳಿಲ್ಲದೆ ತಲುಪಿದೆಯೆಂದು ವರದಿಸಿದ್ದಾರೆ.
- ಹಾಲು ಪ್ರೋತ್ಸಾಹಧನ ಯೋಜನೆಯನ್ನು ಅನುಷ್ಠಾನಿಸಲು ಸ್ಥಳೀಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಸಾಕಷ್ಟು ಮೂಲಭೂತ ಸೌಕರ್ಯಗಳಿಲ್ಲವೆಂದು ಅಧ್ಯಯನ ಸಮೂಹದ ಶೇ.60 ರಷ್ಟು ಮತ್ತು ನಿಯಂತ್ರಿತ ಸಮೂಹದ ಶೇ. 43ರಷ್ಟು ರೈತರು ವರದಿಸಿರುತ್ತಾರೆ.

**ನಿರ್ಣಯ:** ನ್ಯಾಯಯುತ ಕ್ಲೇಮುಗಳು ಸಂಪೂರ್ಣವಾಗಿ ಇತ್ಯರ್ಥವಾಗಿರುವುದಾಗಿ ಫಲಿತಾಂಶಗಳು ತೋರಿಸಿಕೊಟ್ಟಿವೆ. ಪ್ರೋತ್ಸಾಹಧನದ ಮೊತ್ತವನ್ನು ಬಟವಾಡೆ ಮಾಡುವ ಯಾವುದೇ ಹಂತದಲ್ಲಿ ಅನ್ಯಾಯಿಕ ಮತ್ತು ಅನಧಿಕೃತ ಕಡಿತಗಳನ್ನು ಮಾಡಿರುವುದಿಲ್ಲ. 2008-09 ಮತ್ತು 2012-13ರ ಅವಧಿಯ ಪ್ರೋತ್ಸಾಹಧನದ ಹಣವು ಸಂಬಂಧಪಟ್ಟ ರೈತರಿಗೆ ಸಂಪೂರ್ಣವಾಗಿ ತಲುಪಿದೆಯೆಂದು ಎಲ್ಲಾ 13 ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು ವರದಿಸಿದ್ದಾರೆ. ಏಪ್ರಿಲ್, 2015ರಿಂದ ಪ್ರೋತ್ಸಾಹಧನದ ಹಣವನ್ನು ರೈತರಿಗೆ ಹೆಚ್ಚು ಸಮಸ್ಯೆ ಇಲ್ಲದೆ ವಿದ್ಯುನ್ಮಾನ ತೀರುವಳಿ ಪದ್ಧತಿಯಲ್ಲಿ ವರ್ಗಾಯಿಸಲಾಗುತ್ತಿದೆಯೆಂದೂ ವರದಿಸಲಾಗಿರುತ್ತದೆ.

**9.2.3 ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಹೈನು ರಾಸುಗಳ ಗುಣಮಟ್ಟ ಸುಧಾರಣೆ ಮತ್ತು ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಯುವಕರ ವಲಸೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರೋತ್ಸಾಹ ಧನದಿಂದ ರೈತರ ಮೇಲೆ ಉಂಟಾದ ಪರಿಣಾಮವೇನು?**

**ಅ. ಹಾಲಿನ ಉತ್ಪಾದನೆ:**

**ಕೋಷ್ಟಕ-4: ರಾಜ್ಯದ ಹಾಲಿನ ಉತ್ಪಾದನೆ ಅಂದಾಜುಗಳು (.000 ಟನ್‌ಗಳಲ್ಲಿ)**

| ವರ್ಷ | ಹಸು | ಎಮ್ಮೆ | ಒಟ್ಟು ಹಾಲು | ಶೇ.ಬೆಳವಣಿಗೆ |
|---|---|---|---|---|
| 2007-08 | 2877 | 1387 | **4264** | |
| 2008-09 | 3066 | 1421 | **4487** | **5.2** |
| 2009-10 | 3263 | 1506 | **4769** | **6.3** |
| 2010-11 | 3475 | 1583 | **5058** | **6.1** |
| 2011-12 | 3715 | 1675 | **5390** | **6.6** |
| 2012-13 | 3919 | 1740 | **5659** | **5.0** |
| 2013-14 | **4142** | **1795** | **5937** | **4.9** |
| 2014-15 | **4331** | **1734** | **6065** | **2.2** |
| **2012-13** | **36.20** | **25.45** | 32.70 | |
| **2014-15** | **50.54** | **25.02** | 42.24 | |

**ಮೂಲ: ಹಾಲು, ಮೊಟ್ಟೆ, ಉಣ್ಣೆ ಮತ್ತು ಮಾಂಸ ಉತ್ಪಾದನೆಯನ್ನು ಅಂದಾಜಿಸುವ ಸಮಗ್ರ ಮಾದರಿ ಸಮೀಕ್ಷೆಯ ವರದಿ 2014-15, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ಇವರಿಂದ ಪ್ರಕಟಿತ.**

***ನಕ್ಷೆ- 5 ರಾಜ್ಯ ಮಟ್ಟದ ವರ್ಷಾವಾರು ಹಸುಗಳು ಮತ್ತು ಎಮ್ಮೆಗಳಿಂದ ಹಾಲಿನ ಉತ್ಪಾದನೆ. (.000 ಟನ್ ಗಳಲ್ಲಿ.)***



- ರಾಜ್ಯ ಮಟ್ಟದ ಮಾದರಿ ಸಮೀಕ್ಷೆಯ ಫಲಿತಾಂಶಗಳು 2013ರ ಅಂತ್ಯಕ್ಕೆ ಹಸುವಿನ ಹಾಲು ಶೇ. 36.2, ಎಮ್ಮೆ ಹಾಲು ಶೇ.25.45 ಸಂಚಿತ ಬೆಳವಣಿಗೆಯನ್ನು ಮತ್ತು ಒಟ್ಟು ಹಾಲಿನ ಉತ್ಪಾದನೆಯು ಶೇ. 32.7ರಷ್ಟು ಬೆಳವಣಿಗೆಯನ್ನು ಹೊಂದಿರುವುದಾಗಿ ತಿಳಿಸಿಕೊಟ್ಟಿವೆ. 2015ರ ಅಂತ್ಯದ ವೇಳೆಗೆ ಹಸುವಿನ ಹಾಲು ಶೇ. 50.54 ಎಮ್ಮೆ ಹಾಲು ಶೇ.25.02 ಮತ್ತು ಒಟ್ಟು ಹಾಲಿನ ಉತ್ಪಾದನೆಯು ಶೇ. 42.24ರಷ್ಟು ಸಂಚಿತ ಬೆಳವಣಿಗೆಯನ್ನು ಹೊಂದಿರುವುದಾಗಿ ತಿಳಿಸಿಕೊಟ್ಟಿವೆ. 2007-08ನ್ನು ಆಧಾರ ವರ್ಷವೆಂದು ಪರಿಗಣಿಸಲಾಗಿದೆ. ಗಮನಿಸಿದ ವಾರ್ಷಿಕ ಬೆಳವಣಿಗೆಯು 2012-13 ರವರೆಗೆ ಶೇ.5.0-6.6ರಷ್ಟಿದೆ. ಆದರೆ ಇದು 2014 ಮತ್ತು 2015ರ ವೇಳೆಗೆ ಕ್ರಮವಾಗಿ ಶೇ.4.9 ಮತ್ತು ಶೇ. 2.2ಕ್ಕೆ ಇಳಿಕೆಯಾಗಿರುತ್ತದೆ. ರಾಜ್ಯದಲ್ಲಿ 2013-14ರಲ್ಲಿ ಉಂಟಾದ ಕಾಲು ಮತ್ತು ಬಾಯಿ ರೋಗೋದ್ರೇಕದ ಪರಿಣಾಮವಾಗಿ ಹಾಲಿನ ಉತ್ಪಾದನೆಯು ಕಡಿಮೆಯಾಗಿಬಹುದು.

  (ಪಿಡಿಎಫ್ಎಂಡಿ 2014, ವಾರ್ಷಿಕ ವರದಿ, 2013-14. ಯೋಜನಾ ನಿರ್ದೇಶನಾಲಯ, ಕಾಲು ಮತ್ತು ಬಾಯಿ ರೋಗ, ಮುಕ್ತೇಶ್ವರ)

- 2008-13ರ ಅಧ್ಯಯನದ ಅವಧಿಯಲ್ಲಿ ಸಂಘಕ್ಕೆ ಹೈನುಗಾರರಿಂದ ಪೂರೈಕೆಯಾದ ಹಾಲಿನ ಪ್ರಮಾಣದಲ್ಲಿ ಶೇ. 120.48 ಸರಾಸರಿ ಹೆಚ್ಚಳವಾಯಿತೆಂದು ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ಒದಗಿಸಿದ ದತ್ತಾಂಶವು ಸೂಚಿಸುತ್ತದೆ.

**ನಿರ್ಣಯ**: ಅಧ್ಯಯನ ಸಮೂಹದ ಹಾಲಿನ ಉತ್ಪಾದನೆಯ ಬೆಳವಣಿಗೆಯನ್ನು ಪರೋಕ್ಷವಾಗಿ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪೂರೈಸಲಾದ ಪ್ರಮಾಣದ ಅಂಕಿಅಂಶಗಳಿಂದ ಅಳೆಯಲಾಗಿದೆ. ಗಮನಿಸಲಾದ ಬೆಳವಣಿಗೆಯು ಶೇ.8.16 ರಿಂದ ಶೇ.70ರಷ್ಟಿದ್ದು ನಿಯಂತ್ರಿತ ಸಮೂಹಕ್ಕೆ ಹೋಲಿಸಿದಾಗ ತುಂಬಾ ಗಮನಾರ್ಹವಾಗಿರುತ್ತದೆ. ಹಾಲು ಪ್ರೋತ್ಸಾಹಧನ ಯೋಜನೆಯು ಒಟ್ಟಾರೆಯಾಗಿ ರಾಜ್ಯದ ಹಾಲಿನ ಉತ್ಪಾದನೆಯ ಮೇಲೆ ಗಮನಾರ್ಹ ಧನಾತ್ಮಕ ಪ್ರಭಾವವನ್ನು ಬೀರಿದೆ. ಹಾಗೆಯೇ, ಖಾಸಗಿ ಹಾಲು ಸಂಗ್ರಾಹಕರ ಹಿಡಿತವನ್ನು ತೊರೆದು ಸಹಕಾರಿ ವಲಯಕ್ಕೆ ರೈತರು ಬಂದಿರುವುದೂ ಸಹ ಗಮನಾರ್ಹವಾಗಿರುತ್ತದೆ ಮತ್ತು ಇದು ಹಿಂಪುಟಿಯುವಿಕೆಯ ವಿದ್ಯಾಮಾನವಾಗಿದೆ.



**ಆ. ರಾಜ್ಯದ ಹಾಲಿಂಡುತ್ತಿರುವ ಮತ್ತು ಹೈನು ರಾಸುಗಳ ಸಂಖ್ಯೆ ಮತ್ತು ಸಂಚಿತ ಬೆಳವಣಿಗೆ**

**ಕೋಷ್ಟಕ –5: ರಾಜ್ಯದ ಹಾಲಿಂಡುತ್ತಿರುವ ಮತ್ತು ಹೈನು ರಾಸುಗಳ ಸಂಖ್ಯೆ 2007–15(ಲಕ್ಷಗಳಲ್ಲಿ)**

| | ಹಾಲಿಂಡುತ್ತಿರುವ ಹಸುಗಳಲ್ಲಿ | | ಹೈನು ಹಸುಗಳು | | |
|---|---|---|---|---|---|
| | **ಮಿಶ್ರ ತಳಿ** | **ದೇಶಿ ತಳಿ** | **ಮಿಶ್ರ ತಳಿ** | **ದೇಶಿ ತಳಿ** | **ಒಟ್ಟು** |
| 2007–08 | 7.63 | 14.99 | 9.96 | 26.51 | **59.09** |
| 2008–09 | 8.65 | 14.76 | 11.3 | 25.9 | **60.61** |
| 2009–10 | 9.39 | 14.96 | 12.01 | 26.19 | **62.55** |
| 2010–11 | 10.02 | 15.53 | 12.71 | 26.89 | **65.15** |
| 2011–12 | 10.68 | 16.25 | 13.55 | 27.61 | **68.09** |
| 2012–13 | 11.43 | 16.58 | 14.42 | 27.91 | **70.34** |
| 2013–14 | 12.12 | 16.78 | 15.24 | 28.11 | **72.25** |
| 2014–15 | 13.06 | 16.61 | 16.19 | 27.81 | **73.67** |
| **ಸಂಚಿತ ಬೆಳವಣಿಗೆ % 2012–13** | **49.80** | **10.61** | **44.78** | **5.28** | **19.04** |
| **ಸಂಚಿತ ಬೆಳವಣಿಗೆ % 2014–15** | **71.17** | **10.81** | **62.55** | **4.90** | **24.67** |

- 2007–08 ನೇ ಸಾಲನ್ನು ಆಧಾರವಾಗಿಟ್ಟುಕೊಂಡಾಗ ಹಾಲಿಂಡುತ್ತಿರುವ ಮತ್ತು ಹೈನು ಹಸುಗಳ ಸಂಖ್ಯೆಯಲ್ಲಿ ಶೇ. 19.04 (2012–13) ಮತ್ತು ಶೇ. 24.67(2015) ಸಂಚಿತ ಬೆಳವಣಿಗೆ ಕಂಡುಬಂದಿರುತ್ತದೆ. ಆದಾಗ್ಯೂ, ಹಾಲಿಂಡುತ್ತಿರುವ ಮಿಶ್ರತಳಿ ಹಸುಗಳ ಸಂಖ್ಯೆಯಲ್ಲಿ ಶೇ. 49.8 (2012–13) ಮತ್ತು ಶೇ.71.17 (2014–15) ಹಾಗೂ ಹೈನು ರಾಸುಗಳಲ್ಲಿ ಶೇ. 44.78 (2012–13) ಮತ್ತು ಶೇ. 62.55 (2014–15) ರಷ್ಟು ಸಂಚಿತ ಬೆಳವಣಿಗೆಯಾಗಿರುತ್ತದೆ.



**ಕೋಷ್ಟಕ –6: ರಾಜ್ಯದಲ್ಲಿ ಗುಣಮಟ್ಟದ ಎಮ್ಮೆಗಳ ಸಂಖ್ಯೆ ಮತ್ತು ಸಂಚಿತ ಬೆಳವಣಿಗೆಯ ವಿವರ**

| ವರ್ಷ | ಹಾಲಿಂಡುತ್ತಿರುವ ಎಮ್ಮೆಗಳ ಸಂಖ್ಯೆ | ಹೈನು ಎಮ್ಮೆಗಳು | ಒಟ್ಟು ಎಮ್ಮೆಗಳು |
|---|---|---|---|
| 2007–08 | 15.22 | 23.27 | **38.49** |
| 2008–09 | 15.73 | 23.75 | **39.48** |
| 2009–10 | 16.17 | 24.43 | **40.60** |
| 2010–11 | 16.77 | 24.73 | **41.50** |
| 2011–12 | 17.5 | 25.62 | **43.12** |
| 2012–13 | 18.03 | 26.45 | **44.48** |
| 2013–14 | 18.24 | 26.75 | **44.99** |
| 2014–15 | 17.61 | 26.39 | **44.00** |
| **ಸಂಚಿತ ಬೆಳವಣಿಗೆ % 2007–13** | **18.46** | **13.67** | **15.56** |
| **ಸಂಚಿತ ಬೆಳವಣಿಗೆ % 2007–15** | **15.70** | **13.41** | **14.32** |

- 2007-08 ನೇ ಸಾಲನ್ನು ಆಧಾರವಾಗಿ ಪರಿಗಣಿಸಿದಾಗ ಹಾಲಿಂಡುತ್ತಿರುವ ಮತ್ತು ಹೈನು ಎಮ್ಮೆಗಳ ಸಂಖ್ಯೆಯಲ್ಲಿ ಶೇ. 15.56 (2013), ಶೇ. 14.32 (2015) ಮತ್ತು ಒಟ್ಟು ಎಮ್ಮೆಗಳ ಸಂಖ್ಯೆಯಲ್ಲಿ ಶೇ. 15.56 ರಷ್ಟು ಸಂಚಿತ ಬೆಳವಣಿಗೆ ಕಂಡುಬಂದಿರುತ್ತದೆ.
- ಅಧ್ಯಯನ ಸಮೂಹದಲ್ಲಿ 2007-13ರ ಅವಧಿಯಲ್ಲಿ ದತ್ತಾಂಶವನ್ನು ವಿಶ್ಲೇಷಿಸಿದಾಗ ರೈತರು ಪಾಲನೆ ಮಾಡುತ್ತಿರುವ ಎಮ್ಮೆಗಳ ಸಂಖ್ಯೆಯಲ್ಲಿ ಶೇ.2 ರಿಂದ ಶೇ. 9.5 ವಾರ್ಷಿಕ ಬೆಳವಣಿಗೆಯನ್ನು ಗಮಿನಿಸಲಾಗಿದೆ. ಸಂಚಿತ ಬೆಳವಣಿಗೆಯು ಮಿಶ್ರತಳಿ ಹಸುಗಳ ಸಂಖ್ಯೆಯಲ್ಲಿ ಶೇ. 33.36, ಹೈನು ಎಮ್ಮೆಗಳ ಸಂಖ್ಯೆಯಲ್ಲಿ ಶೇ. 12.38 ಮತ್ತು 2013ರ ಅಂತ್ಯಕ್ಕೆ ಹೈನು ರಾಸುಗಳ ಸಂಖ್ಯೆಯಲ್ಲಿ ಒಟ್ಟಾರೆ ಸಂಚಿತ ಬೆಳವಣಿಗೆಯು ಶೇ. 28.03 ರಷ್ಟಿರುತ್ತದೆ.
- **ನಿರ್ಣಯ:** ಅಧ್ಯಯನದ ಅವಧಿ, 2008-13 ರಲ್ಲಿ ಹೈನು ಹಸು ಮತ್ತು ಎಮ್ಮೆಗಳ ಸಂಖ್ಯೆಯಲ್ಲಿ ಧನಾತ್ಮಕ ಮತ್ತು ತುಂಬಾ ಗಣನೀಯ ಬೆಳವಣಿಗೆಯನ್ನು ಗಮನಿಸಲಾಗಿದೆ. ಅಧ್ಯಯನ ಸಮೂಹ ಮತ್ತು ನಿಯಂತ್ರಕ ಸಮೂಹದ ದತ್ತಾಂಶದ ಹೋಲಿಕೆಯು ರಾಜ್ಯದಲ್ಲಿ ಗುಣಮಟ್ಟದ ಮಿಶ್ರತಳಿ ಹೈನು ಹಸುಗಳು, ಸ್ಥಳೀಯ ಹಸುಗಳು ಮತ್ತು ಎಮ್ಮೆಗಳ ಸಂಖ್ಯೆಯಲ್ಲಿ ಬಹು ಗಣನೀಯ ಹೆಚ್ಚಳವಾಗಿರುವುದನ್ನು ಸೂಚಿಸುತ್ತದೆ. ಇದು ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ಪ್ರಭಾವದಿಂದಾಗಿರಬಹುದು.



ಗ್ರಾಮಗಳಲ್ಲಿರುವ ಉತ್ತಮ ಹೈನು ರಾಸುಗಳು

**ಇ. ಇತರ ನಿಯತಾಂಕಗಳ ಮೇಲೆ ಫಲಿತಾಂಶಗಳ ಪ್ರಭಾವ**

**ಕೋಷ್ಟಕ-7: ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ವಿವಿಧ ನಿಯತಾಂಕಗಳು /ಸೂಚಕಗಳ ಸರಾಸರಿ ಶೇಕಡಾವಾರು ಬೆಳವಣಿಗೆ, 2008-13**

| ಕ್ರ.ಸಂ | ನಿಯತಾಂಕಗಳು/ಸೂಚಕಗಳು | ಸರಾಸರಿ ಬೆಳವಣಿಗೆ% | ಕನಿಷ್ಠ | ಗರಿಷ್ಠ |
|---|---|---|---|---|
| 1 | ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆ | 26.62 | 3.3% ದ.ಕ.ಜಿಲ್ಲಾ ಹಾಲು ಒಕ್ಕೂಟದಲ್ಲಿ | 66.4% ಬಳ್ಳಾರಿ ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 2 | ಮಹಿಳಾ ಸದಸ್ಯರ ಸಂಖ್ಯೆ | 30.80 | 15.3% ಕಲಬುರಗಿ ಜಿಲ್ಲಾ ಹಾಲು ಒಕ್ಕೂಟಲ್ಲಿ | 59.2% ಹಾಸನ ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 3 | ಪ.ಜಾ. ಸಂಖ್ಯೆ | 28.44 | 4.8% ದ.ಕ.ಜಿಲ್ಲಾ ಹಾಲು ಒಕ್ಕೂಟದಲ್ಲಿ | 61.1% ಬೆಂಗಳೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 4 | ಪ.ಪಂ. ಸಂಖ್ಯೆ | 37.19 | 7.7% ಬೆಳಗಾವಿ ಜಿಲ್ಲಾ ಹಾಲು ಒಕ್ಕೂಟದಲ್ಲಿ | 78.9% ವಿಜಯಪುರ ಜಿಲ್ಲಾ ಹಾಲು ಒಕ್ಕೂಟದಲ್ಲಿ |

| | | | | |
|---|---|---|---|---|
| 5 | ಒಟ್ಟು ಹಾಲು ಉತ್ಪಾದಕರು ಸಂಖ್ಯೆ | 24.31 | 2.4% ಶಿವಮೊಗ್ಗ ಜಿಲ್ಲಾ ಹಾಲು ಒಕ್ಕೂಟದಲ್ಲಿ | 86% ಮೈಸೂರು .ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 6 | ಒಟ್ಟು ಸಂಗ್ರಹಿಸಿದ ಹಾಲು (ಲೀಟರ್‌ಗಳಲ್ಲಿ) | 120.48 | 34.7% ದ.ಕ.ಜಿಲ್ಲಾ ಹಾಲು ಒಕ್ಕೂಟದಲ್ಲಿ | 261% ಮೈಸೂರು .ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 7 | ಮಹಿಳಾ ಸದಸ್ಯರಿಂದ ಖರೀದಿಸಿದ ಹಾಲು (ಲೀಟರ್‌ಗಳಲ್ಲಿ) | 117.18 | 24.1% ಬೆಂಗಳೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ | 250% ಮೈಸೂರು. ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 8 | ಪ.ಜಾ. ಸದಸ್ಯರಿಂದ ಖರೀದಿಸಿದ ಹಾಲು(ಲೀಟರ್ ಗಳಲ್ಲಿ) | 137.32 | 44.8% ತುಮಕೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ | 282.3% ಮೈಸೂರು. ಜಿಲ್ಲಾ ಹಾಲು ಒಕ್ಕೂಟದಲ್ಲಿ |
| 9 | ಪ.ಪಂ. ಸದಸ್ಯರಿಂದ ಖರೀದಿಸಿದ ಹಾಲು(ಲೀಟರ್ ಗಳಲ್ಲಿ) | 131.16 | 30.9% ತುಮಕೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ | 294.6% ಮೈಸೂರು. ಜಿಲ್ಲಾ ಹಾಲು ಒಕ್ಕೂಟದಲ್ಲಿ |

ಮೂಲ : ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು ಒದಗಿಸಿದ ಮಾಹಿತಿ

**ಸೂಚಕ 1 : ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆ**

**ನಕ್ಷೆ : 6 ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳು, ತುಕಡಿ 1 : 2007-2013.**




**ನಕಾಶೆ : 7 ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳು, ತುಕಡಿ 2 : 2007-2013.**



**ನಕಾಶೆ : 8 ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳು,**

**ತುಕಡಿ 3 : 2007–2013.**




**ಶೋಧಗಳು** : ದಕ್ಷಿಣ ಕನ್ನಡ ಹಾಲು ಒಕ್ಕೂಟದಲ್ಲಿ ಕನಿಷ್ಠ ಬೆಳವಣಿಗೆ ಶೇ.3.3. ಇದು ಬಹುಶಃ ಜಿಲ್ಲೆಗಳ ಬಹುತೇಕ ಸ್ಥಳಗಳಲ್ಲಿ ಕಾರ್ಯನಿರತ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಇದ್ದುದರಿಂದ ಆಗಿರಬಹುದು. ಬಳ್ಳಾರಿ ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ.66.4 ಬೆಳವಣಿಗೆ ಇರುತ್ತದೆ. ಹೊಸದಾಗಿ ಹಾಲು ಉತ್ಪಾದಕರ ಸಂಘಗಳನ್ನು ಸ್ಥಾಪಿಸಿರಬಹುದು ಹಾಗೂ ಕೆಲವನ್ನು ಕಾರ್ಯನಿರತ ಸಂಘಗಳಾಗಿ ಪುನರುಜ್ಜೀವನಗೊಳಿಸಿರಬಹುದು. ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಉಂಟಾಗಿರುವ ಶೇ. 26.62 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 2: ಮಹಿಳಾ ಸದಸ್ಯರ ಸಂಖ್ಯೆ**

**ಶೋಧಗಳು** : ಕಲಬುರಗಿ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 15.3ರಷ್ಟು ಬೆಳವಣಿಗೆಯಾಗಿರುತ್ತದೆ. ಪ್ರಾಯಶಃ ಈ ಒಕ್ಕೂಟದ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಈಗಾಗಲೇ ಬಹುತೇಕ ಮಹಿಳೆಯರ ಸದಸ್ಯತ್ವ ಇರಬಹುದು. ಹಾಸನ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ. 59.2ರಷ್ಟು ಬೆಳವಣಿಗೆಯಾಗಿರುತ್ತದೆ. ಬಹಳಷ್ಟು ಮಹಿಳೆಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 30.8 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ. ಈ ಬದಲಾವಣೆಯು ಮಹಿಳಾ ಸಬಲೀಕರಣಕ್ಕೆ ಮುನ್ನಡೆಸಬಹುದು.

**ಸೂಚಕ 3: ಪರಿಶಿಷ್ಟ ಜಾತಿ (ಸಂ.)**

**ಶೋಧಗಳು** : ದಕ್ಷಿಣ ಕನ್ನಡ ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 4.8 ರಷ್ಟು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಷಃ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಪರಿಶಿಷ್ಠ ಜಾತಿಯ ಸದಸ್ಯರನ್ನು ಹೊಂದಿರಬಹುದು. ಬೆಂಗಳೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ.61.1 ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಪ.ಜಾ. ಸದಸ್ಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಈ ಧನಾತ್ಮಕ ಬದಲಾವಣೆಯು ಹೆಚ್ಚು ಪ.ಜಾ.ಸದಸ್ಯರು ಹೈನುಗಾರಿಕೆಯನ್ನು ಕೈಗೊಂಡಿದ್ದರಿಂದಲೂ ಆಗಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 28.44 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 4: ಪರಿಶಿಷ್ಠ ಪಂಗಡ (ಸಂ.)**

**ಶೋಧಗಳು**: ಬೆಳಗಾವಿ ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 7.7 ರಷ್ಠು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಶಃ ಈಗಾಗಲೇ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಪರಿಶಿಷ್ಠ ಪಂಗಡದ ಸದಸ್ಯರನ್ನು ಹೊಂದಿರಬಹುದು. ವಿಜಯಪುರ ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ.78.9 ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಹೆಚ್ಚು ಪ.ಪಂ. ಸದಸ್ಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಈ ಧನಾತ್ಮಕ ಬದಲಾವಣೆಯು ಹೆಚ್ಚು ಪ.ಪಂ.ಸದಸ್ಯರು ಹೈನುಗಾರಿಕೆಯನ್ನು ಕೈಗೊಂಡಿದ್ದರಿಂದಲೂ ಆಗಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 37.19 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 5 : ಒಟ್ಟು ಹಾಲು ಉತ್ಪಾದಕರು (ಸಂ.)**

ಶಿವಮೊಗ್ಗ ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 2.4 ರಷ್ಠು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಶಃ ಈಗಾಗಲೇ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಹಾಲು ಪೂರೈಕೆದಾರರನ್ನು ಹೊಂದಿರಬಹುದು. ವಿಜಯಪುರ ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ.86 ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಹೆಚ್ಚು ಪ.ಪಂ. ಸದಸ್ಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 24.31 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 6 : ಖರೀದಿಸಿದ ಒಟ್ಟು ಹಾಲು (ಲೀಟರ್‌ಗಳಲ್ಲಿ)**

ದಕ್ಷಿಣ ಕನ್ನಡ ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 34.7ರಷ್ಠು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಶಃ ಈಗಾಗಲೇ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಹಾಲು ಪೂರೈಕೆದಾರರನ್ನು ಹೊಂದಿರಬಹುದು. ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ.261 ರಷ್ಟು ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಹೆಚ್ಚು ಸದಸ್ಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 120.48 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 7 : ಮಹಿಳೆಯರಿಂದ ಖರೀದಿಸಿದ ಹಾಲು (ಲೀಟರ್‌ಗಳಲ್ಲಿ)**

ಬೆಂಗಳೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 24.1 ರಷ್ಠು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಶಃ ಈಗಾಗಲೇ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಮಹಿಳಾ ಹಾಲು ಪೂರೈಕೆದಾರ ಸದಸ್ಯರನ್ನು ಹೊಂದಿರಬಹುದು. ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ.250 ರಷ್ಟು ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಹೆಚ್ಚು ಮಹಿಳಾ ಸದಸ್ಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 117.18 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 8 : ಪ.ಜಾ.ಸದಸ್ಯರಿಂದ ಖರೀದಿಸಿದ ಹಾಲು (ಲೀಟರ್‌ಗಳಲ್ಲಿ)**

ತುಮಕೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 44.8 ರಷ್ಠು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಶಃ ಈಗಾಗಲೇ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಪ.ಜಾ. ಹಾಲು ಪೂರೈಕೆದಾರ ಸದಸ್ಯರನ್ನು ಹೊಂದಿರಬಹುದು. ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ. 282.3 ರಷ್ಟು ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಹೆಚ್ಚು ಪ.ಜಾ. ಸದಸ್ಯರು

ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 137.32 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

**ಸೂಚಕ 9 : ಪ.ಪಂ.ಸದಸ್ಯರಿಂದ ಖರೀದಿಸಿದ ಹಾಲು (ಲೀಟರ್‌ಗಳಲ್ಲಿ)**

ತುಮಕೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಕನಿಷ್ಠ ಶೇ. 30.9 ರಷ್ಟು ಬೆಳವಣಿಗೆಯನ್ನು ಗಮನಿಸಲಾಗಿದೆ. ಬಹುಶಃ ಈಗಾಗಲೇ ಜಿಲ್ಲಾ ಹಾಲು ಒಕ್ಕೂಟವು ಹೆಚ್ಚು ಪ.ಪಂ. ಹಾಲು ಪೂರೈಕೆದಾರ ಸದಸ್ಯರನ್ನು ಹೊಂದಿರಬಹುದು. ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಗರಿಷ್ಠ ಶೇ. 294.6 ರಷ್ಟು ಬೆಳವಣಿಗೆಯನ್ನು ಗಮನಿಸಿದೆ. ಇಲ್ಲಿ ಹೆಚ್ಚು ಪ.ಪಂ. ಸದಸ್ಯರು ಖಾಸಗಿ ಹಾಲು ಸಂಗ್ರಾಹಕರಿಂದ ಸಹಕಾರಿ ವಲಯಕ್ಕೆ ಸ್ಥಳಾಂತರಗೊಂಡಿರಬಹುದು. ಆದಾಗ್ಯೂ, ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಡಿ ಗಮನಿಸಿರುವ ಶೇ. 131.16 ರಷ್ಟು ಸರಾಸರಿ ಬೆಳವಣಿಗೆಯು ಧನಾತ್ಮಕವಾಗಿ ಗಣನೀಯವಾಗಿರುತ್ತದೆ.

- ❖ **ನಿರ್ಣಯ** : ದತ್ತಾಂಶ ವಿಶ್ಲೇಷಣೆಯು ಎಲ್ಲಾ 9 ಸೂಚಕಗಳಲ್ಲಿ ಧನಾತ್ಮಕ ಬೆಳವಣಿಗೆಯನ್ನು ತೋರಿಸಲು ಹಾಲು ಪೂರೈಕೆದಾರರು/ಹೈನುಗಾರರು ಖಾಸಗಿ ಹಾಲು ಸಂಗ್ರಾಹಕರಿಂದ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಸ್ಥಳಾಂತರಗೊಂಡಿರುವುದು ಮತ್ತು ಕುಟುಂಬಗಳ ಹಾಲು ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಾಗಿರುವ ಕಾರಣಗಳು ಇರಬಹುದು. ಗಮನಿಸಲಾದ ಫಲಿತಾಂಶಕ್ಕೆ ಸರ್ಕಾರದಿಂದ ಹಾಲು ಪ್ರೋತ್ಸಾಹಧನ ಯೋಜನೆಯಡಿ ನೀಡಲಾದ ಹಣದ ಪ್ರಭಾವ ಮತ್ತು ಉತ್ತೇಜನವೇ ಕಾರಣವೆನ್ನಬಹುದು.

**ಈ. ಅಧ್ಯಯನ ಮತ್ತು ನಿಯಂತ್ರಕ ಸಮೂಹಗಳಿಂದ ಗ್ರಾಮೀಣ ಪ್ರದೇಶದ ಯುವಕರ ವಲಸೆ**

- ಅಧ್ಯಯನ ಸಮೂಹದ ರೈತರಿಂದ ಪಡೆದ ದತ್ತಾಂಶದಿಂದ ಒಂದರಿಂದ ಎಂಟು ಯುವಕರು ನಗರಕ್ಕೆ ವಲಸೆ ಹೋಗದೆ ಹೈನುಗಾರಿಕೆಯನ್ನು ಮುಂದುವರಿಸಿರುತ್ತಾರೆಂದು ತಿಳಿದಿರುತ್ತದೆ. ಇದೇ ಮಾಹಿತಿಯನ್ನು ಸುಮಾರು ಶೇ.1.8 – 25ರಷ್ಟು ರೈತರು ಪುನರುಚ್ಚರಿಸಿರುತ್ತಾರೆ.

- ❖ **ನಿರ್ಣಯ:** ಸಾಮಾನ್ಯವಾಗಿ ಹಲವಾರು ಕಾರಣಗಳಿಂದ ನಗರಗಳಿಗೆ ಯುವಕರು ವಲಸೆ ಹೋಗುತ್ತಾರೆ. ಆದಾಗ್ಯೂ, ದತ್ತಾಂಶ ವರದಿಯಂತೆ ಕೆಲವೇ ಯುವಕರು ನಗರಗಳಿಗೆ ವಲಸೆ ಹೋಗದೆ ಹೈನುಗಾರಿಕೆಯನ್ನು ಆರಿಸಿಕೊಂಡಿರುತ್ತಾರೆ. ಹೈನುಗಾರಿಕೆಯು ನಿರಂತರ ಆದಾಯ ನೀಡುವುದರಿಂದ ಸಣ್ಣ ಸಂಖ್ಯೆಯ ಯುವಕರು ಶಾಲೆ ತೊರೆದವರು ಇಲ್ಲವೆ ನಿರುದ್ಯೋಗಿಗಳು ಕುಟುಂಬದ ಆರ್ಥಿಕ ಸ್ಥಿತಿ ಮತ್ತು ಅವಕಾಶಗಳನ್ನು ಆಧರಿಸಿ ಹೈನುಗಾರಿಕೆಯನ್ನು ಆರಿಸಿಕೊಂಡಿರುತ್ತಾರೆ. ಗ್ರಾಮಗಳಿಗೆ ಭೇಟಿ ನೀಡಿ ಸತ್ಯಾಂಶವನ್ನು ಪರಿಶೀಲಿಸುವಾಗ ರೈತರೊಂದಿಗಿನ ಚರ್ಚೆಯಲ್ಲಿ ಯುವಕರ ವಲಸೆಯ ಮೇಲೆ ಹಾಲು ಪ್ರೋತ್ಸಾಹಧನ ಯೋಜನೆಯ ಯಾವುದೇ ನೇರ ಪ್ರಭಾವ ಇಲ್ಲವೆಂದು ತಿಳಿದು ಬಂದಿರುತ್ತದೆ. ಅಂಕಿಅಂಶಗಳ ವಿಶ್ಲೇಷಣೆಯೂ ಸಹಾ ಇದನ್ನು ದೃಢಪಡಿಸಿರುತ್ತದೆ.

**9.2.4 ಪ್ರತಿ ಲೀ. ಹಾಲಿಗೆ ಹಿಂದೆ ನೀಡಲಾಗುತ್ತಿದ್ದ ರೂ. 2.00 ಮತ್ತು ಪ್ರಸ್ತುತ ನೀಡುತ್ತಿರುವ ರೂ.4.00 ಸಾಕಾಗುವುದೇ? ಈ ದರವನ್ನು ಬದಲಾಯಿಸಬೇಕೇ? ಹಾಗಿದ್ದರೆ ಏಕೆ ಮತ್ತು ಎಷ್ಟಿರಬೇಕು?**

- ❖ ದತ್ತಾಂಶ ವಿಶ್ಲೇಷಣೆಯಲ್ಲಿ ಶೇ.81 ರಷ್ಟು ಉಪ ನಿರ್ದೇಶಕರು (ಪಶು ಪಾಲನೆ), ಶೇ.90 ರಷ್ಟು ಸ್ಥಳೀಯ ಪಶುವೈದ್ಯರು, ಶೇ.32ರಷ್ಟು ಹಾಲು ಉತ್ಪಾದಕರ ಸಹಕಾರಿ ಸಂಘಗಳು ಕಾಯದರ್ಶಿಗಳು ಪ್ರಸ್ತುತದ ರೂ.4.00ರ ದರವು ಕಡಿಮೆಯೆಂದು ವರದಿಸಿರುತ್ತಾರೆ. ಅವರುಗಳು ಪ್ರೋತ್ಸಾಹಧನದ ದರವನ್ನು ಪ್ರತಿ ಲೀಟರ್ ಹಾಲಿಗೆ ರೂ.6.00ಕ್ಕೆ (ಕ್ರಮವಾಗಿ ಶೇ.29, 42 ಮತ್ತು 79) ಮತ್ತು ರೂ.8.00 ಕ್ಕೆ (ಕ್ರಮವಾಗಿ ಶೇ.29, 21

ಮತ್ತು 34) ಪರಿಷ್ಕರಿಸಬೇಕೆಂದು ಸಹಾ ತಿಳಿಸಿರುತ್ತಾರೆ. ಶೇ.79ರಷ್ಟು ವ್ಯವಸ್ಥಾಪಕ ನಿರ್ದೇಶಕರು ಯೋಜನೆಯ ಬಗ್ಗೆ ಸಂತೋಷವಾಗಿದ್ದಾರೆ. ಶೇ.29ರಷ್ಟು ಆಹಾರದ ಮತ್ತು ನಿರ್ವಹಣೆಯ ವೆಚ್ಚ ಹೆಚ್ಚಾಗಿರುವುದರಿಂದ ಪ್ರತಿ ಲೀಟರ್ ಹಾಲಿಗೆ ರೂ.4.00 ರಿಂದ ರೂ.5.00 ಇಲ್ಲವೆ ರೂ.6.00ಕ್ಕೆ ಏರಿಸಬೇಕೆಂದು ಸಲಹೆ ನೀಡಿರುತ್ತಾರೆ.ಇತರ ವ್ಯವಸ್ಥಾಪಕ ನಿರ್ದೇಶಕರು ಪ್ರತಿಕ್ರಿಯೆ ನೀಡಿರುವುದಿಲ್ಲ.

❖ ಅಧ್ಯಯನ ಸಮೂಹದಲ್ಲಿ ಶೇ.79.2ರಷ್ಟು ರೈತರಿಗೆ ಹಾಲಿ ಇರುವ ಪ್ರೋತ್ಸಾಹಧನ ರೂ.4.00ರ ದರವು ಕಡಿಮೆಯಾಗಿರುವುದರಿಂದ ಸಂತೋಷವಿಲ್ಲ. ಸುಮಾರು ಶೇ. 89.5ರಷ್ಟು ರೈತರು ಹಾಲಿನ ಪ್ರೋತ್ಸಾಹದರವನ್ನು ಪರಿಷ್ಕರಿಸಬೇಕೆಂದಿದ್ದಾರೆ. ಸುಮಾರು ಶೇ.25.8 ರಷ್ಟು ರೈತರು ರೂ.6.00 ಮತ್ತು ಶೇ. 29.3 ರಷ್ಟು ರೈತರು ರೂ.8.00 ಪ್ರೋತ್ಸಾಹಧನ ಬೇಕೆಂದಿದ್ದಾರೆ. ಆಹಾರ, ಮೇವು ಮತ್ತು ಒಟ್ಟಾರೆ ನಿರ್ವಹಣೆಯ ವೆಚ್ಚ ಹೆಚ್ಚಾಗಿರುವುದರಿಂದ ಪ್ರೋತ್ಸಾಹಧನವನ್ನು ಮೇಲ್ದಿಕ್ಕಿನಲ್ಲಿ ಪರಿಷ್ಕರಿಸಬೇಕೆಂದಿದ್ದಾರೆ.

- **ನಿರ್ಣಯ:** ಉತ್ತರಿಸಿದವರಲ್ಲಿ ಬಹಳಷ್ಟು ಜನರು ಹೈನು ರಾಸುಗಳ ನಿರ್ವಹಣಾ ವೆಚ್ಚ ಜಾಸ್ತಿಯಾಗಿರುವುದರಿಂದ ಹೆಚ್ಚಿನ ಪ್ರೋತ್ಸಾಹಧನದ ಮೊತ್ತ ಬೇಕೆಂದಿರುತ್ತಾರೆ. ವಾಸ್ತವದಲ್ಲಿ ಆಹಾರದ ವೆಚ್ಚ ಏರಿಕೆಯಾಗಿದೆ. (ಪ್ರಸ್ತುತ ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿಪ್ರತಿ ಕಿಲೊಗ್ರಾಂ ಆಹಾರವನ್ನು ರೂ.18.00ರಂತೆ ಮಾರಾಟ ಮಾಡಲಾಗುತ್ತಿದೆ. ಇತರ ಪರಿಕರಗಳ ವೆಚ್ಚವೂ ಹೆಚ್ಚಾಗಿದೆ. ಒಂದು ಲೀಟರ್ ಹಾಲಿನ ಉತ್ಪಾದನಾ ವೆಚ್ಚವೂ ಸಾಕಷ್ಟು ಹೆಚ್ಚಾಗಿದೆ. ಆದ್ದರಿಂದ, ಪ್ರೋತ್ಸಾಹಧನ ಹೆಚ್ಚಳದ ಬೇಡಿಕೆಯು ವಿಶ್ವಸನೀಯ ಮತ್ತು ಸಕಾರಣದಿಂದ ಕೂಡಿದೆ.

**9.2.5 ಈ ಯೋಜನೆಯನ್ನು ಜಾರಿಗೆ ತರಲಾಗಿ ರೈತರ ಮತ್ತು ಭೂರಹಿತರ ಸಾಮಾಜಿಕ– ಆರ್ಥಿಕ ಸ್ಥಿತಿಯ ಮೇಲೆ ಏನಾದರೂ ಪ್ರಭಾವವಾಗಿದೆಯೇ?**

- ದತ್ತಾಂಶ ವಿಶ್ಲೇಷಣೆಯು ಅಧ್ಯಯನ ಸಮೂಹದ ರೈತರ ವ್ಯಕ್ತಿಗತ ಆದಾಯದ ಮಟ್ಟವು 2013ರ ಅಂತ್ಯಕ್ಕೆ ವಾರ್ಷಿಕವಾಗಿ ಶೇ. 7 ರಿಂದ 20ರಷ್ಟು ಏರಿಕೆಯನ್ನು ತೋರಿಸಿರುತ್ತದೆ. ಇದೇ ಅವಧಿಯಲ್ಲಿ ಸಂಚಿತ ಆದಾಯದ ಬೆಳವಣಿಗೆಯು ಶೇ.94ರಷ್ಟಿರುವುದನ್ನು ಗಮನಿಸಲಾಗಿದೆ.
- ಹಣ ತೊಡಗಿಸುವಿಕೆ: ಶೇ.29 ರಿಂದ 36ರಷ್ಟು ರೈತರು ತಮ್ಮ ಆದಾಯವನ್ನು ಟಿವಿ, ಫ್ರಿಡ್ಜ್, ಇತರೆ ಉಪಯೋಗಿ ವಸ್ತುಗಳನ್ನು ಖರೀದಿಸಲು ಬಳಸಿದ್ದಾರೆ. ಬಹುತೇಕ (ಶೇ.62.4) ಹೈನುಗಾರರು ಬ್ಯಾಂಕ್ ಗಳಲ್ಲಿ ಉಳಿತಾಯ ಮಾಡಿದ್ದಾರೆ. ಶೇ.13.4 ರಷ್ಟು ರೈತರು ಭೂಮಿಯನ್ನೂ ಖರೀದಿಸಿದ್ದಾರೆ. ಶೇ. 9ರಷ್ಟು ರೈತರು ದನಗಳ ಕೊಟ್ಟಿಗೆಯನ್ನು ದುರಸ್ತಿ ಮಾಡಿಸಲು ಆದಾಯವನ್ನು ಬಳಸಿದ್ದಾರೆ. ಹೆಚ್ಚುವರಿ ಆದಾಯವನ್ನು ಶೆ.67 ರಷ್ಟು ರೈತರು ಮಕ್ಕಳ ಶಿಕ್ಷಣಕ್ಕೆ ಬಳಸಿಕೊಂಡಿದ್ದಾರೆ. ಬಹುತೇಕ (ಶೇ.88–95) ರೈತರು ಗ್ರಾಮ ಪಂಚಾಯತಿಯ ಸದಸ್ಯರಾಗಿ, ಹಾಲು ಉತ್ಪಾದಕರ ಸಹಕಾರಿ ಸಂಘದ ನಿರ್ದೇಶಕರಾಗಿ ಮತ್ತು ಸ್ಥಳೀಯ ನಾಟಕ ಹಾಗೂ ಹಬ್ಬಗಳಲ್ಲಿ ಭಾಗವಹಿಸಿ ಸಮಾಜದಲ್ಲಿ ಅವರ ಸ್ಥಾನಮಾನ ಸುಧಾರಿಸಿದೆ.
- **ನಿರ್ಣಯ**: ಒಟ್ಟಾರೆಯಾಗಿ ಹಾಲು ಪ್ರೋತ್ಸಾಹಧನ ಯೋಜನೆಯು ಸಹಕಾರಿ ವಲಯದ ರೈತರ ಸಾಮಾಜಿಕ ಸ್ಥಿತಿಯ ಮೇಲೆ ನಿಯಂತ್ರಕ ಸಮೂಹಕ್ಕೆ ಹೋಲಿಸಿದರೆ ಧನಾತ್ಮಕ ಗಣನೀಯ ಪ್ರಭಾವವನ್ನು ಉಂಟುಮಾಡಿರುತ್ತದೆ.

**9.2.6 ಹಾಲು ಪ್ರೋತ್ಸಾಹಧನ ನೀಡಲಾಗಿ ಆಹಾರ ನೀಡಿಕೆ, ಲಸಿಕೆ ಹಾಕಿಸುವುದು, ಜಂತು ನಿವಾರಣೆ, ಕರುಗಳ ಪಾಲನೆ ಮತ್ತು ಆಹಾರದ ಸಮಂಜಸ ಬಳಕೆಯ ನಿರ್ವಹಣಾ ಪದ್ಧತಿಗಳ ತಿಳುವಳಿಕೆಯಲ್ಲಿ ಸುಧಾರಣೆಯಾಗಿದೆಯೇ?**

- ದತ್ತಾಂಶ ವಿಶ್ಲೇಷಣೆಯು ಶೇ.100ರಷ್ಟು ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ಹೈನು ನಿರ್ವಹಣೆಯಲ್ಲಿ ಧನಾತ್ಮಕ ಬದಲಾವಣೆಯಾಗಿದೆಯೆಂದು ವರದಿಸಿರುವುದನ್ನು ತಿಳಿಸಿಕೊಟ್ಟಿದೆ. ಹಾಲು ಪ್ರೋತ್ಸಾಹಧನ ಯೋಜನೆಯಿಂದಾಗಿ ಆಹಾರ ನೀಡುವುದು, ಲಸಿಕೆ ಹಾಕಿಸುವುದು, ಜಂತು ನಿವಾರಣೆ, ಕರುಗಳ ಪಾಲನೆ ಮತ್ತು ಆಹಾರ ಹಾಗೂ ಮೇವಿನ ಸಮಂಜಸ ಬಳಕೆಯನ್ನು ಕುರಿತು ಸುಧಾರಿತ/ವೈಜ್ಞಾನಿಕ ನಿರ್ವಹಣಾ ಪದ್ಧತಿಯ ತಿಳುವಳಿಕೆ ರೈತರ ಮಟ್ಟದಲ್ಲಿ ಸುಧಾರಣೆಯಾಗಿದೆಯೆಂದು ಬಹುತೇಕ (ಶೇ.88) ಕಾರ್ಯದರ್ಶಿಗಳು ವರದಿಸಿರುತ್ತಾರೆ.

- **ನಿರ್ಣಯ** : ಹಾಲು ಪ್ರೋತ್ಸಾಹಧನ ಯೋಜನೆಯು ರೈತರ ಹಂತದಲ್ಲಿ ಹೈನು ಕ್ಷೇತ್ರ ನಿರ್ವಹಣೆ ಬಗ್ಗೆ ತಿಳುವಳಿಕೆಯ ಮೇಲೆ ಧನಾತ್ಮಕ ಪ್ರಭಾವವನ್ನು ಉಂಟುಮಾಡಿರುತ್ತದೆ. ಈ ಸುಧಾರಣೆಯು ಜಿಲ್ಲಾ ಹಾಲು ಒಕ್ಕೂಟಗಳು ಆಯೋಜಿಸಿದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳಾದ ಯಶಸ್ವೀ ರೈತರ ಭೇಟಿ, ಅಲ್ಪಾವಧಿ ತರಬೇತಿಗಳು ಹಾಗೂ ಸ್ಥಳೀಯ ಪಶುವೈದ್ಯರು ಚಿಕಿತ್ಸೆ ನೀಡುವಾಗ ಸಮಾಲೋಚಿಸಿದ ಪರಿಣಾಮವಾಗಿರುತ್ತದೆ. ಆ ಮೂಲಕ ಸ್ಥಳೀಯವಾಗಿ ಸಹಕಾರಿ ವಾತಾವರಣದಲ್ಲಿ ರೈತರು ಪ್ರೇರೇಪಣೆಗೊಂಡಿದ್ದಾರೆ. ಧನಾತ್ಮಕ ಪ್ರಭಾವವನ್ನು  ಪುಷ್ಟೀಕರಿಸಲು ಬಹುತೇಕ (ಶೇ.95) ರಷ್ಟು ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ಪಶು ಆಹಾರ ಮತ್ತು ಲವಣ ಮಿಶ್ರಣ ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗಿರುವುದನ್ನು ವರದಿ ಮಾಡಿರುತ್ತಾರೆ. ರೋಗೋದ್ರೇಕಗಳು ಕಡಿಮೆಯಾಗಿರುವುದಾಗಿ ವರದಿಯಾಗಿರುತ್ತದೆ. ಗ್ರಾಮಮಟ್ಟದಲ್ಲಿ ಹೈನು ರಾಸುಗಳಲ್ಲಿ ಕೃತಕ ಗರ್ಭಧಾರಣೆ ಹೆಚ್ಚಾಗಿರುತ್ತದೆ. ಸತ್ಯಾಂಶ ಶೋಧನೆಯ ವೇಳೆಯಲ್ಲಿ ತಂಡವು ಒಂದು ಹಿತ್ತಲ ಹೈನು ಘಟಕವನ್ನು ಪರಿಶೀಲಿಸಿತು. ಸ್ವಚ್ಛತೆ, ಜಾನುವಾರುಗಳ ಸ್ಥಿತಿ ಮತ್ತು ಹೈನು ಘಟಕದ ನಿರ್ವಹಣೆಯನ್ನು ಪರಿಶೀಲಿಸಿದಾಗ ನಿರೀಕ್ಷಿತ ಗುಣಮಟ್ಟವಿರುವುದು ಕಂಡುಬಂದಿರುತ್ತದೆ. ಚರ್ಚೆಯ ವೇಳೆಯಲ್ಲಿಯೂ ಇದು ದೃಡಪಟ್ಟಿರುತ್ತದೆ.

**9.2.7 ಈ ಯೋಜನೆಯು ಜಾರಿಯಲ್ಲಿರುವುದರಿಂದ ಗ್ರಾಮೀಣ ಯುವಕರು ಹೈನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಆಕರ್ಷಿತರಾಗಿದ್ದಾರೆಯೇ?**

- ಅಧ್ಯಯನದಲ್ಲಿ ಲಭ್ಯವಾದ ದತ್ತಾಂಶದ ಪ್ರಕಾರ 94 ಯುವಕರು ಮಾತ್ರ ಹೈನುಗಾರಿಕೆಯನ್ನು ಕೈಗೊಂಡಿರುತ್ತಾರೆ. ಹಾಗೆಯೇ, ಗ್ರಾಮ ಮಟ್ಟದಲ್ಲಿ ಕೆಲವು ಯುವಕರು ಹೈನುಗಾರಿಕೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆಂದು ಶೇ. 56ರಷ್ಟು ರೈತರು ವರದಿಸಿದ್ದಾರೆ. ನಿಯಂತ್ರಿತ ಸಮೂಹದ ಜನಸಂಖ್ಯೆಯ ಶೇ.41 ಜನರು ಇದನ್ನೇ ವರದಿಸಿರುತ್ತಾರೆ.

- **ನಿರ್ಣಯ**: ಹಾಲಿನ ಮಾರಾಟದಿಂದ ಹೆಚ್ಚಿನ ಆದಾಯ ಬಂದ ಕಾರಣ ಕೆಲವು ಯುವಕರು ಹೈನುಗಾರಿಕೆಯನ್ನು ಮುಂದುವರಿಸಲು ಹಾಲು ಪ್ರೋತ್ಸಾಹಧನ ಯೋಜನೆಯು ಪ್ರಭಾವ ಬೀರಿರಬಹುದು. ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಈ ಯೋಜನೆಯು ಯುವಕರ ಮೇಲೆ ಪ್ರಭಾವ ಬೀರಿರುವುದಿಲ್ಲ. ಆದಾಗ್ಯೂ, ಅಧ್ಯಯನ ಮತ್ತು ನಿಯಂತ್ರಿತ ಸಮೂಹಗಳಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲವೆಂದು ದತ್ತಾಂಶದ ವಿಶ್ಲೇಷಣೆಯು ತೋರಿಸಿಕೊಟ್ಟಿದೆ ಮತ್ತು ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದಿಂದಾಗಿಯೇ ಯುವಕರು ಹೈನುಗಾರಿಕೆಯನ್ನು ಕೈಗೊಳ್ಳುವಂತಾಗಿರುವುದಿಲ್ಲ.

**9.2.8 ಈ ಯೋಜನೆಯು ಗ್ರಾಮೀಣ ಪ್ರದೇಶಗಳಲ್ಲಿ ಹೈನುಗಾರಿಕೆಯ ಲಾಭದಾಯಕತೆಯಲ್ಲಿ ಯಾವುದಾದರೂ ಬದಲಾವಣೆ ಮಾಡಿದೆಯೇ?**

✓ **ಗ್ರಾಮೀಣ ಹೈನುಗಾರಿಕೆಯ ಬಗ್ಗೆ ಕೆಲವು ವಾಸ್ತಾವಾಂಶಗಳು**

- ಗ್ರಾಮೀಣ ಭಾರತದಲ್ಲಿ ಹೈನುಗಾರಿಕೆಯು " ಹಿತ್ತಲಿನಲ್ಲಿ ಇಲ್ಲವೆ ಮನೆಯ ಮುಂದೆ ಪಾಲನೆ" ಪದ್ಧತಿಯಲ್ಲಿದೆ. ಕೈಗಾರಿಕಾ ಮಾದರಿಯ ಹೈನುಗಾರಿಕೆಯಲ್ಲ.
- ಸಾಮಾನ್ಯವಾಗಿ ದೊಡ್ಡ ರೈತರು ಹೆಚ್ಚು ಸಂಖ್ಯೆಯಲ್ಲಿ ಹೈನು ರಾಸುಗಳನ್ನು ಹೊಂದಿರುತ್ತಾರೆ ಮತ್ತು ತಮ್ಮದೇ ಆದ ಲಾಭದಾಯಕ ಮಾರಾಟ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.
- ಹಸುವಿನ ಹಾಲು ಎಮ್ಮೆ ಹಾಲಿನಲ್ಲಿರುವ ಅರ್ಧದಷ್ಟು ಕೊಬ್ಬಿನಂಶವನ್ನು ಹೊಂದಿರುತ್ತದೆ. (ಹಸುವಿನ ಹಾಲು – ಶೇ.3.5–5.0% ಮತ್ತು ಎಮ್ಮೆ ಹಾಲು ಶೇ. 6.1–10 ಕೊಬ್ಬಿನಂಶ)
- ಸ್ಥಳೀಯ ಹಾಲು ಉತ್ಪಾದಕರ ಸಹಕಾರಿ ಸಂಘದಿಂದ ರೈತನು ಗಳಿಸುವ ಆದಾಯ ಅಥವಾ ಹಣವು ಆತನು ಪೂರೈಸಿದ ಹಾಲಿನಲ್ಲಿರುವ ಕೊಬ್ಬು ಮತ್ತು ಪ್ರಮಾಣವನ್ನು ಅವಲಂಬಿಸಿದೆ.
- ಪ್ರಾಣಿಗಳ ತ್ಯಾಜ್ಯವನ್ನು ಗೊಬ್ಬರವಾಗಿ ಮಾರಾಟ ಮಾಡಿ ಪ್ರತಿಯೊಬ್ಬ ರೈತನು ವರ್ಷಕ್ಕೆ ಪ್ರಾಣಿಯೊಂದರಿಂದ ರೂ. 500 ಆದಾಯ ಗಳಿಸುತ್ತಾನೆ.
- ಎಮ್ಮೆಯ ಹಾಲಿನ ಉತ್ಪಾದನೆಗೆ ಹಸುವಿನ ಹಾಲಿಗಿಂತ ಹೆಚ್ಚು ವೆಚ್ಚವಾಗುತ್ತದೆ.
- ರಾಸುಗಳ ವಿಮಾ ಪ್ರೀಮಿಯಂ ದುಬಾರಿಯೆಂದು ರೈತರು ಪರಿಗಣಿಸುತ್ತಾರೆ.
- ಮೇವು ಮತ್ತು ಆಹಾರದ ವೆಚ್ಚವು ಶೇ.80–90ರಷ್ಟಿದ್ದು ಲಾಭದಾಯಕತೆಯನ್ನು ನಿರ್ಧರಿಸುತ್ತದೆ.
- ಸಾಮಾನ್ಯವಾಗಿ ಒಂದು ಆಥವಾ ಎರಡು ರಾಸುಗಳನ್ನು ಸಾಕಿರುವ ರೈತರು ಕಠಿಣ ಕೃಷಿ ಕೆಲಸದ ನಂತರ ಮೇವನ್ನು ಸಂಗ್ರಹಿಸುತ್ತಾರೆ. ಮೇವಿಗಾಗಿ ತಗುಲಿದ ವೆಚ್ಚವನ್ನು ಲೆಕ್ಕಚಾರ ಮಾಡುವುದಿಲ್ಲ.
- ಹೈನು ರಾಸುಗಳ ನಿರ್ವಹಣೆಯಲ್ಲಿ ರೈತರ ಶ್ರಮವನ್ನು ಕೂಲಿ ವೆಚ್ಚದಲ್ಲಿ ಪರಿಗಣಿಸುವುದಿಲ್ಲ. ಮೇವು ಮತ್ತು ತಮ್ಮ ಶ್ರಮದ ಕೆಲಸದಿಂದ ಬರುವ ನೈಜ ಆದಾಯವನ್ನು ಲಾಭವೆಂದು ಪರಿಗಣಿಸುತ್ತಾರೆ.

❖ ಅಧ್ಯಯನದ ಸಮೂಹದ ರೈತರ ವೈಯುಕ್ತಿಕ ಆದಾಯವು 2013ರ ಅಂತ್ಯಕ್ಕೆ ವಾರ್ಷಿಕವಾಗಿ ಶೇ. 7 ರಿಂದ ಶೇ.20ರಷ್ಟು ಹೆಚ್ಚಳವಾಯಿತೆಂದು ದತ್ತಾಂಶ ವಿಶ್ಲೇಷಣೆಯು ತೋರಿಸಿಕೊಟ್ಟಿರುತ್ತದೆ.

- **ನಿರ್ಣಯ**: ಸರ್ಕಾರದಿಂದ ಕೊಡಲ್ಪಟ್ಟ ಪ್ರೋತ್ಸಾಹಧನದ ಮೊತ್ತದಿಂದ ರೈತರ ಆದಾಯವು ಹೆಚ್ಚಾಯಿತೆಂಬುದು ಸ್ಪಷ್ಟವಾಗಿದೆ. ಹೆಚ್ಚುವರಿಯಾಗಿ ಪಡೆದ ಆದಾಯವೇ ಲಾಭಾಂಶವೆಂದು ರೈತರು ಅಲೋಚಿಸಿದ್ದಾರೆ. ಆದಾಗ್ಯೂ, ನಿಯಂತ್ರಕ ಸಮೂಹದ ರೈತರಿಗೆ ಹೋಲಿಸಿದರೆ ಆದಾಯದ ಧನಾತ್ಮಕ ಹೆಚ್ಚಳವು ಗಣನೀಯವಾಗಿದೆ. ಇದು ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ಮುಖ್ಯ ಫಲಿತಾಂಶವಾಗಿದೆ.

**9.2.9 ಈ ಪ್ರೋತ್ಸಾಹಧನದ ಹಣವನ್ನು ಯಾವುದೇ ಹಂತದಲ್ಲಿ ಅಧಿಕವಾಗಿ ನೀಡಲಾಗಿದೆಯೇ? ಇದನ್ನು ತಡೆಯಲು ಯಾವ ತಾಳೆ ನೋಡುವ ಮತ್ತು ಸರಿದೂಗಿಸುವ ಕ್ರಮಗಳಿವೆ?**

- ಯಾವುದೇ ಹಂತದಲ್ಲಿ ಅಧಿಕ ಮೊತ್ತ ನೀಡಿರುವುದನ್ನು ಗಮನಿಸಿಲ್ಲವೆಂದು ಶೇ.67ರಷ್ಟು ಜಿಲ್ಲಾ ಅಧಿಕಾರಿಗಳು (ಪಶು ಪಾಲನೆ) ಮತ್ತು ಶೇ.65ರಷ್ಟು ಸ್ಥಳೀಯ ಪಶುವೈದ್ಯರು ವರದಿಸಿರುವುದಾಗಿ ದತ್ತಾಂಶವು ದೃಢಪಡಿಸಿರುತ್ತದೆ. ಆದರೆ, ಪ್ರಾಯಶಃ ಖಚಿತ ವರದಿಗಳಿಲ್ಲದ ಕಾರಣ ಉಳಿದ ಅಧಿಕಾರಿಗಳು

ಪ್ರತಿಕ್ರಿಯೆ ನೀಡಿರುವುದಿಲ್ಲ. ಆದಾಗ್ಯೂ, ಪಶು ಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆಯು ಸ್ವೀಕರಿಸಿರುವ ಎರಡು ದೂರುಗಳು ಸೂಕ್ತ ಕ್ರಮ ತೆಗೆದುಕೊಳ್ಳಲು ವಿಚಾರಣೆಯಲ್ಲಿರುತ್ತವೆ. ಅಧ್ಯಯನ ಸಮೂಹದ ಬಹುತೇಕ (ಶೇ.೯೮) ರೈತರು ಅಧಿಕ ಮೊತ್ತ ನಮೂದಿಸಿದ್ದರಿಂದ ಹೆಚ್ಚು ಹಣ ಪಡೆದಿಲ್ಲವೆಂದು ವರದಿಸಿದ್ದಾರೆ.

- ಅಂತೆಯೇ, ಸಂಬಂಧಪಟ್ಟ ಪ್ರಾಧಿಕಾರಿಗಳು ಕಾಲಾನುಕ್ರಮವಾಗಿ ಲೆಕ್ಕಪತ್ರಗಳನ್ನು ಪರಿಶೀಲಿಸಿದ್ದಾರೆಂದು ಅಧ್ಯಯನದ ಸಮೂಹದಲ್ಲಿ ಶೇ.೮೫.೦ರಷ್ಟು ರೈತರು ಮಾಹಿತಿ ನೀಡಿದ್ದಾರೆ.

- **ನಿರ್ಣಯ**: ಹಾಲು ಒಕ್ಕೂಟದ ವಿಸ್ತರಣಾಧಿಕಾರಿಗಳು, ಸ್ಥಳೀಯ ಅಧಿಕಾರಿಗಳು ಮತ್ತು ಲೆಕ್ಕ ಪರಿಶೋಧಕರ ತಂಡ ಕಾಲಕಾಲಕ್ಕೆ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ್ದಾರೆ. ಇದು ಮಾಸಿಕ, ತ್ರೈಮಾಸಿಕ ಇಲ್ಲವೆ ವಾರ್ಷಿಕ ತಾಳೆ ಮತ್ತು ಪಾವತಿಗಳ ಪರಿಶೀಲನೆ ಆಗಿರಬಹುದು. ಇದು ವಾಡಿಕೆಯಲ್ಲಿರುವ ಕ್ರಮವಾಗಿದೆ. ಈ ಉದ್ದೇಶಕ್ಕಾಗಿಯೇ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಿಂದ ರಚಿತವಾದ ತಂಡಗಳು ಒಂದೊಮ್ಮೆ ಕ್ಷೇತ್ರಮಟ್ಟದಲ್ಲಿ ಲೆಕ್ಕ ಪತ್ರಗಳನ್ನು ಪರಿಶೀಲಿಸುತ್ತಿದ್ದಾರೆ. ಕಾಲಾನುಕ್ರಮವಾಗಿ ವೀಡಿಯೊ ಕಾನಫರೆನ್ಸ್ ಮೂಲಕವೂ ಪ್ರಧಾನ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಇವರು ರಾಜ್ಯ ಮಟ್ಟದಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಗತಿಯನ್ನು ಪರಿಶೀಲಿಸುತ್ತಿದ್ದಾರೆ. ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿ ಪರಿಶೀಲನಾ ಸಮಿತಿಗಳು ನಿರಂತರವಾಗಿ ಪ್ರಗತಿಯನ್ನು ಪರಿಶೀಲಿಸಬೇಕು.

### ೯.೩ ಪದೋಲ್ಲೇಖದಲ್ಲಿನ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಚರ್ಚೆ

#### ೯.೩.1 ಹಾಲು ಪ್ರೋತ್ಸಾಹಧನವು ನೈಜವಾಗಿ ಪ್ರೋತ್ಸಾಹದಾಯಕವಾಗಿದೆಯೇ ಅಥವಾ ಸಾಮಾನ್ಯ ಸಹಾಯಧನದಂತಾಗಿದೆಯೇ?

೮,ಸೆಪ್ಟೆಂಬರ್,೨೦೦೮ರ ಸರ್ಕಾರದ ಆದೇಶದಲ್ಲಿ ಪ್ರೋತ್ಸಾಹಧನ ಯೋಜನೆಯ ಮಂಜೂರಾತಿಯಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲನ್ನು ಪೂರೈಸಿದ ರೈತರಿಗೆ ಪ್ರತಿ ಲೀಟರ್ ಹಾಲಿಗೆ ರೂ.೨.೦೦ರ ನೀಡುವ ಪ್ರೋತ್ಸಾಹಧನವು ಗ್ರಾಮೀಣ ಪ್ರದೇಶಗಳಲ್ಲಿ ಹೈನು ಚಟುವಟಿಕೆಯು ಲಾಭದಾಯಕವಾಗಿ ನಡೆಯಬೇಕೆಂದಿರುವ ಉದ್ದೇಶವನ್ನು ಸ್ಪಷ್ಟಪಡಿಸಲಾಗಿದೆ. ಮುಂದುವರಿದು, ಮೇವು ಮತ್ತು ಆಹಾರದ ವೆಚ್ಚದಲ್ಲಿ ಏರಿಕೆಯಾದ್ದರಿಂದ ಸಕಾಲಿಕ ಕ್ರಮವಾಗಿ ಉತ್ತಮ ಲಾಭದೊಂದಿಗೆ ರೈತರು ಹೈನುಗಾರಿಕೆಯನ್ನು ಮುಂದುವರಿಸುವಂತೆ ಉತ್ತೇಜಿಸಲು ಕರ್ನಾಟಕ ಸರ್ಕಾರವು 14,ಮೇ,2013ರಿಂದ ಜಾರಿಗೆ ಬರುವಂತೆ ಪ್ರೋತ್ಸಾಹಧನದ ದರವನ್ನು ರೂ.4.00ಕ್ಕೆ ಪರಿಷ್ಕರಿಸಿರುತ್ತದೆ. ಧನಾತ್ಮಕ ಪ್ರಭಾವದಿಂದ ರಾಜ್ಯದಲ್ಲಿ ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳವಾಗಿ ಈ ಧ್ಯೇಯೋದ್ದೇಶಗಳು ಸಫಲವಾಗಿರುವುದನ್ನು ದತ್ತಾಂಶ ವಿಶ್ಲೇಷಣೆ ಮತ್ತು ಶೋಧಗಳು ಪುಷ್ಠೀಕರಿಸುತ್ತವೆ. ಗ್ರಾಮೀಣ ರೈತರು ಇನ್ನೂ ಹೆಚ್ಚು ಹೈನು ರಾಸುಗಳನ್ನು ಸಾಕಲು ಉತ್ತೇಜಿಸಿರುತ್ತದೆ. ಈ ಯೋಜನೆಯು ರಾಜ್ಯದಲ್ಲಿ ಹೈನುಗಾರಿಕೆಯ ಅಭಿವೃದ್ಧಿಗೆ ಸ್ಪಷ್ಟವಾಗಿ ಪುಷ್ಠಿ ನೀಡಿರುತ್ತದೆ. ರೈತರೂ ಕೂಡ ಹಾಲು ಪ್ರೋತ್ಸಾಹಧನ ಯೋಜನೆಯ ಬಗ್ಗೆ ಹರ್ಷಿತರಾಗಿದ್ದಾರೆ, ಆದರೆ, ಬಹುತೇಕ ರೈತರು ನೀಡಿರುವ ರೂ.4.00 ರ ದರವು ಕಡಿಮೆ ಎಂದಿದ್ದಾರೆ. ಆದಾಗ್ಯೂ, ರೈತರು ಹೈನುಗಾರಿಕೆಯನ್ನು ಮುಂದುವರಿಸಲು ಉತ್ತೇಜಿತರಾಗಿರುವುದು ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲನ್ನು ಪೂರೈಸುವ ಮೂಲಕ ಸಹಕಾರಿ ಪದ್ಧತಿಗೆ ಮರಳಿ ಬಂದಿರುವುದನ್ನು ಶೋಧಗಳು ದೃಢೀಕರಿಸುತ್ತವೆ.

ನಿಘಂಟಿನ ಅರ್ಥವಿವರಣೆಯಂತೆ "**ಪ್ರೋತ್ಸಾಹ**' ಎಂಬುದು ಏನಾದರೂ ಮಾಡುವಂತೆ ನಿನ್ನನ್ನು ಪ್ರೇರೇಪಿಸುವಂಥಹುದು ಎಂದು ಮನನವಾಗಿದೆ. ಅರ್ಥಶಾಸ್ತ್ರದಲ್ಲಿ ಪ್ರೋತ್ಸಾಹವನ್ನು ಆರ್ಥಿಕ ಕ್ರಿಯೆಯನ್ನು ಉತ್ತೇಜಿಸುವ ಒಂದು ಪ್ರತಿಫಲ,

ಬಹುಮಾನ ಅಥವಾ ಬೆಲೆ ಎಂದು ಹೇಳಬಹುದು. **ಸಹಾಯಧನ** ಎಂಬುದು ಸಾಮಾನ್ಯವಾಗಿ ಸರ್ಕಾರದಿಂದ ಗುಂಪುಗಳಿಗೆ ಇಲ್ಲವೆ ವ್ಯಕ್ತಿಗಳಿಗೆ ನೀಡಲಾಗುವ ನಗದು ಪಾವತಿ ಅಥವಾ ತೆರಿಗೆಯ ಕಡಿತವಾಗಿರುತ್ತದೆ. ಸಹಾಯಧನವನ್ನು ಒಂದು ರೀತಿಯ ಹೊರೆಯನ್ನು ಕಡಿಮೆ ಮಾಡಲು ನೀಡುವುದಾಗಿದೆ ಮತ್ತು ಬಹಳಷ್ಟು ಸಂದರ್ಭಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯಿಂದ ಪರಿಗಣಿತವಾಗಿರುತ್ತದೆ. ಉತ್ಪಾದನಾ ಸಹಾಯಧನವು ಉತ್ಪಾದನೆಯ ವೆಚ್ಚ ಇಲ್ಲವೆ ನಷ್ಟವನ್ನು ಭಾಗಶಃ ಕಡಿಮೆ ಮಾಡುವ ಮೂಲಕ ಸರಬರಾಜುದಾರರನ್ನು ಹೆಚ್ಚು ಉತ್ಪಾದಿಸಲು ಪ್ರೇರೇಪಿಸುತ್ತದೆ.

ಆದಕಾರಣ, ಮಂಜೂರು ಮಾಡಿರುವ ಪ್ರೋತ್ಸಾಹಧನವು ಖಂಡಿತವಾಗಿಯೂ ರೈತರಿಗೆ ಪ್ರೋತ್ಸಾಹದಾಯಕ ಮೊತ್ತವೇ ಆಗಿದೆ ಎಂದು ಅಭಿಪ್ರಾಯಿಸಿದೆ. ಪ್ರೋತ್ಸಾಹಧನದ ಮೊತ್ತವನ್ನು ಅವರ ಆದಾಯಕ್ಕೆ ಹೆಚ್ಚುವರಿ ಮೊತ್ತವಾಗಿ ನೀಡುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ಆಹಾರದ ವೆಚ್ಚದ ಹೊರೆಯು ಕಡಿಮೆಯಾಗಿ ಹಾಲು ಪೂರೈಕೆದಾರರು ಇದನ್ನು ಸಹಾಯಧನವೆಂದು ಪರಿಗಣಿಸಬಹುದು. ಹಾಗಾಗಿ ಹೈನುಗಾರರ ಮೇಲೆ ಎರಡು ರೀತಿಯ ಪರಿಣಾಮವಾಗಿದೆ.

**9.3.2 ಈ ಯೋಜನೆಯು ಅಪೇಕ್ಷಿತ ಧ್ಯೇಯೋದ್ದೇಶಗಳನ್ನು ಪೂರೈಸುತ್ತಿದೆಯೇ?**

ಹೌದು. ಅಪೇಕ್ಷಿತ ಧ್ಯೇಯೋದ್ದೇಶಗಳನ್ನು ಈ ಯೋಜನೆಯು ಪೂರೈಸಿದೆ. ಇದನ್ನು ಸಾಬೀತು ಪಡಿಸಲು, ಅಧ್ಯಯನ ಸಮೂಹದಲ್ಲಿ ಹಾಲು ಪೂರೈಕೆದಾರರಿಗೆ ಹೆಚ್ಚುವರಿ ಆದಾಯವನ್ನು ಒದಗಿಸಿ ಧನಾತ್ಮಕ ಪ್ರಭಾವವನ್ನು ಬೀರಿರುವುದಾಗಿ ದತ್ತಾಂಶ ವಿಶ್ಲೇಷಣೆಯು ಸ್ಪಷ್ಟವಾಗಿ ತೋರಿಸಿದೆ. ಇದಕ್ಕೆ ಕೂಡಿಕೆಯಾಗಿ, ಹೈನು ಚಟುವಟಿಕೆ ಹೆಚ್ಚಾಗಿ, ಹೈನು ನಿರ್ವಹಣೆಯಲ್ಲಿ ಸುಧಾರಣೆಯ ಫಲವಾಗಿ ಹಾಲಿನ ಉತ್ಪಾದನೆ ಮತ್ತು ಗ್ರಾಮಗಳಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಹಾಲಿನ ಸಂಗ್ರಹಣೆಯಲ್ಲಿ ಏರಿಕೆಯಾಗಿದೆ.

**9.3.3 ಗಮನ ಹರಿಸಬೇಕಾದ ಕ್ಷೇತ್ರಗಳು ಮತ್ತು ಯಾವ ರೀತಿಯ ಸರಿಪಡಿಸುವ ಕ್ರಮ ಬೇಕಾಗಿದೆ?**

ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲನ್ನು ಪೂರೈಸುತ್ತಿರುವ ರೈತರಿಗೆ ಹಾಲಿ ನೀಡುತ್ತಿರುವ ಹಾಲಿನ ಖರೀದಿ ದರವು ಪ್ರತಿಫಲದಾಯಕವಾಗದಿರುವ ಸಾಧ್ಯತೆ ಇದೆ. ಇದು ಗಮನ ಸೆಳೆಯುವಂತಹುದು, ಪ್ರತಿಫಲದಾಯಕ ದರವನ್ನು ನೀಡುವ ಧ್ಯೇಯೋದ್ದೇಶವನ್ನು ಈಡೇರಿಸುವುದು ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳಿಗೆ ಸವಾಲಾಗಿದೆ. ಆದಾಗ್ಯೂ, ಇದನ್ನು ಸರಿಪಡಿಸುವುದಕ್ಕಾಗಿ ಸಲಹೆಗಳನ್ನು ನೀಡಲು ಸಮರ್ಪಿತ ತಂಡವು 2007-08ರಿಂದ 2015-16ರ ಅವಧಿಯ ಉತ್ಪಾದನಾ ವೆಚ್ಚ ಮತ್ತು ಖರೀದಿ ದರದ ಬಗ್ಗೆ ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ಅಧ್ಯಯನ ಮಾಡಿತು.

ದತ್ತಾಂಶದ ಅಧ್ಯಯನವು ಕೆಲವು ವಾಸ್ತವಾಂಶಗಳನ್ನು ತಿಳಿಸಿಕೊಟ್ಟಿತು ಮತ್ತು ವಿವರಗಳು ಇಂತಿವೆ.

- ಹಾಲಿನ ಉತ್ಪಾದನಾ ವೆಚ್ಚ ಮತ್ತು ಖರೀದಿ ದರ ಒಕ್ಕೂಟದಿಂದ ಒಕ್ಕೂಟಕ್ಕೆ ಬದಲಾಗಿರುವುದು.
- ವಾಸ್ತವವಾಗಿ, ಒಕ್ಕೂಟದ ಹಂತದಲ್ಲಿ ಹಾಲಿನ ಖರೀದಿದರವನ್ನು ಲೆಕ್ಕ ಹಾಕುವಾಗ, ದರವು ಉತ್ಪಾದನಾ ವೆಚ್ಚದ ಮೇಲಷ್ಟೇ ಅವಲಂಬಿತವಾಗಿರದೆ, ಮುಖ್ಯವಾಗಿ ಒಕ್ಕೂಟದ ಆರ್ಥಿಕ ಸ್ಥಿತಿ ಮತ್ತು ಒಕ್ಕೂಟದ ಸ್ಥಿತಿಗತಿಯನ್ನೂ ಸಹಾ ಅವಲಂಬಿಸಿರುತ್ತದೆ.
- ಪ್ರಸ್ತುತ, ಋತುಮಾನದನುಸಾರ ಬದಲಾಗುವ ಉತ್ಪಾದನಾ ವೆಚ್ಚ ಮತ್ತು ಖರೀದಿ ದರದ ಬಗ್ಗೆ ಜಿಲ್ಲಾ ಹಾಲು ಒಕ್ಕೂಟಗಳಿಗೆ ಬೋಧಿಸುವ ಅಧಿಕಾರಯುತ ಸಂಸ್ಥೆ ಸರ್ಕಾರದ ಮಟ್ಟದಲ್ಲಿ ಇಲ್ಲ.
- ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚೆಯಲ್ಲಿ ಇನ್ನಷ್ಟು ಮಾಹಿತಿ ದೊರೆತಿದ್ದು ವಿವರಗಳು ಹೀಗಿವೆ :

- ಜಿಲ್ಲಾ ಹಾಲು ಒಕ್ಕೂಟಗಳು ಹಾಲು ಮಾರಾಟದ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉಳಿದು ಲಾಭ ಮಾಡಿಕೊಳ್ಳಲು ಪಾಲಿಕಾ ಸಂಸ್ಥೆಗಳಂತೆ ಕಾರ್ಯನಿರ್ವಹಿಸುವ ಮನೋಭಾವ ಹೊಂದಿವೆ.
- ಹಾಲು ಒಕ್ಕೂಟಗಳು ಸರ್ಕಾರದ ಅನುದಾನವಿಲ್ಲದೆ ಸುಸ್ಥಿರ ಬೆಳವಣಿಗೆ, ಸ್ವಂತ ಸಂಪನ್ಮೂಲಗಳನ್ನು ಬಳಸಿ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಳ್ಳಲು, ರೈತರಿಗೆ ಹೈನುಗಾರಿಕೆ ಸಂಬಂಧಿತ ಗುಣಮಟ್ಟದ ಸೇವೆಗಳನ್ನು ಒದಗಿಸಲು ಹೆಚ್ಚು ಲಾಭ ಗಳಸುತ್ತಿರಬಹುದು.
- ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಬೆಂಬಲವಾಗಿ ಜಿಲ್ಲಾ ಹಾಲು ಒಕ್ಕೂಟಗಳು ಸ್ವೀಕರಿಸಿರುವ ಸರ್ಕಾರಿ ಅನುದಾನವು ಗ್ರಾಮೀಣ ಹೈನುಗಾರರಿಂದ ಖರೀದಿಸಿದ ಹಾಲಿಗೆ ಪ್ರತಿಫಲದಾಯಕ ದರವನ್ನು ನೀಡಲು ಸಾಕಾಗದಿರಬಹುದು.

  ಈ ವ್ಯವಸ್ಥೆಯಲ್ಲಿರುವ ಲೋಪಗಳನ್ನು ಸರಿಪಡಿಸಲು ಮೇಲೆ ತಿಳಿಸಿದ ಅಂಶಗಳನ್ನು ಆಧರಿಸಿ ಈ ಕೆಳಕಂಡ ೩ ಆಯ್ಕೆಗಳ ಬಗ್ಗೆ ಚರ್ಚಿಸಿದೆ.

**ಆಯ್ಕೆ-1: ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ** ಯನ್ನು ಹಾಲಿನ ಉತ್ಪಾದನಾ ವೆಚ್ಚ ಮತ್ತು ರಾಜ್ಯದ ಜಿಲ್ಲಾ ಹಾಲು ಒಕ್ಕೂಟಗಳು ಋತುಮಾನಕ್ಕೆ ತಕ್ಕಂತೆ ಬದಲಾಗುವ ವೆಚ್ಚಗಳನ್ನು ಪರಿಗಣಿಸಿ ಹಾಲಿನ ಖರೀದಿ ದರವನ್ನು ಲೆಕ್ಕಾಚಾರ ಮಾಡುವ ಕಾರ್ಯವಿಧಾನ ಮತ್ತು ಪದ್ಧತಿಯ ಬಗ್ಗೆ ಶಿಫಾರಸ್ಸುಗಳನ್ನು ನೀಡುವ ಜವಾಬ್ದಾರಿಯನ್ನು ಹೊರುವಂತೆ ಸರ್ಕಾರದಿಂದ ಗುರುತಿಸಬಹುದು.

**ಆಯ್ಕೆ-2: "ಕರ್ನಾಟಕ ರಾಜ್ಯ ಕೃಷಿ ದರ ಆಯೋಗ"**ವನ್ನು ಹಾಲಿನ ಉತ್ಪಾದನಾ ವೆಚ್ಚ ಮತ್ತು ಜಿಲ್ಲಾ ಹಾಲು ಒಕ್ಕೂಟಗಳು ಹಾಲನ್ನು ಖರೀದಿಸಬೇಕಾದ ದರವನ್ನು ಲೆಕ್ಕಾಚಾರ ಮಾಡುವ ವಿಧಾನವನ್ನು ಪರಿಶೀಲಿಸುವಂತೆ ಕೋರುವುದು.

**ಆಯ್ಕೆ-೩ : ಹಾಲಿನ ಉತ್ಪಾದನಾ ವೆಚ್ಚ** ವನ್ನು ಲೆಕ್ಕಾಚಾರ ಮಾಡಲು ಭಾಗವಹಿಸುವಿಕೆ ಪದ್ಧತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ರೈತರ ಪ್ರತಿನಿಧಿ – ಸಣ್ಣ/ಅತಿ ಸಣ್ಣ ರೈತರು ಮತ್ತು ದೊಡ್ಡ ರೈತರು ಮತ್ತು ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕರು ಮತ್ತು ಸಹಕಾರ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಯೂ ಸೇರಿದಂತೆ ೩೦ ಜಿಲ್ಲಾ ಮಟ್ಟದ ಅಧಿಕಾರಯುತ ಸಮಿತಿಗಳನ್ನು ರಚಿಸುವುದು. ಆದರೆ, ಈ ಪದ್ಧತಿಯಲ್ಲಿ, ಪಕ್ಷಪಾತಕ್ಕೆ ಅವಕಾಶವಿದೆ.

### 9.3.4 ದಿನಾಂಕ: 26.12.2015ರಂದು ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ 25ನೇ ತಾಂತ್ರಿಕ ಸಮಿತಿ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮ

ಸ್ಥಳದಿಂದ ಸ್ಥಳಕ್ಕೆ ಹಾಲಿನ ಉತ್ಪಾದನಾ ವೆಚ್ಚ ಮತ್ತು ಒಕ್ಕೂಟದಿಂದ ಒಕ್ಕೂಟಕ್ಕೆ ಖರೀದಿ ದರ ಬದಲಾಗುವುದರಿಂದ, ಹಾಲಿನ ಉತ್ಪಾದನಾ ವೆಚ್ಚ ಮತ್ತು ಖರೀದಿ ದರ ಸಂಬಂಧಿತ ದತ್ತಾಂಶವನ್ನು ಉಪಯೋಗಿಸಿ ಒಕ್ಕೂಟ/ ಜಿಲ್ಲೆಗೆ ನಿಶ್ಚಿತವಾದ ಪ್ರೋತ್ಸಾಹಧನದ ಮೊತ್ತವನ್ನು ಸಲಹೆ ಮಾಡಲು ಬಳಸಬಹುದು ಎಂದು ಸಮಿತಿಯು ಸಲಹೆಯನ್ನು ನೀಡಿರುತ್ತದೆ. ಈ ಸಲಹೆಗೆ ಪ್ರತಿಕ್ರಿಯೆಯಾಗಿ ಜಿಲ್ಲಾ ಹಾಲು ಒಕ್ಕೂಟಗಳಿಂದ ಇತ್ತೀಚಿನ ಅಗತ್ಯ ದತ್ತಾಂಶವನ್ನು ಅಧ್ಯಯನಕ್ಕೆ ಪಡೆಯಲಾಯಿತು. ವಿವರಗಳನ್ನು ಕೋಷ್ಟಕ-೮ರಲ್ಲಿ ನೀಡಿದೆ.

**ಕೋಷ್ಟಕ 8: 2015-16ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಲೀಟರ್ ಹಾಲಿನ ಉತ್ಪಾದನಾ ವೆಚ್ಚ ಮತ್ತು ಖರೀದಿ ದರ**

| ಕ್ರ.ಸಂ. | 2015-16 | ಉತ್ಪಾದನಾ ವೆಚ್ಚ (ರೂ.) | ಖರೀದಿ ದರ (ರೂ.) | ವ್ಯತ್ಯಾಸ |
|---|---|---|---|---|
| 1 | ದಕ್ಷಿಣ ಕನ್ನಡ | 23.00 | **27.37** | 4.37 |
| 2 | ಕಲಬುರಗಿ | 23.21 | 24.70 | 1.49 |
| 3 | ಬಳ್ಳಾರಿ | 17.10 | 24.45 | 7.35 |
| 4 | ಮಂಡ್ಯ | 17.14 | 23.81 | 6.67 |
| 5 | ಶಿವಮೊಗ್ಗ | 21.00 | 22.71 | 1.71 |
| 6 | ಕೋಲಾರ | 17.54 | 22.65 | 5.11 |
| 7 | ಧಾರವಾಡ | 10.22 | 22.25 | 12.03 |
| 8 | ಬೆಂಗಳೂರು | 18.28 | 22.16 | 3.88 |
| 9 | ವಿಜಯಪುರ | 9.11 | 21.50 | 12.39 |
| 10 | ಮೈಸೂರು | 19.13 | 21.00 | 1.87 |
| 11 | ಬೆಳಗಾವಿ | 12.36 | 20.60 | 8.24 |
| 12 | ತುಮಕೂರು | 20.00 | 19.71 | **-0.29** |
| 13 | ಹಾಸನ | 26.18 | 21.00 | -5.18 |
| 14 | ಚಾಮರಾಜನಗರ | 17.63 | 21.00 | 2.37 |

ಮುಂದುವರಿದು, ಹೈನು ಆರ್ಥಿಕತೆಯನ್ನು ಲೆಕ್ಕಾಚಾರ ಮಾಡಲು ಬಳಸುವ ವಿಧಾನವನ್ನು ಪರಿಶೀಲಿಸಲು, 14 ವ್ಯವಸ್ಥಾಪಕ ನಿರ್ದೇಶಕರುಗಳಿಂದ ಮತ್ತು ಕ್ಷೇತ್ರ ಮಟ್ಟದ ಪಶುವೈದ್ಯರಿಂದ ಸ್ವೀಕೃತವಾದ ಅಂದಾಜುಗಳನ್ನು ಅಭ್ಯಸಿಸಲಾಯಿತು. ಉತ್ಪಾದನಾ ವೆಚ್ಚದ ಎಲ್ಲಾ ನಿಯತಾಂಕಗಳು ಮತ್ತು ಉತ್ಪಾದಕನಿಗೆ ಇಂತಿಷ್ಟು ಲಾಭವಿರಬೇಕೆಂಬ ಅಂಶವನ್ನು ಗಣನೆಗೆ ತೆಗೆದುಕೊಡು  ಯಾರೊಬ್ಬರೂ ಸಮಾನ ವಿನ್ಯಾಸ ಇಲ್ಲವೆ ವಿಧಾನವನ್ನು ಅನುಸರಿಸದಿರುವುದು ಅಧ್ಯಯನವು ತೋರಿಸಿಕೊಟ್ಟಿದೆ. ಲೆಕ್ಕಾಚಾರಕ್ಕೆ ಗಣನೆಗೆ ತೆಗೆದುಕೊಂಡಿರುವ ದತ್ತಾಂಶವು ಗೊಂದಲಮಯ ಮತ್ತು ಅವೈಜ್ಞಾನಿಕವೆಂದು ಕಂಡುಬರುತ್ತಿದೆ.

ಆದಕಾರಣ, ಜಿಲ್ಲಾ ಹಾಲು ಒಕ್ಕೂಟಗಳು ಉತ್ಪಾದನಾ ವೆಚ್ಚ ಮತ್ತು ರೈತರಿಗೆ ವೈಚಾರಿಕ ಲಾಭವನ್ನು ಒಳಗೊಂಡು ಖರೀದಿ ದರವನ್ನು ಲೆಕ್ಕಾಚಾರ ಮಾಡಲು ಸಾಮಾನ್ಯ ವಿಧಾನವನ್ನು ಅನುಸರಿಸದಿರಬಹುದು ಎಂದು ಭಾವಿಸಲಾಗಿದೆ. ಅದಕ್ಕೆ ಕೂಡಿಕೆಯಾಗಿ, ಒಕ್ಕೂಟದ ಆರ್ಥಿಕ ಸ್ಥಿತಿ/ಸನ್ನಿವೇಶವನ್ನು ಮುಖ್ಯವಾಗಿ ಆಧರಿಸಿ ಖರೀದಿ ದರವನ್ನು ಕಂಡುಹಿಡಿದಿದ್ದಾರೆ. ಆದ್ದರಿಂದ, ಈಗಿರುವ ದತ್ತಾಂಶವು ಸಾಲದಿರುವ ಮತ್ತು ಅವೈಜ್ಞಾನಿಕವಾಗಿರುವುದರಿಂದ ನಿಶ್ಚಿತ ಬದಲಾಗುವ ಪ್ರೋತ್ಸಾಹಧನದ ಮೊತ್ತವನ್ನು ನೀಡಲು ಸಲಹೆ ಮಾಡಲಾಗದೆಂದು ಅಭಿಪ್ರಾಯಿಸಲಾಗಿದೆ. ಆದಾಗ್ಯೂ, 'ಗುಜರಾತ್ ರಾಜ್ಯದ ಆನಂದ್‌ನಲ್ಲಿ ಹಾಲಿನ ಉತ್ಪಾದನಾ ವೆಚ್ಚವನ್ನು ಶೋಧಿಸುವುದು ಮತ್ತು ಹೈನು ಸಹಕಾರಿ ವಲಯದ ಸಂಭವನೀಯ ಆರ್ಥಿಕತೆಗಳು' ಕುರಿತ ವಾರ್ಟನ್ ಸಂಶೋಧನಾ ಸ್ಕಾಲರ್ಸ್, ವಾರ್ಟನ್ ಸ್ಕೂಲ್, ಪೆನಿಸಿಲ್ವೇನಿಯಾ, ಈ ಅಧ್ಯಯನ ಲೇಖನದ ಸಾರಾಂಶವನ್ನು ಅನುಬಂಧ, 8ರಲ್ಲಿ ಉಲ್ಲೇಖಕ್ಕಾಗಿ ನೀಡಲಾಗಿದೆ.

ಭಾರತ ಸರ್ಕಾರದ ಪಶು ಪಾಲನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯು "ಹಾಲಿನ ಉತ್ಪಾದನೆಯಲ್ಲಿ ವೆಚ್ಚ ಮತ್ತು ಆದಾಯಗಳು : ವಿವಿಧ ಉತ್ಪಾದನಾ ಪದ್ಧತಿಗಳಿಗೆ ಪ್ರಮಾಣಬದ್ಧ ವಿಧಾನ ಮತ್ತು ಅಂದಾಜುಗಳನ್ನು ಅಭಿವೃದ್ಧಿಪಡಿಸುವುದು 2015" ಈ ಕುರಿತು ಅಧ್ಯಯನವನ್ನು ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ, ಕರ್ನಾಲ್, ಹರಿಯಾಣ ರಾಜ್ಯ,ಇವರಿಗೆ ವಹಿಸಿತ್ತೆಂದು ಖಚಿತಪಡಿಸಿಕೊಳ್ಳಲಾಗಿದೆ. ಇದೇ ರೀತಿ, ಗ್ರಾಮೀಣ ಕರ್ನಾಟಕದಲ್ಲಿ ಉತ್ಪಾದನೆಯಾದ ಹಾಲಿನ ಉತ್ಪಾದನಾ ವೆಚ್ಚ ಮತ್ತು ಖರೀದಿ ದರ ಲೆಕ್ಕಾಚಾರ ಮಾಡಲು ಪ್ರಮಾಣಬದ್ಧ ವಿಧಾನವನ್ನು ಕುರಿತು ಇಂತಹುದೇ ಅಧ್ಯಯನವನ್ನು ನಡೆಸಿಕೊಡುವಂತೆ ಭಾರತ ಸರ್ಕಾರದ ಪಶು ಪಾಲನೆ, ಹೈನುಗಾರಿಕೆ ಮತ್ತು

ಮೀನುಗಾರಿಕೆ ಇಲಾಖೆಯನ್ನು ರಾಜ್ಯ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಸಹ ಕೋರಬಹುದಾಗಿರುತ್ತದೆ. ಒಮ್ಮೆ ಈ ಶಿಫಾರಸ್ಸಾದರೆ, ವಿವಿಧ ಋತುಮಾನಗಳಲ್ಲಿ ಆಗುವ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡು ಚಳಗಾಲ, ಮಳೆಗಾಲ ಮತ್ತು ಬೇಸಿಗೆಯಲ್ಲಿ ಹಾಲಿನ ಖರೀದಿ ದರವನ್ನು ನಿಗದಿಪಡಿಸುವ ಬಗ್ಗೆ ರಾಜ್ಯದ ಹಾಲು ಒಕ್ಕೂಟಗಳಿಗೆ ತಿಳಿಹೇಳಲು ಉಪಯೋಗಿಸಿಕೊಳ್ಳಬಹುದು. ಇನ್ನೊಂದು ಆಯ್ಕೆ ಎಂದರೆ, ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ರಾಜ್ಯ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ರಾಜ್ಯದ ಯಾವುದೇ ಅನುಭವಿ ಸಂಸ್ಥೆಗೆ ಇಂತಹ ಅಧ್ಯಯನವನ್ನು ಅಗತ್ಯವಾದ ಆರ್ಥಿಕ ಸಹಾಯ ನೀಡಿ ವಹಿಸಿಕೊಡಬಹುದಾಗಿದೆ.

ಆದಾಗ್ಯೂ, ಅಧ್ಯಯನ ತಂಡವು ಸವಿವರ ಚರ್ಚೆಯ ನಂತರ, ಹಾಲಿ ಇರುವ ಪ್ರೋತ್ಸಾಹಧನ ದರವನ್ನು ರೂ.4.00ರಿಂದ ರೂ.6.00ಕ್ಕೆ ಪರಿಷ್ಕರಿಸಿದೆಯೆಂದು ಊಹಿಸಿಕೊಂಡು, ನಾಲ್ಕು ನಿಯತಾಂಕಗಳನ್ನು ಗಣನೆಗೆ ತೆಗೆದುಕೊಂಡು ಜಿಲ್ಲೆಗಳ ಅಭಿವೃದ್ಧಿಯ ಅಗತ್ಯತೆಯನ್ನು ಆಧರಿಸಿ ಬದಲಾಗುವ ಪ್ರೋತ್ಸಾಹಧನ ದರವನ್ನು ಸಮಾನತೆಯನ್ನು ತರುವ ದೃಷ್ಟಿಯಿಂದ ಸುರಕ್ಷಿತವಾಗಿ ಅಳವಡಿಸಿಕೊಳ್ಳಬಹುದಾದ **ಮಾದರಿ ಅಂಕ ಪಟ್ಟಿ ವಿಧಾನವನ್ನು** ಪ್ರಸ್ತಾಪಿಸಿದೆ. ವಿವರಗಳನ್ನು ಅನುಬಂಧ 9ರಲ್ಲಿ ನೀಡಿದೆ.

### 9.3.5 ಪ್ರೋತ್ಸಾಹಧನದ ಮೊತ್ತವನ್ನು ಬದಲಾಯಿಸಬೇಕೆ? ಹಾಗಿದ್ದರೆ ಎಷ್ಟಿರಬೇಕು?

ಕ್ಷೇತ್ರ ಮಾಹಿತಿಯ ವಿಶ್ಲೇಷಣೆಯು ಬಹುತೇಕ (ಶೇ.79.2) ಪಾಲುದಾರರು ಹಾಲಿ ನೀಡುತ್ತಿರುವ ಪ್ರೋತ್ಸಾಹಧನವು ಕಡಿಮೆಯೆಂದು ವರದಿಸಿದ್ದಾರೆಂದು ತಿಳಿಸಿದೆ. ಮುಂದುವರಿದು, ಬಹಳಷ್ಟು (ಶೇ.89.5) ರೈತರು ಹಾಲಿ ಇರುವ ದರವನ್ನು ಪರಿಷ್ಕರಿಸಬೇಕು ಇಲ್ಲವೆ ಬದಲಾಯಿಸಬೇಕೆಂದು ವರದಿಸಿರುತ್ತಾರೆ. ಶೇ.25ರಷ್ಟು ರೈತರು ಖರೀದಿಸಿದ ಹಾಲಿಗೆ ರೂ.6.00 ಮತ್ತು ಸುಮಾರು ಶೇ.30ರಷ್ಟು ರೂ.8.00 ಬೇಕೆಂದಿದ್ದಾರೆ. ಇತರರು ರೂ.8.00 ಕ್ಕೂ ಹೆಚ್ಚು ಬೇಕೆಂದಿದ್ದಾರೆ.

ಇನ್ನೂ ಹೆಚ್ಚಾಗಿ, ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಮತ್ತು ಸದಸ್ಯ ರೈತರೊಂದಿಗೆ ಚರ್ಚಿಸುವಾಗ ಆಹಾರದ ದರ ಮತ್ತು ಹೈನುಗಾರಿಕೆಯ ನಿರ್ವಹಣಾ ವೆಚ್ಚದ ಏರಿಕೆಯು ರೈತರ ಪ್ರಯತ್ನಗಳನ್ನು ವಿಫಲಗೊಳಿಸುತ್ತಿರುವುದು ಕಂಡುಬಂದಿರುತ್ತದೆ. ಹಾಜರಿದ್ದ ಎಲ್ಲಾ ರೈತರು, ಇದನ್ನು ಈಗಿರುವ ಹಾಲಿನ ಖರೀದಿ ದರದೊಂದಿಗೆ ವಿಲೀನ ಗೊಳಿಸಬಹುದು ಮತ್ತು ಹಾಲಿನ ಉತ್ಪಾದನಾ ವೆಚ್ಚಕ್ಕೆ ಸಮನಾಗಿ ಪ್ರತಿ ಲೀಟರ್ ಹಾಲಿಗೆ ಖರೀದಿ ದರವು ರೂ.28ಕ್ಕಿಂತ ಕಡಿಮೆ ಇರಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅವರ ದೃಷ್ಠಿಯಲ್ಲಿ, ರೂ.28.00 ಕ್ಕೆ ಮೀರಿ ನೀಡಿದಾಗ ಹೈನುಗಾರಿಕೆಯು ಅವರಿಗೆ ಲಾಭದಾಯಕವಾಗುತ್ತದೆ.

ಮುಂದುವರಿದ ಚರ್ಚೆಯಲ್ಲಿ, ಹಾಲು ಪ್ರೋತ್ಸಾಹಧನ ಯೋಜನೆಯು ರೈತರು ನಿರ್ವಹಣೆಯ ಗುಣಮಟ್ಟದಲ್ಲಿ ಸುಧಾರಣೆ ಮಾಡಿಕೊಂಡು ಹಾಲಿನ ಉತ್ಪಾದನೆಯನ್ನು ಹೆಚ್ಚಿಸಿ ಮತ್ತು ತಮ್ಮ ಸಾಮಾಜಿಕ – ಆರ್ಥಿಕ ಮಟ್ಟವನ್ನು ಸ್ವಲ್ಪಮಟ್ಟಿಗೆ ಸುಧಾರಿಸಿಕೊಂಡು ಹೈನುಗಾರಿಕೆಯನ್ನು ಮುಂದುವರಿಸಲು ಪ್ರೇರೇಪಣೆ ನೀಡಿತೆಂದು ವ್ಯಕ್ತವಾಗಿರುತ್ತದೆ. ಜೀವನೋಪಾಯಕ್ಕಾಗಿ ನಗರಗಳಿಗೆ ಯುವಕರು ವಲಸೆ ಹೋಗುವುದನ್ನು ತಡೆಯಲು ಯೋಜನೆಯ ಪ್ರಭಾವವು ಕನಿಷ್ಠವಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ವರ್ಷಪೂರ್ತಿ ನಿರಂತರ ಆದಾಯ ತರುವುದರಿಂದ ಸಂಕಷ್ಟದ ಪರಿಸ್ಥಿತಿಗಳಲ್ಲಿ ಭರವಸೆಯ ಕಿರಣವಾಗಿ ಹೈನುಗಾರಿಕೆಯು ಸಮೃದ್ಧವಾಗಿದೆ. ಸಬಲ ಮತ್ತು ಸುಸ್ಥಿರ ಗ್ರಾಮೀಣ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಲು ಹೈನುಗಾರಿಕೆ ಚಟುವಟಿಕೆಯು ಎದ್ದು ಕಾಣುವ ಬೆಳ್ಳಿ ರೇಖೆ ಎಂಬ ರೈತರ ಅಭಿಪ್ರಾಯವನ್ನು ಅಧ್ಯಯನದ ಶೋಧಗಳು ಸ್ಥಿರೀಕರಿಸಿವೆ. ಆದ್ದರಿಂದ, ಸರ್ಕಾರವು ನೀಡುತ್ತಿರುವ ಪ್ರೋತ್ಸಾಹಧನದ ಹಾಲಿನ ದರವನ್ನು

ರೂ.4.00 ರಿಂದ ರೂ.6.00ಕ್ಕೆ ಪರಿಷ್ಕರಣೆಗೊಳಿಸಿ ವಾಸ್ತವಿಕ ನಿಯತಾಂಕಗಳ ಆಧಾರದಲ್ಲಿ, ಉತ್ಪಾದನಾ ವೆಚ್ಚ ಮತ್ತು ಖರೀದಿ ದರ, ಉತ್ಪಾದಕ ರಾಸುಗಳ ಸಂಖ್ಯೆ ಮತ್ತು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಗಣನೆಗೆ ತೆಗೆದುಕೊಂಡು, ಜಿಲ್ಲಾ / ಒಕ್ಕೂಟವಾರು ಬದಲಾಗುವ ದರವನ್ನು ಪರಿಗಣಿಸಬಹುದು.

**೯.೩.೬ ಪ್ರೋತ್ಸಾಹಧನ ವಿತರಣೆ ಪದ್ಧತಿ ಕಾರ್ಯಸಾಧಕವಾಗಿದೆಯೇ ಮತ್ತು ತೊಡಕುಗಳಿಂದ ಹೊರತಾಗಿದೆಯೇ. ಹಾಗಿಲ್ಲದಿದ್ದರೆ, ಪಾವತಿಯ ಬಗ್ಗೆ ಯಾವ ಸಲಹೆಗಳನ್ನು ನೀಡಲಾಗಿದೆ? ವಿದ್ಯುನ್ಮಾನ ತೀರುವಳಿ ಪದ್ಧತಿ ಮೂಲಕ ಪ್ರೋತ್ಸಾಹಧನವನ್ನು ಹಾಲನ್ನು ಪೂರೈಸುವ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವುದು ಯೋಜನೆಯ ಉದ್ದೇಶ ಮತ್ತು ಹಾಲು ಪೂರೈಸುವವರ ಆಸಕ್ತಿಯಾಗಿದೆಯೇ?**

೨೦೦೮ರಿಂದ ೨೦೧೩ರ ಅಧ್ಯಯನ ಅವಧಿಯ ಶೋಧಗಳು ಪ್ರೋತ್ಸಾಹಧನದ ಮೊತ್ತವು ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಹಾಲನ್ನು ಪೂರ್ಯಸಿದ ೩–೬ ತಿಂಗಳುಗಳ ಅಂತರದಲ್ಲಿ ರೈತರಿಗೆ ತಲುಪುತ್ತಿತ್ತು ಎಂದು ತೋರಿಸಿವೆ. ಹಣವನ್ನು ಸಂಘದ ಹಂತದಲ್ಲಿ ಸ್ವೀಕೃತಿ ವಹಿಯಾಧಾರದಲ್ಲಿ ಪಾವತಿಸಲಾಗುತ್ತಿತ್ತು. ಕೇವಲ ಕೆಲವೇ ಅಸಹಜ ಕ್ಲೇಮುಗಳು ವರದಿಯಾಗಿದ್ದವು. ಆದಾಗ್ಯೂ, ಹಾಲಿ ಇರುವ ಪ್ರೋತ್ಸಾಹಧನದ ಹಣ ವಿತರಣಾ ವ್ಯವಸ್ಥೆಯಲ್ಲಿ ಜಿಲ್ಲಾ ಹಾಲು ಒಕ್ಕೂಟದಿಂದ ಮೊತ್ತವನ್ನು ರೈತರ ಖಾತೆಗೆ ವಿದ್ಯುನ್ಮಾನ ತೀರುವಳಿ ಪದ್ಧತಿಯ ಮೂಲಕ ಹೊಂದಾಣಿಕೆ /ವರ್ಗಾವಣೆ ಮಾಡುತ್ತಿರುವುದು ಯೋಜನೆಯ ಧ್ಯೇಯೋದ್ದೇಶಗಳು ಮತ್ತು ಹಾಲು ಪೂರೈಕೆದಾರರ ಹಿತಾಸಕ್ತಿಯಿಂದ ಆಗಿರುತ್ತದೆ. ಪ್ರೋತ್ಸಾಹಧನ ಮೊತ್ತಕ್ಕೆ ಸಂಬಂಧಿಸಿದಂತೆ ಬಿಲ್ಲುಗಳಲ್ಲಿ ಕ್ಲೇಮುಗಳ ಸಮಂಜಸತೆ ಮತ್ತು ಅನಧಿಕೃತ ಕ್ಲೇಮುಗಳ ಬಗ್ಗೆ ಜಿಲ್ಲಾ ಹಾಲು ಒಕ್ಕೂಟಗಳು ಸರಳ ವಿಧಾನವನ್ನು ಅನುಸರಿಸುತ್ತಿವೆ.

ಹಾಲು ಒಕ್ಕೂಟದ ಹಂತದಲ್ಲಿ ಕ್ಲೇಮು ಮಾಡಲಾದ ಪ್ರೋತ್ಸಾಹಧನದ ಮೊತ್ತ ಮತ್ತು ಸ್ವೀಕೃತವಾದ ಹಾಲಿನ ಪ್ರಮಾಣವನ್ನು ತಾಳೆ ಮಾಡಲಾಗುತ್ತಿದೆ. ಕ್ಲೇಮು ಮಾಡಲಾದ ಮೊತ್ತವು ಖರೀದಿಸಿದ ಹಾಲಿನ ಪ್ರಮಾಣಕ್ಕೆ ತಾಳೆಯಾದರೆ ಆ ಬಿಲ್ಲನ್ನು ಒಪ್ಪಿಕೊಂಡು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಅನುದಾನ ಬಿಡುಗಡೆಗಾಗಿ ಸಲ್ಲಿಸಲಾಗುತ್ತಿದೆ. ಈ ಕ್ರಮವು ಕಪಟ ಕ್ಲೇಮುಗಳನ್ನು ಹೊರತುಪಡಿಸುತ್ತದೆ. ಇದಕ್ಕೆ ಕೂಡಿಕೆಯಾಗಿ, ಸರ್ಕಾರದಿಂದ ಸಕಾಲಿಕ ಮತ್ತು ಸಾಕಷ್ಟು ಅನದಾನದ ಬಿಡುಗಡೆಯ ಖಾತರಿ ಬೇಕಾಗಿದೆ.

ರೈತರಿಗೆ ಪ್ರೋತ್ಸಾಹಧನದ ಮೊತ್ತವು ತಲುಪುವುದರಲ್ಲಿನ ವಿಳಂಬವನ್ನು ತಪ್ಪಿಸಲು ಹಾಲಿ ಇರುವ ವಿತರಣಾ ವ್ಯವಸೆಯು ಅಷ್ಟೊಂದು ಸಮರ್ಥವಾಗಿಲ್ಲ. ಪದ್ಧತಿಯೂ ಸಹ ಸಂಕೀರ್ಣವಾಗಿದ್ದು ಬೇನಾಮಿ ಕ್ಲೇಮುಗಳಿಗೆ ಸಾಧ್ಯವಿದೆ. ಇದಕ್ಕೆ ಸೇರಿಕೆಯಾಗಿ ಎಲ್ಲಾ ಹಂತಗಳಲ್ಲಿಯೂ ಇರುವ ಸಿಬ್ಬಂದಿಯ ಮೇಲೆ ಹೆಚ್ಚುವರಿ ಕೆಲಸದ ಒತ್ತಡ ಬೀಳುತ್ತಿದೆ. ಆದ್ದರಿಂದ ತೊಡಕುಗಳನ್ನು ನಿವಾರಿಸಲು ಉಪಯೋಗಿಸುವುವರ ರೂಢಿತ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆ ಇದೆ ಮತ್ತು ಸಮರ್ಪಿತ ಜಾಲದಲ್ಲಿ ಅಳವಡಿಸಬೇಕಾಗಿದೆ. ಇನ್ನು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಯೋಜನೆಯ ನಿಗಾವಣೆ ಮತ್ತು ಸರ್ವೇಕ್ಷಣೆಗಾಗಿ ಅನನ್ಯ ಶಾಖೆಯನ್ನು ಹೊಂದಬೇಕು. ಆದಾಗ್ಯೂ, ಇಲಾಖೆಯ ಹಿರಿಯ ಅಧಿಕಾರಿಗಳು ಜಿಲ್ಲಾ ಹಾಲು ಒಕ್ಕೂಟಗಳ ಹಂತದಲ್ಲಿ ತನಿಖೆ, ಪರಿಶೀಲನೆ ಮತ್ತು ಸರಿದೂಗಿಸುವ ಕಾರ್ಯವನ್ನು ನಿಯತಕಾಲಿಕವಾಗಿ ಕೈಗೊಳ್ಳುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಜಿಲ್ಲಾ, ತಾಲೂಕಾ ಮಟ್ಟದ ಸಮಿತಿಗಳು ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಗತಿಯನ್ನು ಪರಿಶೀಲಿಸುತ್ತಿವೆ. ರಾಜ್ಯ ಮಟ್ಟದಲ್ಲಿ ಪಶು ಪಾಲನೆ ಮತ್ತು ಮೀನುಗಾರಿಕೆ ಇಲಾಖಾ ಕಾರ್ಯದರ್ಶಿಗಳು ರಾಜ್ಯ ಮಟ್ಟದಲ್ಲಿ ಪ್ರಗತಿಯನ್ನು ವೀಡಿಯೊಕಾನ್ಫರೆನ್ಸ್ ಮೂಲಕ ಪರಿಶೀಲಿಸಿದ್ದಾರೆ. ಆದಾಗ್ಯೂ, ವಿವಿಧ ಹಂತಗಳಲ್ಲಿ ರಚನೆಯಾಗಿರುವ ಸಮಿತಿಗಳು ಯೋಜನೆಯ ನಿಗಾವಣೆ ಮತ್ತು ಪರಿಶೀಲನೆಯನ್ನು ನಿಯತವಾಗಿ ಕೈಗೊಳ್ಳಬೇಕು.

ಈ ಸಂಬಂಧದಲ್ಲಿ, ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆಯುಕ್ತಾಲಯದ ಜಾಗೃತ ಶಾಖೆಯ ನೇರ ಮೇಲ್ವಿಚಾರಣೆಯಲ್ಲಿ ನಿಗಾವಣೆ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲಾತಿ ಕೋಶವನ್ನು ಸ್ಥಾಪಿಸಬೇಕು.ತರಬೇತಾದ ಅಧಿಕಾರಿಗಳ ತಂಡವಿರುವ ಈ ಶಾಖೆಯು ಕ್ರಿಯಾತ್ಮಕವಾಗಿ ಯೋಜನೆಯ ಸಮಕಾಲೀನ ನಿಗಾವಣೆಯನ್ನು ಕೈಗೊಳ್ಳುವುದು. ಈ ವ್ಯವಸ್ಥೆಯು ಫಲಾನುಭವಿಗಳಿಗೆ ಸಹಾಯ ಮಾಡುತ್ತದೆ.

## ಭಾಗ 10: ಪ್ರತಿಕ್ಷೇಪ / ಪರ್ಯಾಲೋಚನೆ ಮತ್ತು ತೀರ್ಮಾನಗಳು

### 10.1 ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ 23 ಹಿರಿಯ ಅಧಿಕಾರಿಗಳು ಮತ್ತು 48 ಪಶುವೈದ್ಯರು ನೀಡಿದ ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ಅನುಭವಾಧಾರಿತ ಅಭಿಪ್ರಾಯಗಳು ಮತ್ತು ಸಲಹೆಗಳು

1. ರೈತರಿಗೆ ಹಾಲು ಪ್ರೋತ್ಸಾಹಧನದ ಮೊತ್ತವನ್ನು ಹಾಲಿನ ಬಾಬತ್ತನ್ನು ಪಾವತಿಸುವಾಗಲೇ ಜೊತೆಯಾಗಿ ಪಾವತಿಸಬೇಕು.
2. ರೈತರಿಗೆ ಹಾಲು ಪ್ರೋತ್ಸಾಹಧನದ ಮೊತ್ತ ಪಾವತಿಸುತ್ತಿರುವುದು ಒಳ್ಳೆಯದು. ಆದರೆ, ಇದನ್ನು ಕನಿಷ್ಠ ವಿಳಂಬದೊಡನೆ ಯಾವುದೇ ಕಡಿತಗಳಿಲ್ಲದೆ ಸಂಪೂರ್ಣವಾಗಿ ಪಾವತಿಸಬೇಕು.

3. ಹಾಲಿನ ಉತ್ಪಾದನಾ ವೆಚ್ಚ ಮತ್ತು ಖರೀದಿ ದರವನ್ನು ಆಧರಿಸಿ ಪ್ರೋತ್ಸಾಹಧನದ ದರವನ್ನು ಪರಿಷ್ಕರಿಸಬೇಕು
4. ಎಮ್ಮೆಗಳ ನಿರ್ವಹಣಾ ವೆಚ್ಚ ಅಧಿಕವಾದ್ದರಿಂದ ಹೆಚ್ಚಿನ ದರದಲ್ಲಿ ಪ್ರೋತ್ಸಾಹಧನವನ್ನು ನೀಡಬೇಕು.
5. ಪ್ರೋತ್ಸಾಹಧನದ ಮೊತ್ತವನ್ನು ಈಗ ರೂಢಿಯಲ್ಲಿರುವ ವಿದ್ಯುನ್ಮಾನ ತೀರುವಳಿ ಪದ್ಧತಿಯಲ್ಲಿ ಪಾವತಿಸುತ್ತಿರುವುದನ್ನು ಮುಂದುವರಿಸಬೇಕು.
6. ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳನ್ನು ಸುಧಾರಿಸಬೇಕು ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹೆಚ್ಚಿನ ಮಾನವ ಸಂಪನ್ಮೂಲವನ್ನು ಒದಗಿಸಬೇಕು.
7. ಪ್ರೋತ್ಸಾಹಧನದ ಮೊತ್ತದ ಬಳಕೆಯನ್ನು ಪರಿಶೀಲಿಸಲು ಸರ್ಕಾರಿ ಸಿಬ್ಬಂದಿ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿಯು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಭೇಟಿ ನೀಡಬೇಕು.
8. ಹಾಲು ಪ್ರೋತ್ಸಾಹಧನ ಯೋಜನೆಯನ್ನು ಸಮರ್ಥವಾಗಿ ನಿರ್ವಹಿಸಲು ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಗೆ ತರಬೇತಿ ನೀಡಬೇಕು

### 10.2 ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನ ಕಾರ್ಯದ ಬಗ್ಗೆ ಸುಧಾರಣೆ ಕುರಿತು ತಮ್ಮ ಅನುಭವದ ಆಧಾರದಲ್ಲಿ ಎಲ್ಲಾ ಜಿಲ್ಲಾ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳ ಅಭಿಪ್ರಾಯಗಳು ಮತ್ತು ಸಲಹೆಗಳು

**ಪ್ರೋತ್ಸಾಹಧನದ ಮೊತ್ತ: ರೈತರ ಕೈ ಸೇರಲು ತೆಗೆದುಕೊಂಡ ಸಮಯ**

- ಪ್ರಸ್ತುತದಲ್ಲಿ ಪ್ರೋತ್ಸಾಹಧನದ ಮೊತ್ತದ ಮೊತ್ತವು ರೈತರಿಗೆ ವಿಳಂಬವಾಗಿ ತಲುಪುತ್ತಿದೆ. ಆದ್ದರಿಂದ, ವಾರಕ್ಕೊಮ್ಮೆ ಹಾಲಿನ ಬಾಬತ್ತಿನೊಂದಿಗೆ ಪ್ರೋತ್ಸಾಹಧನದ ಮೊತ್ತವನ್ನು ಪಾವತಿಸುವುದು ಉತ್ತಮ. ಈ ಪದ್ಧತಿಯು ಪಾರದರ್ಶಕತೆ ಮತ್ತು ರೈತರಲ್ಲಿ ಆತ್ಮ ವಿಶ್ವಾಸವನ್ನು ಖಾತರಿಪಡಿಸುತ್ತದೆ.
- ಪ್ರಸ್ತುತ ಇರುವ ನೇರವಾಗಿ ಪ್ರೋತ್ಸಾಹಧನದ ಮೊತ್ತವನ್ನು ರೈತರಿಗೆ ನೇರವಾಗಿ ವರ್ಗಾಯಿಸುವ ವಿದ್ಯುನ್ಮಾನ ತೀರುವಳಿ ಪದ್ಧತಿಯು ಸಮರ್ಥ ಹಾಗೂ ಪಾರದರ್ಶಕವಾಗಿದೆ ಮತ್ತು ಇದನ್ನು ಮುಂದುವರಿಸಬೇಕು.

**ಪ್ರೋತ್ಸಾಹಧನದ ದರವನ್ನು ಪರಿಷ್ಕರಿಸುವುದು: ಕಾರಣಗಳು**

- ಪ್ರೋತ್ಸಾಹಧನದ ದರವನ್ನು ಪ್ರತಿ ಲೀಟರ್ ಹಾಲಿಗೆ ರೂ.6.00ಕ್ಕೆ ಪರಿಷ್ಕರಿಸಬೇಕಾಗಿದೆ. ಉತ್ಪಾದನಾ ವೆಚ್ಚ, ಹೈನು ರಾಸುವಿನ ಬೆಲೆ ಮತ್ತು ಪಶು ಆಹಾರ ಹಾಗೂ ಚಿಕಿತ್ಸೆ ವೆಚ್ಚ ಇವು ಏರಿಕೆಯಾಗಿರುವುದರಿಂದ ಪರಿಷ್ಕರಣೆ ಬೇಕಾಗಿದೆ.
- ಬೆಳಗಾವಿ ಹಾಲು ಒಕ್ಕೂಟವು ಮಹಾರಾಷ್ಟ್ರ ಗಡಿಗೆ ತುಂಬಾ ಹತ್ತಿರದಲ್ಲಿದೆ. ಹಾಲಿನ ಸಂಗ್ರಹಣೆ ಮತ್ತು ಮಾರಾಟದಲ್ಲಿ ತುಂಬಾ ಸ್ಪರ್ಧೆಯನ್ನು ಕಾಣಲಾಗಿದೆ. ಆದ್ದರಿಂದ, ರೈತರನ್ನು ಉತ್ತೇಜಿಸಲು ಮತ್ತು ಏರಿಕೆಯಾಗಿರುವ ಹೈನು ರಾಸುಗಳ ನಿರ್ವಹಣಾ ವೆಚ್ಚಕ್ಕೆ ಪರಿಹಾರವಾಗಿ ಪ್ರತಿ ಲೀಟರ್ ಹಾಲಿಗೆ ರೂ.6.00 ಪ್ರೋತ್ಸಾಹಧನ ಬೇಕಾಗಿರುತ್ತದೆ. ಮುಂದುವರಿದು, ಎಮ್ಮೆಗಳ ನಿರ್ವಹಣಾ ವೆಚ್ಚವು ಹಸುಗಳ ಪಾಲನೆಗಿಂತ ಹೆಚ್ಚಾಗಿದೆ.

**ಗ್ರಾಮೀಣ ಪ್ರದೇಶಗಳಲ್ಲಿ ಹಾಲಿನ ಉತ್ಪಾದನಾ ವೆಚ್ಚ ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಂದ ಹಾಲಿನ ಖರೀದಿ ದರ ಕುರಿತು**

- ಗ್ರಾಮೀಣ ಪ್ರದೇಶಗಳಲ್ಲಿ ಹಾಲಿನ ಉತ್ಪಾದನಾ ವೆಚ್ಚ ಮತ್ತು ಖರೀದಿ ದರವನ್ನು ಲೆಕ್ಕ ಹಾಕಲು ಮಾದರಿ ವಿಧಾನವನ್ನು ಒದಗಿಸಲು ಸರ್ಕಾರದ ಮಟ್ಟದಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸುವ ಅವಶ್ಯಕತೆಯಿದೆ. ಅದರ ಆಧಾರದಲ್ಲಿ ಎಲ್ಲಾ ಹಾಲು ಒಕ್ಕೂಟಗಳು ಸಾಮಾನ್ಯ ವಿಧಾನವಾಗಿ ಅನುಸರಿಸಹುದು ಮತ್ತು ಹಾಲಿನ ಖರೀದಿ ದರವನ್ನು ನಿರ್ಧರಿಸಬಹುದು.
- ರೈತರ ಹಿತಾಸಕ್ತಿಯಿಂದ, ಹಾಲಿನ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಒಕ್ಕೂಟಗಳು ಆಹಾರ ಮತ್ತು ಹಸಿರು ಮೇವಿನ ಬೀಜಗಳನ್ನು ತಾಂತ್ರಿಕ ಬೆಂಬಲದೊಂದಿಗೆ ರಿಯಾಯತಿ ದರಗಳಲ್ಲಿ ನೀಡಬಹುದು.

**ಹಾಲು ಪ್ರೋತ್ಸಾಹಧನ ಯೋಜನೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಹಾಲು ಪ್ರೋತ್ಸಾಹಧನ ಪಾವತಿ ವ್ಯವಸ್ಥೆ, ಹಣಕಾಸಿನ ನಿರ್ವಹಣೆ ಮತ್ತು ಸರ್ವೇಕ್ಷಣೆ, ತಾಳೆ ನೋಡುವುದು ಮತ್ತು ಸರಿದೂಗಿಸುವುದು**

- ಪ್ರೋತ್ಸಾಹಧನ ಯೋಜನೆಯ ಎಲ್ಲಾ ಚಟುವಟಿಕೆಗಳ ನಿಗಾವಣೆಗಾಗಿ ಬಳಕೆದಾರರ ಸ್ನೇಹಿತ ಸೂಕ್ತ ತಂತ್ರಾಂಶವನ್ನು ಒದಗಿಸಬೇಕು. ಈ ತಂತ್ರಾಂಶವನ್ನು ವಿವಿಧ ಹಂತಗಳಲ್ಲಿ ಪರಿಣಾಮಕಾರಿ ನಿಗಾವಣೆ, ಜವಾಬ್ದಾರಿ ಮತ್ತು ಪಾರದರ್ಶಕತೆಗಾಗಿ ಬಳಸಿಕೊಳ್ಳಬಹುದು.

**ಹಾಲಿ ಇರುವ ಮೂಲಭೂತ ಸೌಕರ್ಯ ಮತ್ತು ಮಾನವ ಶಕ್ತಿಯ ಸ್ಥಿತಿ**

- ಒಕ್ಕೂಟಗಳಲ್ಲಿ ಅಗತ್ಯವಿರುವ ಹೆಚ್ಚುವರಿ ಮೂಲಭೂತ ಸೌಕರ್ಯಗಳು ಮತ್ತು ಮಾನವ ಶಕ್ತಿಗಾಗಿ ತಗಲುವ ಹೆಚ್ಚುವರಿ ವೆಚ್ಚವನ್ನು ಭರಿಸಲು ಪ್ರೋತ್ಸಾಹಧನದ ಶೇ.2ರಷ್ಟಕ್ಕೆ ಸಮನಾದ ಅನುದಾನವನ್ನು ಇಡುಗಂಟಾಗಿ ಪ್ರತ್ಯೇಕವಾಗಿ ಬಿಡುಗಡೆ ಮಾಡಬೇಕು. ಪ್ರಸ್ತುತ ವಿವಿಧ ಹಂತಗಳಲ್ಲಿ ಲೆಕ್ಕ ಪರಿಶೋಧನೆಗಾಗಿ ಹೆಚ್ಚುವರಿ ವೆಚ್ಚವಾಗುತ್ತಿದೆ. ಸಿಬ್ಬಂದಿಗಾಗಿ ಹೆಚ್ಚುವರಿ ವೆಚ್ಚವು ಪ್ರತಿ ಮಾಹೆ ರೂ.50000-60000ದಷ್ಟಿದೆ. ಇದು ಸರ್ಕಾರದಿಂದ ಒಕ್ಕೂಟಗಳಿಗೆ ಪಾವತಿಯಾಗಬೇಕು.
- ಸರ್ಕಾರವು ಮೂಲಭೂತ ಸೌಕರ್ಯಗಳು ಮತ್ತು ಮಾನವ ಶಕ್ತಿಯ ವೆಚ್ಚವನ್ನು ಒಳಗೊಂಡು ಹಾಲಿನ ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಮೌಲ್ಯವರ್ಧನೆಗೆ ಹೆಚ್ಚುವರಿ ಅನುದಾನ ನೀಡಿದರೆ ಒಕ್ಕೂಟಗಳು ಲಾಭದಲ್ಲಿ ನಡೆಯುತ್ತವೆ. ಅದರಿಂದಾಗಿ, ಒಕ್ಕೂಟಗಳು ರೈತರಿಗೆ ಹಾಲಿ ಇರುವ ಖರೀದಿ

ದರದೊಂದಿಗೆ ಹೆಚ್ಚುವರಿ ಮೊತ್ತವನ್ನು ನೀಡಬಹುದು. ಅದರಿಂದಾಗಿ, ಹಾಲು ಪ್ರೋತ್ಸಾಹಧನ ಯೋಜನೆಯನ್ನು ಹಿಂತೆಗೆದುಕೊಳ್ಳಬಹುದು. ಆದ್ದರಿಂದ, ಸರ್ಕಾರವು ರಾಜಸ್ವ ವೆಚ್ಚವನ್ನು ಕಡಿಮೆ ಮಾಡಲು ಧೀರ್ಘಾವಧಿಯ ಮೂಲ ಬಂಡವಾಳ ಹೂಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳು ರೈತರಿಗೆ ಹೆಚ್ಚಿನ ಖರೀದಿ ದರವನ್ನು ನೀಡಲು ಸಾಧ್ಯವಾಗಬೇಕು.

**ಇತರೆ**

ಒಕ್ಕೂಟಗಳು ಪ್ರೋತ್ಸಾಹಧನದ ಮೊತ್ತವನ್ನು ಹಾಲು ಉತ್ಪಾದಕರ ಖಾತೆಗಳಿಗೆ ನೇರವಾಗಿ ವರ್ಗಾಯಿಸುವ ಬದಲಿಗೆ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಖಜಾನೆಯಿಂದಲೇ ನೇರವಾಗಿ ರೈತರ ಖಾತೆಗೆ ವರ್ಗಾಯಿಸುವುದು ಇನ್ನಷ್ಟು ಉತ್ತಮ.

**೧೦.೩ ಹಾಲು ಪ್ರೋತ್ಸಾಹಧನ ಯೋಜನೆಯ ಪರಿಣಾಮದ ಬಗ್ಗೆ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ನೀಡಿದ ಕ್ರೋಢೀಕೃತ ಅಭಿಪ್ರಾಯಗಳು ಮತ್ತು ಸಲಹೆಗಳು**

೧. ಉತ್ಪಾದಕರ ಸಹಕಾರಿ ಸಂಘಗಳ ಹಂತದಲ್ಲಿ ರಾಸುಗಳಲ್ಲಿ ಕೃತಕ ಗರ್ಭಧಾರಣೆ ಮತ್ತು ಆಹಾರ, ಹಾಗೂ ಲವಣ ಮಿಶ್ರಣ ಮಾರಾಟದಲ್ಲಿ ಹೆಚ್ಚಳವಾಗಿದೆ. ಹೈನಾಗಾರ ನಿರ್ವಹಣೆಯಲ್ಲಿ ಪರಿಣಾಮಕಾರಿ ಮುಂಜಾಗ್ರತೆ ಮತ್ತು ಸ್ವಚ್ಛತೆಯ ಕ್ರಮಗಳಿಂದ ರಾಸುಗಳಲ್ಲಿ ರೋಗೋದ್ರೇಕಗಳು ಕಡಿಮೆಯಾಗಿರುವುದನ್ನು ಗಮನಿಸಲಾಗಿದೆ.

೨. ಶೀತಲೀಕರಣ ಘಟಕ ಸ್ಥಾಪಿಸಲಾಗಿದೆ.

೩. ಹಾಲು ಪೂರೈಸುವವರು ಹೆಚ್ಚಾಗಿದ್ದಾರೆ.

೪. ಹಳ್ಳಿಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಾಗಿದೆ.

೫. ಹೈನು ರಾಸುಗಳ ಸಂಖ್ಯೆ ಹೆಚ್ಚಾಗಿದೆ.

೬. ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಹಾಲಿನ ಪರೀಕ್ಷೆಗಾಗಿ ಸ್ವಯಂವಿಶ್ಲೇಷಣಾ ಯಂತ್ರಗಳನ್ನು ಸ್ಥಾಪಿಸಲಾಗಿದೆ.

೭. ಒಟ್ಟಾರೆಯಾಗಿ ಹಳ್ಳಿಗಳಲ್ಲಿ ಹೈನು ಚಟುವಟಿಕೆ ಸಮೃದ್ಧವಾಗಿದೆ.

೮. ಸ್ವಲ್ಪ ಮಟ್ಟಿಗೆ ಹೈನುಗಾರರ ಜೀವನ ಮಟ್ಟ ಸುಧಾರಿಸಿದೆ

೯. ಹೈನುಗಾರರ ಮಕ್ಕಳು ಕಾನ್ವೆಂಟ್‌ಗಳಲ್ಲಿ ಓದುತ್ತಿದ್ದಾರೆ ಮತ್ತು ಅವರ ಹಾಜರಾತಿಯು ಉತ್ತಮವಾಗಿದೆ.

೧೦. ಹೈನುಗಾರನು ಹಳೆಯ ಕಟ್ಟಡಕ್ಕೆ ದುರಸ್ತಿ ಮತ್ತು ಸುಧಾರಣೆ ಮಾಡಿರುವುದನ್ನು ಗಮನಿಸಿದೆ.

**ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಂದ ಸಲಹೆಗಳು**

೧. ಹೈನುಗಾರಿಕೆಯ ನಿರ್ವಹಣಾ ವೆಚ್ಚದಲ್ಲಾಗಿರುವ ಹೆಚ್ಚಳವನ್ನು ಒಟ್ಟಾರೆ ಪ್ರೋತ್ಸಾಹಧನದ ದರವನ್ನು ರೂ.೪.೦೦ ರಿಂದ ರೂ.೬.೦೦ ಅಥವಾ ರೂ.೮.೦೦ಕ್ಕೆ ಏರಿಸುವುದರಿಂದ ಸರಿದೂಗಿಸಬಹುದು. ಪ್ರೋತ್ಸಾಹಧನದ ದರವನ್ನು ರೂ.೮.೦೦ಕ್ಕೆ ಪರಿಷ್ಕರಿಸಿದರೆ, ಹೈನುಗಾರರಿಗೆ ರೂ. ೨.೦೦ ಲಾಭಾಂಶವಾಗಿ ದೊರೆತು ಹೈನುಗಾರಿಕೆಯು ಗ್ರಾಮೀಣ ಪ್ರದೇಶಗಳಲ್ಲಿ ಸುಸ್ಥಿರವಾಗಲಿದೆ.

೨. ಪ್ರೋತ್ಸಾಹಧನದ ಮೊತ್ತವು ವಿಳಂಬವಾಗಿ ತಲುಪುವುದನ್ನು ತಡೆಯಲು ಹಾಲಿನ ಬಾಬ್ತಿನೊಂದಿಗೆ ಸಂಘದಿಂದ ಪಾವತಿಸಬಹುದಾಗಿದೆ.

೩. ಸಂಘದ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಾಗುವುದರಿಂದ ಪ್ರೋತ್ಸಾಹಧನವನ್ನು ಹೆಚ್ಚಿಸಬೇಕು. ಆದ್ದರಿಂದ, ಪ್ರತಿ ತಿಂಗಳು ರೂ. ೫೦೦.೦೦ ಗೌರವಧನ ಪಾವತಿಸಬೇಕು.

### 10.4 ಕಲಿತ ಪಾಠಗಳು

**ಪ್ರೋತ್ಸಾಹಧನದ ಮೊತ್ತ ಅಥವಾ ಸೇವಾ ನೀಡಿಕೆ ವ್ಯವಸ್ಥೆಯ ಬಗ್ಗೆ**

"ಯಾವುದೇ ಪ್ರೋತ್ಸಾಹಧನ ನೀಡಿಕೆ ಅಥವಾ ಯಾವುದೇ ಸೇವೆ ಅಥವಾ ಫಲ ನೀಡುವ ಯೋಜನೆಯನ್ನು ಸಮಾಜದ ವಿಶಾಲ ಹಿತಾಸಕ್ತಿಯಿಂದ ಅನುಷ್ಠಾನಿಸುವ ಮೊದಲು ಅಳವಡಿಸಿಕೊಳ್ಳಬೇಕಾದ ಸೇವಾ ನೀಡಿಕೆ ಪದ್ಧತಿಯ ಆಗುಹೋಗುಗಳನ್ನು ಕುರಿತು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳು ಸವಿಸ್ತಾರವಾಗಿ ಚರ್ಚಿಸಬೇಕಾಗುತ್ತದೆ. ಇದರ ಫಲಿತಾಂಶದ ಆಧಾರದಲ್ಲಿ ಸಮರ್ಥ, ಸೂಕ್ತ ನೀಡಿಕೆ ಪದ್ಧತಿಯನ್ನು ಆಯ್ಕೆ ಮಾಡಬಹುದು ಮತ್ತು ಧ್ಯೇಯೋದ್ದೇಶಗಳನ್ನು ಸಾಧಿಸಲು ತ್ವರಿತ ಅನುಷ್ಠಾನಕ್ಕೆ ಅಳವಡಿಸಿಕೊಳ್ಳಲು ಮಾರ್ಗಸೂಚಿಗಳನ್ನು ನೀಡಬಹುದು".

### 10.5 ತೀರ್ಮಾನಗಳು

**ಹಾಲು ಪ್ರೋತ್ಸಾಹಧನ ಯೋಜನೆಯನ್ನು ಮಂಜೂರು ಮಾಡಲು ಕರ್ನಾಟಕ ಸರ್ಕಾರವು ತೆಗೆದುಕೊಂಡ ನೀತಿ ನಿರ್ಧಾರದಿಂದ ಒಟ್ಟಾರೆ ಗಣನೀಯ ಧನಾತ್ಮಕ ಪ್ರಭಾವವಾಗಿದ್ದು, ಮಹಿಳೆಯರು, ಸಣ್ಣ, ಅತಿ ಸಣ್ಣ ರೈತರು ಮತ್ತು ಭೂರಹಿತ ಕೃಷಿಕರ ಜೀವನೋಪಾಯಕ್ಕೆ ಭರವಸೆಯಾಗಿ ಸಹಕಾರಿ ವಲಯದಲ್ಲಿ ಹೈನು ಚಟುವಟಿಕೆಯ ಅಭಿವೃದ್ಧಿಯಾಗಿದೆ. ಸಹಕಾರಿ ವಲಯದಲ್ಲಿ ಹೈನುಗಾರರ ಹಿತಾಸಕ್ತಿಯಿಂದ ಪ್ರೋತ್ಸಾಹಧನ ನೀಡಿಕೆ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಲು ಸಲಹೆ ನೀಡಲಾಗಿರುವಂತೆ ಪ್ರೋತ್ಸಾಹಧನದ ದರವನ್ನು ರೂ.6.00 ಇಲ್ಲವೆ ಇನ್ನೂ ಹೆಚ್ಚು ಮಾಡಿ ಪರಿಷ್ಕರಿಸಿ ಸರ್ಕಾರವು ಯೋಜನೆಯನ್ನು ಮುಂದುವರಿಸಬಹುದಾಗಿದೆ. ಪ್ರೋತ್ಸಾಹಧನದ ದರ ಪರಿಷ್ಕರಣೆಯು ಬರಗಾಲದ ಸನ್ನಿವೇಶಗಳಲ್ಲಿಯೂ, ಆಹಾರ ಭದ್ರತೆಯ ಗುರಿಯೊಂದಿಗೆ, ಹಾಲು ಉತ್ಪಾದನೆಯಲ್ಲಿ ಇರುವ ಸುಸ್ಥಿರ ಬೆಳವಣಿಗೆಯನ್ನು ಖಂಡಿತವಾಗಿಯೂ ಕಾಯ್ದುಕೊಳ್ಳುತ್ತದೆ.**

# ಭಾಗ 11: ಶಿಫಾರಸ್ಸುಗಳು

**11.1.** ಅನುಷ್ಠಾನದಲ್ಲಿರುವ **ಹಾಲು ಪ್ರೋತ್ಸಾಹಧನ ಯೋಜನೆ**ಯನ್ನು ಪ್ರೋತ್ಸಾಹಧನವನ್ನು ಏರಿಕೆ ಮಾಡಿ ಮುಂದುವರಿಸುವುದು. ಹೈನುರಾಸುಗಳ ಆಹಾರದ ಬೆಲೆ ಮತ್ತು ಒಟ್ಟಾರೆ ನಿರ್ವಹಣಾ ವೆಚ್ಚ ಹೆಚ್ಚಾಗಿರುವುದರಿಂದ ಗ್ರಾಮ ಮಟ್ಟದ ಹಾಲು ಉತ್ಪಾದಕರ ಸಂಘಗಳಿಗೆ ಹಾಲನ್ನು ಪೂರೈಸುವ ಹೈನುಗಾರರಿಗೆ ಪ್ರತಿ ಲೀಟರ್ ಹಾಲಿಗೆ ರೂ.೬.೦೦ ಅಥವ ರೂ.೮.೦೦ ನೀಡಬಹುದು. ಸಹಕಾರಿ ವಲಯದ ಹೈನುಗಾರಿಕೆ ಚಟುವಟಿಕೆಯು ಗರಿಷ್ಠ ಬೆಳವಣಿಗೆಯನ್ನು ಹೊಂದುವಂತೆ ಮತ್ತು ರೈತರ ಮಟ್ಟ ಸುಧಾರಿಸಲು ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟಗಳಿಂದ ಗ್ರಾಮೀಣ ರೈತರು ಪ್ರತಿಫಲದಾಯಕ/ ಲಾಭದಾಯಕ ಖರೀದಿ ದರವನ್ನು ಪಡೆಯುವಂತಾಗುವವರೆಗೆ ಈ ಯೋಜನೆಯನ್ನು ಮುಂದುವರಿಸಬೇಕಾಗುತ್ತದೆ.

**11.2.** ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆಯುಕ್ತಾಲಯದಲ್ಲಿ ಅನುಷ್ಠಾನದಲ್ಲಿರುವ ಯೋಜನೆಗಳ ಬಗ್ಗೆ ಕಲಿಕೆ ಮತ್ತು ದಾಖಲಾತಿಗಾಗಿ " **ನಿಗಾವಣೆ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲಾತಿ**" ಶಾಖೆಯನ್ನು ಸ್ಥಾಪಿಸಿ ಸಮಕಾಲೀನ ನಿಗಾವಣೆ ಮತ್ತು ಮೌಲ್ಯ ಮಾಪನ ಮಾಡುವ ಮೂಲಕ ಎದುರಾದ ಸಮಸ್ಯೆಗಳಿಗೆ ಸಕಾಲದಲ್ಲಿ ತಿದ್ದುವಿಕೆ ಮತ್ತು ಸೂಕ್ತ ಪರಿಹಾರೋಪಾಯಗಳನ್ನು ಕುರಿತು ಸಲಹೆ ನೀಡಬಹುದಾಗಿರುತ್ತದೆ.

**11.3. ಹಾಲಿನ ಉತ್ಪಾದನಾ ವೆಚ್ಚ ಮತ್ತು ಗ್ರಾಮೀಣ ರೈತರಿಂದ ಹಾಲು ಒಕ್ಕೂಟಗಳು ಹಾಲನ್ನು ಖರೀದಿಸುವ ದರವನ್ನು ಲೆಕ್ಕ ಹಾಕುವ ಜವಾಬ್ದಾರಿ. ಎರಡು ಆಯ್ಕೆಗಳನ್ನು ಶಿಫಾರಸ್ಸು ಮಾಡಲಾಗಿದೆ.**

**ಆಯ್ಕೆ –1:** ಗ್ರಾಮ ಮಟ್ಟದಲ್ಲಿ ಹಾಲಿನ ಉತ್ಪಾದನಾ ವೆಚ್ಚ ಮತ್ತು ಹಾಲು ಒಕ್ಕೂಟಗಳು ಹಾಲನ್ನು ಖರೀದಿಸಬೇಕಾದ ದರವನ್ನು ಲೆಕ್ಕಾಚಾರ ಮಾಡಲು ಕರ್ನಾಟಕ ಸರ್ಕಾರವು **ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ**ಯನ್ನು ಗುರುತಿಸಿ ಜವಾಬ್ದಾರಿಯನ್ನು ವಹಿಸಬಹುದು.

**ಆಯ್ಕೆ –2:** ಹಾಲು ಅತ್ಯವಶ್ಯಕ ಸರಕಾಗಿದ್ದು "**ಕರ್ನಾಟಕ ರಾಜ್ಯ ಕೃಷಿ ದರ ಆಯೋಗ**"ದ ವ್ಯಾಪ್ತಿಯಲ್ಲಿ ಪರಿಗಣಿಸುವ ಮೂಲಕ ರೈತರ ಹಿತಾಸಕ್ತಿಯಿಂದ ಹಾಲಿಗೆ ಪ್ರತಿಫಲದಾಯಕ ದರವನ್ನು ನೀಡುವ ಖಾತರಿ ಇರುತ್ತದೆ.

ಮೇಲಿನ ನಿಯಂತ್ರಕ ಪ್ರಾಧಿಕಾರಗಳು, ಹಾಲಿನ ಖರೀಧಿ ದರವನ್ನು ನಿಗಧಿಪಡಿಸುವಾಗ, ಜಿಲ್ಲಾ ಹಾಲು ಒಕ್ಕೂಟಗಳ ಆರ್ಥಿಕ ಪರಿಸ್ಥಿತಿಯನ್ನುಕೂಡ ಒಂದು ಅಂಶವನ್ನಾಗಿ ಪರಿಗಣಿಸ ಬೇಕು.

**11.4. ಹಾಲು ಪ್ರೋತ್ಸಾಹಧನ ಯೋಜನೆಯಡಿ ಪ್ರೋತ್ಸಾಹಧನ ನೀಡಿಕೆ ವ್ಯವಸ್ಥೆ**

**ಆಯ್ಕೆ –1:** ಗ್ರಾಮೀಣ ಹಾಲು ಪೂರೈಕೆದಾರರಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳು ಪ್ರತಿ ಪಾಕ್ಷಿಕವಾಗಿ ಪಾವತಿಸಬೇಕಾದ ಹಾಲಿನ ಬಾಬ್ತಿನೊಂದಿಗೆ ಪ್ರೋತ್ಸಾಹಧನದ ಮೊತ್ತವನ್ನೂ ಸಹಾ ಪಾವತಿಸಲು ಸಾಧ್ಯವಾಗುವಂತೆ ಪ್ರೋತ್ಸಾಹಧನ ವಿತರಣೆ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕಾಗಿದೆ.

**ಆಯ್ಕೆ –2: ಹಾಲು ಪ್ರೋತ್ಸಾಹಧನ ಯೋಜನೆಯನ್ನು ಇದೇ ರೀತಿಯಲ್ಲಿ ಮುಂದುವರಿಸಿದರೆ,** ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಅನುಷ್ಠಾನದ ನಿಗಾವಣೆ ಮಾಡಲು ಕಾರ್ಯನಿರತ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಮತ್ತು ಜಿಲ್ಲಾ ಹಾಲು ಒಕ್ಕೂಟಗಳನ್ನು ಒಂದು ಸಂಪರ್ಕಜಾಲದಲ್ಲಿ ಅಳವಡಿಸಲು ಸಮರ್ಥ ತಂತ್ರಾಂಶವನ್ನು ರೂಪಿಸುವುದು. ತಂತ್ರಾಂಶದಲ್ಲಿ ಹಾಲು ಪೂರೈಕೆದಾರರ ದತ್ತಾಂಶವನ್ನು ಅವರ ಆಧಾರ್ ಸಂಖ್ಯೆಯೊಂದಿಗೆ ಜೋಡಿಸಿ

ಲೆಕ್ಕ ಮತ್ತು ಪಾವತಿಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಿ ದೃಢೀಕರಿಸಲು ಅವಕಾಶವನ್ನು ಕಲ್ಪಿಸುವ ಮೂಲಕ ಪಾರದರ್ಶಕತೆ, ಜವಾಬ್ದಾರಿ ಮತ್ತು ತ್ವರಿತ ವಿಲೇವಾರಿಯ ಖಾತರಿ ನೀಡಬಹುದಾಗಿರುತ್ತದೆ.

ಈ ಜಾಲವನ್ನು ಇಲಾಖೆಯ ಸಂಬಂಧಿತ ಎಲ್ಲಾ ಸಂಸ್ಥೆಗಳನ್ನು ಒಳಪಡಿಸಲು ಮತ್ತಷ್ಟು ವಿಸ್ತರಿಸಿ, ಎಲ್ಲಾ ಜಾನುವಾರು ಪಾಲಕರೊಡನೆ ಸಂಪರ್ಕ ಸಾಧಿಸಿ ಅವರ ಭೂ ವಿವರ ಮತ್ತು ಜಾನುವಾರು ಸಂಪನ್ಮೂಲ ವಿವರಗಳೊಂದಿಗೆ ಮನೆ ಬಾಗಿಲಿಗೆ ಸೇವೆಗಳ ನೀಡಿಕೆ, ಪರಿಕರಗಳ ಸರಬರಾಜು ಮತ್ತು ಮಾದರಿ ಸಮೀಕ್ಷೆ, ಜಾನುವಾರು ವಿಮೆ ಮತ್ತು ರೋಗ ಮುನ್ಸೂಚನೆ ಮಾಹಿತಿಯನ್ನು ಸಂಚಾರಿ ದೂರವಾಣಿಗೆ ಒದಗಿಸುವುದನ್ನೂ ಒಳಗೊಂಡಂತೆ ಪ್ರೋತ್ಸಾಹಗಳನ್ನು ನೀಡುವ **ದೀರ್ಘಾವಧಿ ಯೋಜನೆಯಾಗಿ** ಕೈಗೊಳ್ಳಬಹುದು.

**11.5. ಸಂಚಲನಾ ವ್ಯವಸ್ಥೆ ಮತ್ತು ಅಭಿವೃದ್ಧಿಗೆ ಬೆಂಬಲ**

ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನೂ ಒಳಗೊಂಡಂತೆ ಜಿಲ್ಲಾ ಹಾಲು ಒಕ್ಕೂಟಗಳು ಹಾಗೂ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಅವಶ್ಯಕತೆಯನ್ನು ಆಧರಿಸಿ ಹೆಚ್ಚುವರಿ ಮೂಲಭೂತ ಸೌಕರ್ಯ ಮತ್ತು ಮಾನವ ಶಕ್ತಿ ಒದಗಿಸಲು ಪ್ರೋತ್ಸಾಹಧನದ ಶೇ.2ರಷ್ಟು ಅನುದಾನವನ್ನು ನಿಗದಿಪಡಿಸುವುದು. ಇದರಲ್ಲಿ ಒಂದು ಭಾಗವನ್ನು ಸ್ಥಳೀಯ ಮಹಿಳಾ ಮುಂದಾಳುಗಳಿಗೆ "**ತರಬೇತುದಾರರ ತರಬೇತಿ**" ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರತಿಕೂಲ/ಬರ ಪರಿಸ್ಥಿತಿಗಳಲ್ಲಿ ಹೈನು ರಾಸುಗಳ ಪಾಲನೆ ಕುರಿತು ಹೈನುಗಾರರಿಗೆ "**ಗ್ರಾಮ ಮಟ್ಟದ ತರಬೇತಿ**" ಗಳನ್ನು ಆಯೋಜಿಸಲು ಉಪಯೋಗಿಸಬಹುದು. ಈ ರೀತಿಯ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಯಿಂದ "**ರೈತರಿಂದ ರೈತರಿಗೆ**" ಜ್ಞಾನ ವಿಸ್ತರಣೆ ಮತ್ತು ಗ್ರಾಮ ಮಟ್ಟದಲ್ಲಿ ಹೈನು ಅಭಿವೃದ್ಧಿ ಚಟುವಟಿಕೆಯ ಸುಸ್ಥಿರ ಧನಾತ್ಮಕ ಬೆಳವಣಿಗೆಯಾಗುತ್ತದೆ.

***

## ಆಧಾರಗಳು


1. ಕೃಷಿ ಅಂಕಿ ಅಂಶದತ್ತ ನೋಟ 2014. ಭಾರತ ಸರ್ಕಾರ, ಕೃಷಿ ಸಚಿವಾಲಯ, ಕೃಷಿ ಮತ್ತು ಸಹಕಾರ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ.
2. ವಾರ್ಷಿಕ ಆಡಳಿತ ವರದಿ 2014–15, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಸರ್ಕಾರ
3. ಕೇಂದ್ರಪುರಸ್ಕೃತ ಕಾರ್ಯಕ್ರಮಗಳು ಮತ್ತು ಕೇಂದ್ರೀಯ ನೆರವಿನ ಯೋಜನಾ ಅನುದಾನದ ಅವತರಣದ ಲಕ್ಷಣಗಳು ಮತ್ತು ಕಾರ್ಯವಿಧಾನಗಳು' ಕುರಿತ ವಿಶ್ಲೇಷಣಾ ಅಧ್ಯಯನ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಅಂತಿಮ ವರದಿ, ಮಾರ್ಚ್, 2013.
4. ಮೌಲ್ಯಮಾಪನ ವರದಿಗಳನ್ನು ಬರೆಯುವ ಕಲೆ ಮತ್ತು ಕಲಾವಿನ್ಯಾಸ, ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಇವ್ಯಾಲುಯೇಷನ್ ಟ್ರೆಸರಿ ಬೋರ್ಡ್ ಆಫ್ ಕೆನಡಾ ಸೆಕ್ರೆಟರಿಯಟ್, ಮೇ, 2004.
5. ಮೂಲ ಪಶುಪಾಲನಾ ಅಂಕಿ ಅಂಶಗಳು (2013), ಪಶು ಪಾಲನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ. ಭಾರತ ಸರ್ಕಾರ
6. ಕರ್ನಾಟಕದಲ್ಲಿ ಹೈನುಗಾರಿಕೆ– ಒಂದು ಸಾಂಖ್ಯಿಕ ಪಾರ್ಶ್ವಚಿತ್ರ, 2015. ಹೈನು ಜ್ಞಾನ ಹೆಬ್ಬಾಗಿಲು, ಹೈನು ಜ್ಞಾನ ಸಂಪನ್ಮೂಲಗಳಲ್ಲಿ, ಅಂತರ್ಜಾಲ ಪುಸ್ತಕಗಳು
7. ಕರ್ನಾಟಕದ ಆರ್ಥಿಕ ಸಮೀಕ್ಷೆ, 2015–16. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ,
8. ಎಕ್ಸ್‌ಫಲೋರಿಂಗ್ ದಿ ಕಾಸ್ಟ್ ಆಫ್ ಮಿಲ್ಕ್ ಪ್ರೊಡಕ್ಷನ್ ಅಂಡ್ ಪೊಟೆನ್ಷಿಯಲ್ ಎಕಾನಮೀಸ್ ಆಫ್ ಸ್ಕೇಲ್ ಇನ್ ಎ ಡೈರಿ ಕೋಆಪರೇಟಿವ್ ' ಪರ್ಥ್ ಶಾ, 2012. ವಾರ್ಥನ್ ರಿಸರ್ಚ್ ಸ್ಕಾಲರ್ಸ್, ವಾರ್ಥನ್ ಸ್ಕೂಲ್, ಪೆನಿಸಿಲ್ವೇನಿಯಾ, ಸಾರಾಂಶ ಪ್ರತಿ
9. ಹೈನು ವಲಯದಲ್ಲಿ ವಿಶ್ವಮಟ್ಟದ ಸ್ಪರ್ಧಾಭಾವ –ಡಾ. ರಾಂಘುಲ್, 2012 ಗ್ಲೋಬಲ್ ಕಾಂಪಿಟಿಟಿವ್‌ನೆಸ್ ಇನ್ ಡೈರಿ ಸೆಕ್ಟರ್ –ಅರ್ಥಶಾಸ್ತ್ರ ನಿರ್ದೇಶಾನಾಲಯ, ಇಯಾಂಡ್ಸ್ ಡಾಕ್‌ನೆಟ್ ಇನ್ ಪಬ್ಲಿಕೇಷನ್ 12–12–2012/4129–ಆಗಸ್ಟ್, 12/4129–3ಪಿಡಿಎಫ್.
10. ವಿವಿಧ ಸರಕು ಮತ್ತು ಸೇವೆಗಳ ಗೃಹ ಬಳಕೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು
11. ಹೆಚ್‌ಟಿಟಿಪಿ:/ಡಬ್ಲ್ಯ್ಯ ಡಬ್ಲ್ಯ್ಯ ಡಬ್ಲ್ಯ್ಯ/ಸ್ಲೈಡ್‌ಶೇರ್.ನೆಟ್/ವಸಂತೇಗೌಡ/ವಸಂತ್–ಕುಮಾರ್–ಸಿ–ಎಂ–ಎಸ್‌ಸಿ–ಅಗರಿಕಲ್ಚರಲ್ ಎಕಾನಮಿಕ್ಸ್–ಯುಎಎಸ್–ಜಿಕೆವಿಕೆ–ಬೆಂಗಳೂರು–28–03–2015.
12. ಎನ್‌ಎಸ್‌ಎಸ್‌ಒ, 66ನೇ ಸುತ್ತಿನ ಸಮೀಕ್ಷೆ (ಜುಲೈ–2009–ಜೂನ್ 2010) ಕರ್ನಾಟಕ ಆರ್ಥಿಕ ಸಮೀಕ್ಷೆ, 2014–15
13. ರಾಷ್ಟ್ರೀಯ ಕಾರ್ಯಗಾರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪ್ರಭಾವದ ಗಣನೆ. 19–21, ಆಗಸ್ಟ್, 2013, ಎಟಿಐ, ಮೈಸೂರು.
14. ಕರ್ನಾಟಕ ಸರ್ಕಾರದ ಆಯವ್ಯಯ ಭಾಷಣ, 2015–16
15. ಕರ್ನಾಟಕ ಹಾಲು ಮಹಾ ಮಂಡಳ ಹೆಚ್‌ಟಿಟಿಪಿ: /ಡಬ್ಲ್ಯೂಡಬ್ಲ್ಯೂಡಬ್ಲ್ಯೂ. ಕೆಎಂಎಫ್ ನಂದಿನಿ. ಕೋಆಪ್. ಎಬೌಟ್‌ಅಸ್.

16. ಪಿಡಿಎಫ್ಎಂಡಿ,2014, ವಾರ್ಷಿಕ ವರದಿ–2013–14 ಕಾಲು ಮತ್ತು ಬಾಯಿ ರೋಗ ಯೋಜನಾ ನಿರ್ದೇಶನಾಲಯ. 203–14ನೇ ಸಾಲಿನಲ್ಲಿ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ ಒಟ್ಟು 472 ರೋಗೋದ್ರೇಕಗಳನ್ನು ದಾಖಲಿಸಲಾಗಿದೆ.
17. ಆಡಳಿತ ತರಬೇತಿ ಸಂಸ್ಥೆ, ಮೈಸೂರು, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಇಲಾಖೆಯ ಸಹಭಾಗಿತ್ವದಲ್ಲಿ ಏರ್ಪಡಿಸಿದ 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪ್ರಭಾವದ ಮಾಪನ'.ರಾಷ್ಟ್ರೀಯ ವಿಚಾರ ಸಂಕಿರಣದ ನಡವಳಿಗಳು, 2013, ಭಾರತ ಸರ್ಕಾರ, ನವದೆಹಲಿ.
18. ಹಾಲು, ಮೊಟ್ಟೆ, ಉಣ್ಣೆ ಮತ್ತು ಮಾಂಸ ಉತ್ಪಾದನೆಯ ಸಮಗ್ರ ಮಾದರಿ ಸಮೀಕ್ಷಾ ವರದಿ.2014–15 ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು, ಸಾಂಖ್ಯಿಕ ಕೋಶ.

## ಅನುಬಂಧಗಳು

**ಅನುಬಂಧ – 1**

**ಕರ್ನಾಟಕ ಸರ್ಕಾರದ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಹಾಲು ಪ್ರೋತ್ಸಾಹಧನ ಯೋಜನೆಯ 2008-2013 ಅವಧಿಯ ಮೌಲ್ಯ ಮಾಪನದ ಪದೋಲ್ಲೇಖಗಳು**

**1. ಯೋಜನೆಯ ಹಿನ್ನೆಲೆ ಮತ್ತು ಅನುಷ್ಠಾನ:**

ಕರ್ನಾಟಕ ಸರ್ಕಾರವು ಹಾಲು ಉತ್ಪಾದಕರ ಸಂಘಗಳಿಗೆ (ಹಾಉಸಸಂ) ಹಾಲನ್ನು ಪೂರೈಸುವ ರೈತರಿಗೆ/ರಾಸುಗಳ ಮಾಲಿಕರಿಗೆ ಪ್ರತಿ ಲೀಟರ್ ಹಾಲಿಗೆ ರೂ. 2.00 ರಂತೆ ಪಾವತಿಸಲು (ನಂತರ ಇದನ್ನು ರೂ.4.00ಕ್ಕೆ ಹೆಚ್ಚಿಸಲಾಗಿದೆ.) ದಿನಾಂಕ:09-09-2008ರಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂ. ಪಸಂಮೀ.53 ಕಹಾಮ.2008 ದಿನಾಂಕ: 08-09-2008ರಲ್ಲಿ "ಹಾಲು ಪ್ರೋತ್ಸಾಹಧನ ಯೋಜನೆ"ಯನ್ನು ಜಾರಿಗೆ ತಂದಿರುತ್ತದೆ. ಹೀಗೆ 19.41 ಲಕ್ಷ ರೈತರು ರಾಜ್ಯಾದ್ಯಂತ ಫಲವನ್ನು ಪಡೆದಿರುತ್ತಾರೆ. ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಆಧರಿಸಿ ಆಯುಕ್ತರು, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರ ಮೂಲಕ ಪ್ರೋತ್ಸಾಹಧನವನ್ನು 13 ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಲಾಗಿದೆ. ಪ್ರತಿ ತಿಂಗಳು ಮೊದಲ ವಾರದಲ್ಲಿ 13 ಹಾಲು ಒಕ್ಕೂಟಗಳು ತಮ್ಮ ಕ್ಲೇಮುಗಳನ್ನು ಆಯುಕ್ತರು, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರಿಗೆ ಕೊಡುತ್ತಾರೆ. ಹಾಲು ಒಕ್ಕೂಟಗಳು ಕ್ಲೇಮಿನ ಚೆಕ್ ಸ್ವೀಕರಿಸಿದ ನಂತರ ತಮ್ಮ ವ್ಯಾಪ್ತಿಯ ಪ್ರತಿಯೊಂದು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ರೈತರಿಗೆ/ರಾಸುಗಳ ಮಾಲಿಕರಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಪಾವತಿಸಲು ಹಂಚಿಕೆ ಮಾಡುತ್ತಾರೆ. ಸಂಬಂಧಪಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘದ ಕಾರ್ಯದರ್ಶಿಯು ಹಣ ಪಾವತಿಯ ವಹಿಯನ್ನು ನಿರ್ವಹಿಸಿದ್ದಾರೆ.

**2. ಯೋಜನೆಯ ಧ್ಯೇಯೋದ್ದೇಶಗಳು**

1. ವಿಶೇಷವಾಗಿ ಗ್ರಾಂಮೀಣ ಪ್ರದೇಶಗಳಲ್ಲಿ ಸಣ್ಣ/ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು/ ಭೂರಹಿತರು, ಮಹಿಳೆಯರು ಮತ್ತು ಸಮಾಜದ ಇತರ ದುರ್ಬಲ ವರ್ಗದ ಜನರು ಹೈನುಗಾರಿಕೆಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.
2. ಗ್ರಾಮೀಣ ಯುವಕರು ಹೈನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸುವುದು ಮತ್ತು ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಹಾಗೂ ನಗರ ಪ್ರದೇಶಗಳಿಗೆ ಜೀವನೋಪಾಯಕ್ಕಾಗಿ ವಲಸೆ ಬರುವುದನ್ನು ತಡೆಯುವುದು.
3. ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಉತ್ಪಾದಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಸುಧಾರಿಸುವುದು
4. ಆಹಾರ ಭದ್ರತೆಯನ್ನು ಒದಗಿಸಲು ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದು
5. ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ವಲಯಕ್ಕೆ ಬೆಂಬಲ ನೀಡುವುದು ಮತ್ತು ಪ್ರೋತ್ಸಾಹಿಸುವುದು.

**3. ಯೋಜನೆಯ ನಿಗಾವಣೆ**

ಮಾರ್ಗಸೂಚಿಗಳ ಪ್ರಕಾರ (ಅನುಬಂಧ-1) ಯೋಜನೆಯ ನಿಗಾವಣೆ, ಪರಿಶೀಲನೆ ಮತ್ತು ಮೌಲ್ಯಮಾಪನವನ್ನು 3 ಹಂತಗಳಲ್ಲಿ ಮಾಡಲಾಗುತ್ತಿದೆ. ಪ್ರಧಾನ ಕಾರ್ಯದರ್ಶಿಗಳು,ಪಶು ಪಾಲನೆ ಮತ್ತು ಮೀನುಗಾರಿಕೆ ಇವರು ರಾಜ್ಯ ಮಟ್ಟದ ಸಮಿತಿಯ ಮುಖ್ಯಸ್ಥರಾಗಿಯೂ, ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳು ಮತ್ತು ತಾಲೂಕಾ ಮಟ್ಟದಲ್ಲಿ ಸಂಬಂಧಪಟ್ಟ ತಾಲೂಕಾ ಆಸ್ಪತ್ರೆಯ ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿದ್ದಾರೆ. ಹಾಲು ಉತ್ಪಾದಕರ ಸಹಕಾರಿ ಸಂಘಗಳು ಎಲ್ಲಾ ದಾಖಲಾತಿಗಳನ್ನು ನಿರ್ವಹಿಸಿ ಅಗತ್ಯವೆನಿಸಿದಾಗ

ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮತ್ತು ಹಾಲು ಒಕ್ಕೂಟಗಳಿಗೆ ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿರುತ್ತವೆ.

**4. ಯೋಜನೆಯ ವ್ಯಾಪ್ತಿ**

ಇಡೀ ರಾಜ್ಯವು ಯೋಜನೆಯ ವ್ಯಾಪ್ತಿಯಲ್ಲಿದೆ. ಪ್ರಾರಂಭದಿಂದ ಒದಗಿಸಿದ ಅನುದಾನದ ವಿವರಗಳನ್ನು ಅಡಕಗೊಳಿಸಿದೆ **(ಅನುಬಂಧ -2)**

**5. ಮೌಲ್ಯಮಾಪನದ ಪ್ರಶ್ನೆಗಳು**

1. ರಾಜ್ಯ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಪ್ರೋತ್ಸಾಹಧನದ ಮೊತ್ತವು ಹಾಲು ಪೂರೈಕೆದಾರನನ್ನು ತಲುಪಲು ತೆಗೆದುಕೊಂಡ ಸರಾಸರಿ ಸಮಯಾವಧಿ? ಇದು ಸುಧೀರ್ಘವೇ, ಅಲ್ಪಾವಧಿ ಅಥವಾ ಸಮಂಜಸವೇ?

2. ಬಿಡುಗಡೆಯಾದ ಹಣವು ಸಂಪೂರ್ಣವಾಗಿ ರೈತರಿಗೆ ತಲುಪುತ್ತಿದೆಯೇ ಅಥವಾ ವಿತರಣೆಯ ಹಂತದಲ್ಲಿ ಯಾವುದೇ ಅನಪೇಕ್ಷಿತ/ಅನ್ಯಾಯಿಕ ಕಡಿತಗಳನ್ನು ಮಾಡಲಾಗುತ್ತಿದೆಯೇ?

3.. ಹಾಲು ಉತ್ಪಾದನೆ, ಗುಣಮಟ್ಟದ ಹೈನುರಾಸುಗಳ ಸಂಖ್ಯೆ ಮತ್ತು ನಗರ ಪ್ರದೇಶಗಳಿಗೆ ಗ್ರಾಮೀಣ ಯುವಕರ ವಲಸೆಯನ್ನು ಕಡಿಮೆ ಮಾಡುವಲ್ಲಿ ಹಾಲು ಪ್ರೋತ್ಸಾಹಧನ ಯೋಜನೆಯ ಪ್ರಭಾವವೇನು?

4. ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹಧನ ದರ ರೂ.2.00(ಹಿಂದಿನ) ಅಥವಾ ರೂ.4.00 (ಪ್ರಸ್ತುತ), ಸಾಕಾಗುವುದೇ? ಬದಲಾಯಿಸಬೇಕೆ? ಏಕೆ,ಹೇಗೆ ಮತ್ತು ಎಷ್ಟು?

5. ಯೋಜನೆಯನ್ನು ಜಾರಿಗೊಳಿಸಿದ್ದರಿಂದ ರೈತರು ಮತ್ತು ಕೃಷಿಕಾರ್ಮಿಕರ ಸಾಮಾಜಿಕ-ಆರ್ಥಿಕ ಸ್ಥಿತಿಯ ಮೇಲೆ ಉಂಟಾದ ಪ್ರಭಾವವೇನು?

6. ಪ್ರೋತ್ಸಾಹಧನ ನೀಡಿದ್ದರಿಂದ ಆಹಾರ ನೀಡಿಕೆ, ಲಸಿಕೆ ಹಾಕಿಸುವುದು, ಜಂತು ನಿವಾರಣೆ, ಕರುಗಳ ಪಾಲನೆ ಮತ್ತು ಆಹಾರದ ಸಮಂಜಸ ಬಳಕೆಯ ನಿರ್ವಹಣಾ ಪದ್ಧತಿಗಳ ತಿಳುವಳಿಕೆ ಸುಧಾರಿಸಿದೆಯೇ?

7.ಯೋಜನೆಯು ಜಾರಿಯಲ್ಲಿರುವುದರಿಂದ ಹೈನುಗಾರಿಕಾ ಚಟುವಟಿಕೆಗಳನ್ನು ಕೈಗೊಳ್ಳಲು ಗ್ರಾಮೀಣ ಯುವಕರು ಪ್ರಭಾವಿತರಾಗಿದ್ದಾರೆಯೆ?

8. ಗ್ರಾಮೀಣ ಪ್ರದೇಶಗಳಲ್ಲಿ ಹೈನು ಉದ್ಯಮದ ಲಾಭದಾಯಕತೆಯಲ್ಲಿ ಯೋಜನೆಯು ಬದಲಾವಣೆ ಮಾಡಿದೆಯೇ?

9. ಯಾವುದೇ ಹಂತದಲ್ಲಿ ಹೆಚ್ಚು ಮೊತ್ತ ಪಾವತಿಸಲಾಗುತ್ತಿದೆಯೇ? ತಡೆಯಲು ಯಾವುದೇ ಪರಿಶೀಲನೆ ಮತ್ತು ಸರಿದೂಗಿಸುವ ವ್ಯವಸ್ಥೆ ಇದೆಯೇ?

**6. ಮೌಲ್ಯಮಾಪನ ವಿಧಾನ**

ಹಾಲು ಪ್ರೋತ್ಸಾಹಧನ ಯೋಜನೆಯ ಮೌಲ್ಯಮಾಪನಕ್ಕಾಗಿ ಮೌಲ್ಯಮಾಪನ ಸಲಹಾ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಕೋರಲಾಗಿತ್ತು. ರಾಜ್ಯದಲ್ಲಿ 11 ಲಕ್ಷ ರೈತರಿಂದ ಹಾಲನ್ನು ಸಂಗ್ರಹಿಸಲು 13 ಹಾಲು ಒಕ್ಕೂಟಗಳಿವೆ. ಈ ಮೊದಲು ಹೇಳಲಾಗಿರುವ ಮೌಲ್ಯಮಾಪನ ಪ್ರಶ್ನೆಗಳನ್ನು ಬಳಸಿ ಪ್ರತಿ ಒಕ್ಕೂಟವನ್ನು ಎಲ್ಲಾ ನಿಯತಾಂಕಗಳ ಮೇಲೆ ಮೌಲ್ಯಮಾಪನ ಮಾಡಬೇಕಾಗಿದೆ. ಸಮೂಹ ಅನಿಯತ ಮಾದರಿಯು ಹಾಲು ಉತ್ಪಾದಕರ ಸಹಕಾರಿ ಸಂಘದ ಸದಸ್ಯರ ಸಂಖ್ಯಾಬಲವನ್ನಾಧರಿಸಿ ಕನಿಷ್ಠ 300 ವ್ಯಕ್ತಿಗಳನ್ನು ಪ್ರತಿ ಒಕ್ಕೂಟದಿಂದ ಸಣ್ಣ, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಮಹಿಳೆಯರು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಸದಸ್ಯರಿಗೆ ಸೂಕ್ತ ಪ್ರತಿನಿಧಿತ್ವ ನೀಡಿ ಆಯ್ಕೆ ಮಾಡಿಕೊಳ್ಳಲಾಗುವುದು. ಯೋಜನೆಯ ಪ್ರಭಾವವನ್ನು ಯಾವುದೇ ಜಿಲ್ಲೆ /ಒಕ್ಕೂಟದ ಯೋಜನೆಯು ಜಾರಿಯಲ್ಲಿಲ್ಲದ ಪ್ರದೇಶದಲ್ಲಿ ಮೌಲ್ಯಮಾಪನ ಮಾಡಲು (ಉದಾಹರಣೆಗೆ ಹಾಲನ್ನು ಹಾಲು ಒಕ್ಕೂಟಗಳಿಗೆ ಪೂರೈಸದೆ ಹೊಟೇಲುಗಳಿಗೆ

ಪೂರೈಕೆ ಮಾಡುತ್ತಿದ್ದ ರೈತರ ಗುಂಪನ್ನು ) ರೈತರ ಗುಂಪನ್ನು ನಿಯಂತ್ರಿತ ಸಮೂಹವಾಗಿ ಆಯ್ಕೆ ಮಾಡಿಕೊಳ್ಳಲಾಗುವುದು.

ಮೌಲ್ಯಮಾಪನ ಪ್ರಶ್ನೆಗಳಲ್ಲಿ ಪ್ರಶ್ನೆ ಸಂಖ್ಯೆ ೩,೫,೬,೭ ಮತು ೮ಕ್ಕೆ ಸಂಬಂಧಿಸಿದಂತೆ ಸಾಂಖ್ಯಿಕವಾಗಿ ಯೋಜನೆಯು ಗಣನೀಯ ಪ್ರಭಾವ ಉಂಟು ಮಾಡಿದೆಯೇ ಅಥವಾ ಇಲ್ಲವೇ ಎಂದು ತಿಳಿಯಲು ಕನಿಷ್ಠ 'ANOVA' ತಾಂತ್ರಿಕತೆ ಬಳಸಲಾಯಿತು.

**7. ವರದಿ ಸಲ್ಲಿಕೆಯ ವೇಳಾ ಪಟ್ಟಿ**

ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಜಿಲ್ಲಾವಾರು ಯೋಜಯೆಯಡಿ ಅನುದಾನ ಒದಗಿಸಿದ ಸರ್ಕಾರೇತರ ಸಂಸ್ಥೆಗಳು/ಜಿಲ್ಲಾ ಹಾಲು ಒಕ್ಕೂಟಗಳ ಮಾಹಿತಿಯನ್ನು ನೀಡುವುದು. ಇದರ ನಂತರ,

1. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅನುಮೋದನೆಗಾಗಿ ಕಾರ್ಯ ಯೋಜನೆ/ಪ್ರಾರಂಭಿಕ ವರದಿ.
2. ಕ್ಷೇತ್ರ ಮಾಹಿತಿ ಸಂಗ್ರಹಣೆ– ಕಾರ್ಯ ಯೋಜನೆ ಅನುಮೋದನೆಯಾದ ೩೦ ದಿನಗಳೊಳಗೆ
3. ಕರಡು ವರದಿ ಸಲ್ಲಿಸುವುದು –ಕ್ಷೇತ್ರ ಮಾಹಿತಿಯನ್ನು ಸಂಗ್ರಹಿಸಿದ ಒಂದು ತಿಂಗಳೊಳಗೆ
4. ಅಂತಿಮ ವರದಿ ಸಲ್ಲಿಸುವುದು – ಕರಡು ವರದಿಯನ್ನು ಸಲ್ಲಿಸಿದ ನಂತರ ೩೦ ದಿನಗಳೊಳಗೆ
5. ಒಟ್ಟು ಅಧ್ಯಯನದ ಅವಧಿಯು ೬ ತಿಂಗಳುಗಳಗಿಂತ ಕಡಿಮೆ

**೮. ಮೌಲ್ಯಮಾಪನ ವರದಿಯಲ್ಲಿ ನಿರೀಕ್ಷಿಸಿದ ಗುಣಗಳು**

ಈ ಕೆಳಕಂಡ ಅಂಶಗಳಗೆ ಅಂತಿಮ ಮೌಲ್ಯಮಾಪನ ವರದಿಯು ಸಾಂಖ್ಯಿಕವಾಗಿ ಸರಿಯಾದ ಮತ್ತು ಗಣನೀಯವಾದ ನಿರ್ಣಯ ( ಯಾವುದು ಅನ್ವಯಿಸುತ್ತದೆಯೊ) ಗಳನ್ನು ಒದಗಿಸುತ್ತದೆ.

ಅ. ಪ್ರೋತ್ಸಾಹಧನವು ವಾಸ್ತವಿಕವಾಗಿ ಪ್ರೇರೇಪಣೆ ನೀಡುವಂತಿದೆಯೇ ಅಥವಾ ಸಹಾಯಧನವಾಗುತ್ತಿದೆಯೇ?

ಬ. ಯೋಜನೆಯು ಅಪೇಕ್ಷಿತ ಧ್ಯೇಯೋದ್ದೇಶಗಳನ್ನು ಈಡೇರಿಸುತ್ತಿದೆಯೇ?

ಕ. ಇಲ್ಲವಾದರೆ, ಪರಿಗಣನೆಯ ಕ್ಷೇತ್ರಗಳಾವುವು ಮತ್ತು ಯಾವ ರೀತಿಯ ಸರಿಪಡಿಸುವ ಪ್ರಕ್ರಿಯೆ ಬೇಕಾಗಿದೆ?

ಡ. ಪ್ರೋತ್ಸಾಹಧನದ ಮೊತ್ತವನ್ನು ಬದಲಾಯಿಸಬೇಕೆ? ಹಾಗಿದ್ದರೆ, ಎಷ್ಟಿರಬೇಕು?

ಇ. ಪ್ರೋತ್ಸಾಹಧನ ವಿತರಣೆ ವ್ಯವಸ್ಥೆಯು ಸಮರ್ಥವಾಗಿದೆಯೇ ಮತ್ತು ಪಥಭ್ರಷ್ಟತೆಯಿಂದ ಮುಕ್ತವಾಗಿದೆಯೇ? ಇಲ್ಲವಾದರೆ, ಯಾವ ಸುಧಾರಣೆ ಕ್ರಮವನ್ನು ಸಲಹೆ ಮಾಡಲಾಗಿದೆ.?

ಎಫ್. ಪ್ರೋತ್ಸಾಹಧನದ ಮೊತ್ತವನ್ನು ಹಾಲು ಪೂರೈಕೆದಾರರ ಬ್ಯಾಂಕ್ ಖಾತೆಗಳಗೆ ವಿದ್ಯನ್ಮಾನ ತೀರುವಳಿ ಪದ್ಧತಿಯಲ್ಲಿ ವರ್ಗಾಯಿಸುವುದು ಯೋಜನೆಯ ಧ್ಯೇಯೋದ್ಧೇಶಗಳು ಮತ್ತು ಹಾಲು ಪೂರೈಕೆದಾರರ ಹಿತಾಸಕ್ತಿಯಿಂದ ಕೂಡಿದೆಯೇ? ಮತ್ತು ಅಧ್ಯಯನದ ಅವಧಿಯಲ್ಲಿ ತಿಳದು ಬರುವ ಸಂಬಂಧಪಟ್ಟ ಅಂಶಗಳು.

**೯. ವೆಚ್ಚ ಮತ್ತು ಅನುದಾನ ಬಿಡುಗಡೆಯ ವೇಳಾ ಪಟ್ಟಿ**

ಫಲಿತಾಂಶ ಆಧಾರಿತ ಅನುದಾನದ ಬಿಡುಗಡೆಯು ಹೀಗಿರಬಹುದು :

ಅ. ಕರಾರನ್ನು ಸಹಿ ಮಾಡಿದಾಗ ಒಪ್ಪಂದದ ಶೇ.೩೦ರಷ್ಟು.

ಬ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಕಾರ್ಯ ಯೋಜನೆಯು ಅನುಮೋದನೆಗೊಂಡ ನಂತರ ಶೇ. ೩೦ರಷ್ಟು.

ಕ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಪಶು ಪಾಲನೆ ಇಲಾಖೆಗಳು ಕರಡು ವರದಿಯನ್ನು ಅನುಮೋದಿಸಿದ ನಂತರ ಶೇ.20ರಷ್ಟು.

ಡ. ಪಶು ಪಾಲನೆ ಇಲಾಖೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಅಂತಿಮ ವರದಿಯ ಕನಿಷ್ಠ 5 ಪ್ರತಿಗಳನ್ನು ಮತ್ತು ತಂತ್ರಾಂಶ ಪ್ರತಿಯನ್ನು ಸಲ್ಲಿಸಿದ ನಂತರ ಕೊನೆಯ ಶೇ.20ರಷ್ಟು.

ಜಾರಿಯಲ್ಲಿರುವ ನಿಯಮಗಳನುಸಾರ ಆದಾಯ ತೆರಿಗೆಯನ್ನು ಪ್ರತಿ ಸಂದಾಯದ ವೇಳೆ ಕಟಾಯಿಸುವುದು. ಇದಕ್ಕೆ ಕೂಡಿಕೆಯಾಗಿ, ಮೌಲ್ಯಮಾಪಕ ಸಂಸ್ಥೆಯು ಸೇವಾ ತೆರಿಗೆಯನ್ನು ಪಾವತಿಸುವಂತೆ ನಿರೀಕ್ಷಿಸಿದೆ.

**10. ಅಧ್ಯಯನದ ಹೆಚುವರಿ ಮಾಹಿತಿಯನ್ನು ಪಡೆಯಲು ಸಂಪರ್ಕಾಧಿಕಾರಿ**

ಡಾ. ಕೆ.ನಾಗರಾಜ ಶೆಟ್ಟಿ, ಅಪರ ನಿರ್ದೇಶಕರು(ಜಾನುವಾರು ಆರೋಗ್ಯ), ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ (ಸಂ.ದೂ. 9449519626), ಡಾ. ನಾಗೇಂದ್ರ, ಜಂಟಿ ನಿರ್ದೇಶಕರು (ಅಭಿವೃದ್ಧಿ) ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ (ಸಂ.ದೂ.9448816680), ಮತ್ತು ಡಾ. ಎಸ್. ಉಡುಪ, ಸಹಾಯಕ ನಿರ್ದೇಶಕರು, ಆಯುಕ್ತರ ಕಚೇರಿ,ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ (ಸಂ.ದೂ. 9448836288), ಇವರು ಈ ಅಧ್ಯಯನದ ಹೆಚ್ಚುವರಿ ಮಾಹಿತಿಗೆ ಸಂಪರ್ಕಾಧಿಕಾರಿಗಳಾಗಿರುತ್ತಾರೆ.

**ದಿನಾಂಕ: 21-04-2014ರಂದು ನಡೆದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯಲ್ಲಿ ಅನುಮೋದನೆಯಾಗಿರುತ್ತದೆ.**

**ಸಹಿ/-**

ಮುಖ್ಯ ಮೌಲ್ಯ ಮಾಪನಾಧಿಕಾರಿ

**ಅನುಬಂಧ 2**

**ಕರ್ನಾಟಕ ಸರ್ಕಾರದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಇಲಾಖೆಯ "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ" 2008-2013**

**ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರ (ಕಮೌಪ್ರಾ)**

**ಪ್ರಶ್ನಾವಳಿ- ಪ್ರ 1 ಅ,ಆ,ಇ.ಈ.ಉ**

**ಕರ್ನಾಟಕ ಸರ್ಕಾರದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಇಲಾಖೆಯ ಕರ್ನಾಟಕ ಸರ್ಕಾರದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಇಲಾಖೆಯ ಅಧಿಕಾರಿಗಳಿಗೆ: ರಾಜ್ಯ ಮಟ್ಟದ ಸಮನ್ವಯ ಅಧಿಕಾರಿ-ಪ್ರ1ಅ/ ಜಿಲ್ಲಾ ಉಪ ನಿರ್ದೇಶಕರು (ಪಪಾ & ಪವೈ)-1ಆ / ತಾಲೂಕ ಮುಖ್ಯ ಪಶು ವೈದ್ಯಾಧಿಕಾರಿ-1ಇ /ಹೋಬಳಿಯ ಪಶು ವೈದ್ಯಾಧಿಕಾರಿ-1ಈ / ಗ್ರಾಮದ ಪಶು ವೈದ್ಯಾಧಿಕಾರಿ-1ಉ**

**ಭಾಗ-ಎ ಸಾಮಾನ್ಯ ಮಾಹಿತಿ**

| | | | | | |
|---|---|---|---|---|---|
| ಎ1 | ಇಲಾಖೆಯ ಹೆಸರು | | | | |
| ಎ 2 | ರಾಜ್ಯ ಮಟ್ಟದ ಸಮನ್ವಯ ಅಧಿಕಾರಿ ಹೆಸರು | | ಎ 3 | ಸಂಪರ್ಕ ಸಂಖ್ಯೆ | |
| ಎ 4 | ಜಿಲ್ಲಾ ಉಪ ನಿರ್ದೇಶಕರು (ಪಪಾ & ಪವೈ) ಹೆಸರು | | ಎ 5 | ಜಿಲ್ಲೆಯ ಹೆಸರು | ಸಂಪರ್ಕ ಸಂಖ್ಯೆ |
| ಎ 6 | ತಾಲೂಕ ಮುಖ್ಯ ಪಶು ವೈದ್ಯಾಧಿಕಾರಿ ಹೆಸರು | | ಎ 7 | ತಾಲ್ಲೂಕಿನ ಹೆಸರು | ಸಂಪರ್ಕ ಸಂಖ್ಯೆ |
| ಎ 8 | ಹೋಬಳಿಯ ಪಶು ವೈದ್ಯಾಧಿಕಾರಿ ಹೆಸರು | | ಎ 9 | ಹೋಬಳಿ/ಗ್ರಾಮದ ಹೆಸರು | ಸಂಪರ್ಕ ಸಂಖ್ಯೆ |

**ಭಾಗ-ಬಿ ಸಂದರ್ಶನಕ್ಕಾಗಿ ಪ್ರಶ್ನೆಗಳು:**

| | | |
|---|---|---|
| ಬಿ 1 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಯ ಕುರಿತು ನಿಮ್ಮ ಪ್ರಾಮಾಣಿಕ ಅಭಿಪ್ರಾಯ ಈ ಕೆಳಗೆ ತಿಳಿಸಿರುವ ಅಂಶಕ್ಕೆ ನೀಡಿ. | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ ) |
| | ಒಂದು ಲೀಟರ್‌ಗೆ ರೂ 4/- ರೈತರಿಗೆ ಪ್ರೋತ್ಸಾಹ ಧನ ಸರ್ಕಾರ ನೀಡುತ್ತಿರುವುದು, ಕಡಿಮೆ / ಹೆಚ್ಚಾಗಿದೆಯೆ? | ಕಡಿಮೆ [ ] ಹೆಚ್ಚು [ ]<br>ಕಡಿಮೆ ಎಂದು ಗುರಿತಿಸಿದಲ್ಲಿ, ಪ್ರೋತ್ಸಾಹ ಧನ ಎಷ್ಟಿರ ಬೇಕು ಗುರುತಿಸಿ?<br>ರೂ \| 5 \| 6 \| 7 \| 8 \| 9 \| 10<br>ಯಾವ ಕಾರಣಕ್ಕಾಗಿ ಪ್ರೋತ್ಸಾಹ ಧನ ಹೆಚ್ಚಿಸಬೇಕು, ತಿಳಿಸಿ?<br>ಎ.<br>ಬಿ.<br>ಸಿ. |
| ಬಿ2 | ನಿಮ್ಮಲ್ಲಿರುವ ದಾಖಲೆಗಳ ಪ್ರಕಾರ, ಪ್ರಸ್ತುತ ಒಂದು ಲೀಟರ್ ಹಾಲನ್ನು ಉತ್ಪಾದಿಸಲು, ಗ್ರಾಮಾಂತರ ಪ್ರದೇಶದಲ್ಲಿ, ತಗಲುವ ಬೆಲೆ ಎಷ್ಟು? | ರೂ. |
| ಬಿ 3 | ಒಂದು ಲೀಟರ್ ಹಾಲಿಗೆ ರೂ2/-, 4/- ಪ್ರೋತ್ಸಾಹ ಧನ ನೀಡುವುದಕ್ಕೆ ಪ್ರಸ್ತಾಪಿಸಿದಾಗ, | ರೂ. |

| | | |
|---|---|---|
| | ಗ್ರಾಮಾಂತರ ಪ್ರದೇಶದಲ್ಲಿ ಉತ್ಪಾದಿಸುವ ಹಾಲಿನ ಮೂಲ ಬೆಲೆ ಎಷ್ಟು ಪರಿಗಣಿಸಲಾಗಿದೆ? | |
| ಬಿ 4 | ಗ್ರಾಮಾಂತರ ಪ್ರದೇಶದಲ್ಲಿ ಹೈನು ಸಾಕಾಣಿಕೆಯ ಲೆಕ್ಕಾಚಾರ ಮಾಡಿದ ಆರ್ಥಿಕತೆಯ ವಿವರ ನಿಮ್ಮ ದಾಖಲೆಗಳ ಪ್ರಕಾರ ನೀಡಿ? | |
| ಬಿ 5 | ಇಲಾಖೆಯಿಂದ ಪ್ರೋತ್ಸಾಹ ಧನದ ಹುಂಡಿಯ ಮೋತ್ತವನ್ನು ಹಾಲು ಉತ್ಪಾದಕರಿಗೆ ಬಿಡುಗಡೆಗೊಳಿಸುವ ವಿವರವಾದ ವ್ಯವಸ್ಥೆಯನ್ನು ತಿಳಿಸಿ? | ನೀಡುವ ವಿವರಗಳನ್ನು ಹಂತಗಳನ್ನು ಬರೆಯಿರಿ? |
| ಬಿ 6 | ಸಾಮಾನ್ಯವಾಗಿ, ಪ್ರೋತ್ಸಾಹ ಧನದ ಬೇಡಿಕೆಯ ಹುಂಡಿಯನ್ನು ಸಲ್ಲಿಸಿದ ದಿನದಿಂದ, ಮೊತ್ತವನ್ನು ಬಿಡುಗಡೆಗೊಳಿಸಲು ಎಷ್ಟು ಅವಧಿ ಬೇಕಾಗಬಹುದು? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>1–2 ತಿಂಗಳು [ ] 6–7ತಿಂಗಳು [ ]<br>2–3 ತಿಂಗಳು [ ] 7–8 ತಿಂಗಳು [ ]<br>4–5 ತಿಂಗಳು [ ] 9–10 ತಿಂಗಳು [ ] |
| ಬಿ 7 | "ಹಾಲಿಗೆ ಪ್ರೋತ್ಸಾಹ ಧನ ನೀಡುವ ಸ್ಕೀಂ/ಯೋಜನೆ"ಯ ಅನುಷ್ಠಾನದ ಪ್ರಭಾವದಿಂದ ರಾಜ್ಯದಲ್ಲಿ ಹೈನುಗಾರಿಕೆಯ ಧನಾತ್ಮಕ ಅಭಿವೃದ್ಧಿ, ತಾವು ಪ್ರವಾಸದಲ್ಲಿದ್ದಾಗ / ಗ್ರಾಮಕ್ಕೆ ಭೇಟಿ ನೀಡಿದಾಗ, ಕಂಡು ಬಂದಿರುವುದೆ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಕಂಡು ಬಂದಿದೆ [ ] ಇಲ್ಲ [ ]<br>ಕಂಡು ಬಂದಿದ್ದರೆ, ವಿವರಗಳನ್ನು ನೀಡಿ?<br>ಅ.<br>ಆ. |
| ಬಿ 8 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಗೆ ಪೂರಕವಾಗಿ ಇಲಾಖೆಯಿಂದ ವಿಶೇಷವಾದ ಕಾರ್ಯಕ್ರಮಗಳನ್ನುಹಮ್ಮಿಕೊಂಡು ಅನುಷ್ಟಾನಗೊಳಿಸಲಾಗಿದೆಯೇ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಆಗಿದೆ [ ] ಇಲ್ಲಾ [ ]<br>ಇಲ್ಲವಾದಲ್ಲಿ, ಇದಕ್ಕೆ ಕಾರಣಗಳನ್ನು ತಿಳಿಸಿ.<br>ಅ.<br>ಆ.<br>ಇ.<br>ಅನುಷ್ಟಾನಗೊಳಿಸಲಾಗಿದ್ದರೆ, (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಅ. ರೈತರಿಗೆ ಕ್ಷೇತ್ರಬೇಟಿ [ ]<br>ಆ. ತರಬೇತಿ ನೀಡಿರುವುದು [ ]<br>ಇ. ಇತರೆ |
| ಬಿ 9 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಗೆ ವಿಶೇಶವಾದ ವಿಚಕ್ಷಣಾ–ಕಣ್ಗಾವಲು ಶಾಖೆಯು ಅಸ್ತಿತ್ವದಲ್ಲಿ ಇಲಾಖೆಯಲ್ಲಿ ಇರುವುದೆ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಇದೆ [ ] ಇಲ್ಲ [ ] |
| ಬಿ10 | ಯೋಜನೆಯ ಉಸ್ತುವಾರಿ ಹಾಗೂ ವಿಚಕ್ಷಣೆ/ ಕಣ್ಗಾವಲಿಗಾಗಿ ತಂತ್ರಾಂಶವನ್ನು ಅಭಿವೃದ್ದಿಪಡಿಸಿ ಉಪಯೋಗಿಸಲಾಗಿದೆಯೆ? | ಇದೆ [ ] ಇಲ್ಲ [ ] |

| | | |
|---|---|---|
| ಬಿ11 | ಈ ಯೋಜನೆಯಲ್ಲಿ ಯಾವುದೇ ಮಟ್ಟದಲ್ಲಾಗಲಿ ಪ್ರೋತ್ಸಾಹ ಧನವನ್ನು ಅನಧಿಕೃತವಾಗಿ ಹೆಚ್ಚುವರಿಯಾಗಿ ಬೇಡಿಕೆ ನೀಡಿ ಪಡೆದಿರುವ ಸಾಧ್ಯತೆ ಇದಯೇ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಇದೆ \| ಇಲ್ಲ<br>ಇದೆ, ಆಗಿದ್ದಲ್ಲಿ, ಕಾರಣಕ್ಕಾಗಿ ಈರೀತಿ ಗುರಿತಿಸಿ(√ )<br>ಅ. ಬೆರಳಚ್ಚುಮಾಡುವಾಗ ಅಥವ ಬರೆಯುವಾಗ ಆದ ತಪ್ಪಿನಿಂದ.<br>ಆ. ವಂಚನೆಯಿಂದ ಮಾಡಿರುವ ತಪ್ಪು.<br>ಇ. ಇತರೆ ಕಾರಣಗಳಿದಿಂದಾಗಿ– ತಿಳಿಸಿರುವಂತೆ ವಂಚನೆಯಿಂದ |
| ಬಿ12 | ಪ್ರೋತ್ಸಾಹ ಧನವನ್ನು ಅನಧಿಕೃತವಾಗಿ ಹೆಚ್ಚುವರಿಯಾಗಿ ಬೇಡಿಕೆ ನೀಡಿ ಪಡೆದಿರುವ ಸಾಧ್ಯತೆಯನ್ನು ತಡೆಗಟ್ಟಲು, ಇಲಾಖೆಯ ಮಟ್ಟದಲ್ಲಿ ಪರಿಶೀಲನೆ, ಶೋಧನೆ ಮತ್ತು ಸರಿಪಡಿಸುವಿಕೆಯ ವ್ಯವಸ್ಥೆ ಇರುವುದೆ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಇದೆ \| ಇಲ್ಲ<br>ಇದೆ, ಆಗಿದ್ದಲ್ಲಿ, ಸಂಕ್ಷಿಪ್ತವಾಗಿ ವಿವರಗಳನ್ನು ನೀಡಿ.<br>ಅ. ಕ್ಷೇತ್ರಮಟ್ಟದಲ್ಲಿ ಅಧಿಕಾರಿಗಳಿಂದ ಉಸ್ತುವಾರಿ.<br>ಆ. ಹಾಲಿನ ಒಕ್ಕೂಟದ ಸಿಬ್ಬಂದಿಯಿಂದ ಆಡಿಟ್ ಮಾಡಿವುದು.<br>ಇ. ಅಪಾದನೆಗಳ ಅನ್ವಯ ಪರಿಶೀಲನೆ ಮತ್ತು ಸೂಕ್ತ ಕ್ರಮವಹಿಸುವುದು.<br>ಈ. ಇತರೆ<br>ಇಲ್ಲದಿದ್ದಲ್ಲಿ, ಸಂಕ್ಷಿಪ್ತವಾಗಿ ಕಾರಣವನ್ನು ಬರೆಯಿರಿ. |
| ಬಿ13 | ಈ ಯೋಜನೆಯನ್ನು ಹೆಚ್ಚು ಸಮರ್ಥವಾಗಿ ಅನುಷ್ಟಾನ ಮಾಡಲು, ಹಾಗೂ ಇಚ್ಚಿಸಿದ ಉದ್ದೇಶಗಳನ್ನು ಸಾಧಿಸಲು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ? | ಅಧಿಕಾರಿಗಳು ನೀಡುವ ಸಲಹೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ?<br>ಅ.<br>ಆ<br>ಇ |
| ಬಿ14 | ತಮ್ಮ ಕ್ಷೇತ್ರದಲ್ಲಿ ಹಾಲಿನ ಪರಿಷ್ಕರಣೆ/ಸಂಸ್ಕರಣೆಯ ಚಟುವಟಿಕೆಗಳು ಈ ಯೋಜನೆಯ ಪ್ರಭಾವದಿಂದ ಬದಲಾವಣೆ/ಹೆಚ್ಚಾಗಿದೆಯೆ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಹೌದು \| ಇಲ್ಲಾ<br>ಹೌದು ಆದಲ್ಲಿ, ವಿವರ ನೀಡಿ?<br>ಅ.<br>ಆ |
| ಬಿ15 | ಈ ಯೋಜನೆಗೆ ಸಂಭಂದಿಸಿದ ರಾಜ್ಯಮಟ್ಟದ/ ಜಿಲ್ಲಾಮಟ್ಟದ/ ತಾಲ್ಲೂಕುಮಟ್ಟದ ಪ್ರಗತಿ ಪರಿಶೀಲನಾ ಸಮಿತಿಗಳು ಮಾಸಿಕ / ಅರ್ಧವಾರ್ಷಿಕ / ವಾರ್ಷಿಕ ಸಭೆಗಳನ್ನು ನೆಡೆಸಲಾಗುತ್ತಿದೆಯೇ? | (ನಿಮ್ಮ ಅಭಿಪ್ರಾಯಕ್ಕೆ ಈರೀತಿ ಗುರಿತಿಸಿ √ )<br>ಹೌದು \| ಇಲ್ಲ<br>ಹೌದು ಆದಲ್ಲಿ, ಸಭೆಗಳಲ್ಲಿ ತೆಗೆದುಕೊಂಡಿರುವ ಪ್ರಮುಖ ನಿರ್ಣಯಗಳ ವಿವರಗಳನ್ನು ನೀಡಿ? ಸಭೆಗಳ ನಿರ್ಣಯಗಳ ಪ್ರತಿಗಳನ್ನು ಪಡೆಯಿರಿ?<br>ಅ.<br>ಆ. |
| ಬಿ16 | ಸಂದರ್ಶಕರ ಹೆಸರು | ಸಹಿ |
| ಬಿ17 | ಸಂದರ್ಶನದ ದಿನಾಂಕ | |

**ಅನುಬಂಧ 3**

**ಕರ್ನಾಟಕ ಸರ್ಕಾರದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಇಲಾಖೆಯ "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ" 2008-2013**

**ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರ (ಕಮೌಪ್ರಾ)**

**ಪ್ರಶ್ನಾವಳಿ- ಪ್ರ 2**

**----------ಜಿಲ್ಲಾ ಹಾಲಿನ ಒಕ್ಕೂಟದ, ವ್ಯವಸ್ಥಾಪಕ ನಿರ್ದೇಶಕರಿಗಾಗಿ**

**ಭಾಗ-ಎ: ಸಾಮಾನ್ಯ ಮಾಹಿತಿ**

| | | | | | |
|---|---|---|---|---|---|
| ಎ1 | ಹಾಲಿನ ಒಕ್ಕೂಟದ ಹೆಸರು | | ಎ 2 | ಅಂಚೆ ವಿಳಾಸ | |
| ಎ 3 | ವ್ಯವಸ್ಥಾಪಕ ನಿರ್ದೇಶಕರ ಹೆಸರು | | ಎ 4 | ಸಂಪರ್ಕದ ಸಂಖ್ಯೆ. | |

**ಭಾಗ-ಬಿ: ಮಾಧ್ಯಮಿಕ ದತ್ತಾಂಶ**

| | | | | | | | |
|---|---|---|---|---|---|---|---|
| ಬಿ1 | ಜಿಲ್ಲಾ ಒಕ್ಕೂಟದಲ್ಲಿ, ವಾರ್ಷಿಕವಾಗಿ ನೊಂದಾಯಿಸಲಾಗಿರುವ ಹಾಲು ಉತ್ಪಾದಕರ ಸಂಘಗಳ ಸಂಖ್ಯೆ ಮತ್ತು ಹಾಲು ಉತ್ಪಾದಕರ ಸಂಖ್ಯೆ ಮಾಹಿತಿ ನೀಡಿ? | | | | | | |
| | ವರ್ಷ | ಹಾಲು ಉತ್ಪಾದಕರ ಸಂಘಗಳು | ಮಹಿಳೆಯರು ಸಂಖ್ಯೆ | ಪರಿಶಿಷ್ಟಜಾತಿ ಸಂಖ್ಯೆ | ಪರಿಶಿಷ್ಟ ಪಂಗಡ ಸಂಖ್ಯೆ | | |
| | 2007-2008 | | | | | | |
| | 2008-2009 | | | | | | |
| | 2010-2011 | | | | | | |
| | 2011-2012 | | | | | | |
| | 2012-2013 | | | | | | |
| | ಒಟ್ಟು | | | | | | |
| ಬಿ2 | ನೊಂದಾಯಿತ ಹಾಗೂ, ನೊಂದಾಯಿತರಲ್ಲದ ಹಾಲು ಉತ್ಪಾದಕರಿಂದ ಖರೀದಿಸಿದ ಒಟ್ಟು ಹಾಲಿನ ಪ್ರಮಾಣ ಲೀಟರ್ ನಲ್ಲಿ ಮಾಹಿತಿಯನ್ನು ನೀಡಿ? | | | | | | |
| | | ನೊಂದಾಯಿತ ಸದಸ್ಯರಿಂದ ಲೀಟರ್‌ನಲ್ಲಿ | | | ಒಟ್ಟು ಲೀಟರ್ ನಲ್ಲಿ | ಒಟ್ಟು ಖರೀದಿ ಲೀಟರ್ ನಲ್ಲಿ | ಒಟ್ಟು ನೊಂದಾಯಿ ತರಲ್ಲದವರಿಂದ ಲೀಟರ್‌ನಲ್ಲಿ |
| | | ಮಹಿಳೆಯವರಿಂದ | ಪರಿಶಿಷ್ಟ ಜಾತಿಯವರಿಂದ | ಪರಿಶಿಷ್ಟ ಪಂಗಡ'ದವರಿಂದ | | | |
| | 2007-2008 | | | | | | |
| | 2008-2009 | | | | | | |
| | 2009-2010 | | | | | | |
| | 2010-2011 | | | | | | |
| | 2011-2012 | | | | | | |
| | 2012-2013 | | | | | | |
| | ಒಟ್ಟು | | | | | | |
| ಬಿ3 | ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆಯ ಅಡಿಯಲ್ಲಿ, ವಾರ್ಷಿಕ ಹಾಗೂ ಮಾಸಿಕವಾರು ಹಾಲು ಉತ್ಪಾದಕರ ಸಂಘಗಳ ಹಣದ ಮೊತ್ತ ಹಾಗೂ ಬೇಡಿಕೆಯ ಪ್ರಸ್ತಾವನೆಯನ್ನು ಪಪಾ & ಪಸಂ, ಇಲಾಖೆಗೆ ಸಲ್ಲಿಸಿರುವ ದಿನಾಂಕ, ಹಣದ ಮೊತ್ತ ಪಡೆದಿರುವುದು ಮತ್ತು ದಿನಾಂಕ ಹಾಗೂ ಸಂಘಗಳಿಗೆ ದಿನಾಂಕ ಸಹಿತ ಮೊತ್ತ ನೀಡಿರುವುದು/ವರ್ಗಮಾಡಿರುವುದರ ವಿವರ ನೀಡಿ? | | | | | | |

| ವರ್ಷ 2009-2010 | | | |
|---|---|---|---|
| | ಪ್ರಸ್ತಾವನೆ ವಿವರ/ ಬೇಡಿಕೆ | ಪ್ರೋತ್ಸಾಹ ಧನ ಪಡೆದಿರುವುದು | ಪ್ರೋತ್ಸಾಹ ಧನ ನೀಡಿರುವುದು/ವರ್ಗಾಯಿಸಿರುವುದು |

| ತಿಂಗಳು | ಮೊತ್ತ (ರೂ) | ದಿನಾಂಕ | ಮೊತ್ತ (ರೂ) | ದಿನಾಂಕ | ಮೊತ್ತ (ರೂ) | ದಿನಾಂಕ |
|---|---|---|---|---|---|---|
| ಜುಲೈ | | | | | | |
| ಡಿಸೆಂಬರ್ | | | | | | |

| ವರ್ಷ 2011-2012 | | | | | | |
|---|---|---|---|---|---|---|
| | ಪ್ರಸ್ತಾವನೆ ವಿವರ/ ಬೇಡಿಕೆ | | ಪ್ರೋತ್ಸಾಹ ಧನ ಪಡೆದಿರುವುದು | | ಪ್ರೋತ್ಸಾಹ ಧನ ನೀಡಿರುವುದು/ವರ್ಗಾಯಿಸಿರುವುದು | |
| ತಿಂಗಳು | ಮೊತ್ತ (ರೂ) | ದಿನಾಂಕ | ಮೊತ್ತ (ರೂ) | ದಿನಾಂಕ | ಮೊತ್ತ (ರೂ) | ದಿನಾಂಕ |
| ಜುಲೈ | | | | | | |
| ಡಿಸೆಂಬರ್ | | | | | | |

| ಅಭಿಪ್ರಾಯ: | ವರ್ಷ | 2009-2010 | 2011-2012 |
|---|---|---|---|
| ಅ. ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆಯ ಅಡಿಯಲ್ಲಿ, ಹಾಲು ಉತ್ಪಾದಕರ ಸಂಘಗಳ ಹಣದ ಮೊತ್ತವನ್ನು, ಪಪಾ & ಪವೈ, ಇಲಾಖೆಯಿಂದ್ ಹಾಲಿನ ಒಕ್ಕೂಟಕ್ಕೆ ಪಡೆಯಲು ಎಷ್ಟು ದಿನಗಳು ಹಿಡಿದಿದೆ? | ಕನಿಷ್ಟ | | |
| | ಗರಿಷ್ಟ | | |
| ಆ. ಗ್ರಾಂಟ್ ಹಣವನ್ನು ಹಾಲಿನ ಒಕ್ಕೂಟದಿಂದ, ಹಾಲು ಉತ್ಪಾದಕರ ಸಂಘಗಳು ಪಡೆಯಲು ಎಷ್ಟು ದಿನ ಹಿಡಿದಿದೆ? | ಕನಿಷ್ಟ | | |
| | ಗರಿಷ್ಟ | | |
| ಇ. ಮೊತ್ತ ಪಡೆಯಲು ಮತ್ತು ನೀಡಲು/ವರ್ಗಾಯಿಸಿರುವುದರಲ್ಲಿ ವ್ಯತ್ಯಾಸಗಳು ಕಂಡುಬಂದಿದ್ದರೆ, ಈ ಪರಿಸ್ಥಿತಿಗೆ ಕಾರಣಗಳನ್ನು ನೀಡಿ? | ಅ. | | |
| | ಆ. | | |

**ಭಾಗ-ಸಿ: ಸಂದರ್ಶನಕ್ಕಾಗಿ ಪ್ರಶ್ನೆಗಳು:**

| | | | | | | | | | |
|---|---|---|---|---|---|---|---|---|---|
| ಸಿ1 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಯ ಕುರಿತು ನಿಮ್ಮ ಅಭಿಪ್ರಾಯ ಈ ಕೆಳಗೆ ತಿಳಿಸಿರುವ ಅಂಶಕ್ಕೆ ನೀಡಿ.<br>ಒಂದು ಲೀಟರ್ ಹಾಲಿಗೆ ರೂ 4/- ಪ್ರೋತ್ಸಾಹ ಧನ ನೀಡುತ್ತಿರುವುದು, ತಮಗೆ ಸಂತೋಷ / ಸಂತೃಪ್ತಿ ಇದೆಯೆ? | ಅಭಿಪ್ರಾಯ: ( ಗುರಿತಿಸಿ √) | | | | | | | |
| | | ಇದೆ | | | ಇಲ್ಲ | | | | |
| | | ಇಲ್ಲವಾದಲ್ಲಿ, ಪ್ರೋತ್ಸಾಹ ಧನ ಎಷ್ಟು ಇರಬೇಕು ಎಂಬುದು ಗುರಿತಿಸಿ? | | | | | | | |
| | | ರೂ. ಗಳಲ್ಲಿ | 5/- | 6/- | 7/- | 8/- | 9/- | 10/- | --- |
| | | ಏತಕ್ಕಾಗಿ, ವ್ಯ.ನಿ ನೀಡಿರುವ ಕಾರಣ ? | | | | | | | |
| | | ಅ | | | | | | | |
| | | ಆ | | | | | | | |
| | | ಇ. | | | | | | | |
| | | ಜ. | | | | | | | |
| ಸಿ2 | ಗ್ರಾಮಾಂತರ ಪ್ರದೇಶದಲ್ಲಿ ಒಂದು ಲೀಟರ್ ಹಾಲಿನ ಉತ್ಪಾದನೆಗೆ ತಗುಲುವ ವೆಚ್ಚ (ರೂ ಗಳಲ್ಲಿ) ನಿಮ್ಮ ದಾಖಲೆಗಳ ಪ್ರಕಾರ ವಿವರ ನೀಡಿ? | 2007-2008 | ರೂ. | | | | | | |
| | | 2008-2009 | ರೂ. | | | | | | |
| | | 2009-2010 | ರೂ. | | | | | | |
| | | 2010-2011 | ರೂ. | | | | | | |
| | | 2011-2012 | ರೂ. | | | | | | |
| | | 2012-2013 | ರೂ. | | | | | | |
| | | 2013-2014 | ರೂ. | | | | | | |
| | | 2014-2015 | ರೂ. | | | | | | |
| ಸಿ3 | ಹಾಲಿಗೆ ಪ್ರೋತ್ಸಾಹ ಧನ ಒಂದು ಲೀಟರಿಗೆ ರೂ.2/- ಅಥವ ರೂ.4/-ಗಳನ್ನು | | | | | | | | |

| | | |
|---|---|---|
| | ಪ್ರಸ್ತಾಪಿಸುವಾಗ, ಗ್ರಾಮಾಂತರ ಪ್ರದೇಶದಲ್ಲಿ ಒಂದು ಲೀಟರ್ ಹಾಲಿನ ಉತ್ಪಾದನೆಗೆ ಪರಿಗಣಿಸಿದ ಮೂಲ/ಕನಿಷ್ಠ ಬೆಲೆಯ ವಿವರ ನೀಡಿ? | |
| ಸಿ4 | ಗ್ರಾಮಾಂತರ ಪ್ರದೇಶದಲ್ಲಿ ಹೈನುಗಾರಿಕೆಯ, ಇತ್ತೀಚಿನ ಆರ್ಥಿಕತೆಯ ಲೆಕ್ಕಾಚಾರದ ವಿವರಗಳನ್ನು ನಿಮ್ಮ ಕಡತಗಳ ಪ್ರಕಾರ ನೀಡಿ? | |
| ಸಿ5 | ಹಾಲಿಗೆ ಪ್ರೋತ್ಸಾಹ ಧನವನ್ನು ರೈತರಿಗೆ/ಅವರ ಖಾತೆಗೆ ಪ್ರತೀ ತಿಂಗಳು, ಸಂಪೂರ್ಣವಾಗಿ ಈಸಿಎಸ್ ಮೂಲಕ ನೀಡಲಾಗುತ್ತದೆಯೆ /ವರ್ಗಮಾಡಲಾಗುತ್ತಿದೆಯೆ? | ( ಗುರಿತಿಸಿ √)<br>ಹೌದು \|   \| ಇಲ್ಲ \|  <br>ಇಲ್ಲವಾದಲ್ಲಿ, ಏಕೆ? ವ್ಯ.ನಿ ಹೇಳಿಕೆಗಳ ವಿವರ. |
| ಸಿ6 | ಹಾಲಿಗೆ ಪ್ರೋತ್ಸಾಹ ಧನವನ್ನು ಯಾವುದೇ ಮಟ್ಟದಲ್ಲಿ, ಯಾವುದೇ ಕಾರಣದಿಂದಾಗಿ ಹೆಚ್ಚುವರಿ/ಕಡಿಮೆ ಮೊತ್ತ ಬೇಡಿಕೆಯಾಗಿರುವ ಸಾಧ್ಯತೆ ಇದೆಯೆ? | ( ಗುರಿತಿಸಿ √)<br>ಇದೆ \|   \| ಇಲ್ಲ \|  <br>ಸಾಧ್ಯತೆ ಇರುವುದಾದರೆ, ಇದಕ್ಕೆ ಕಾರಣಗಳನ್ನು ನೀಡಿ?<br>ಅ.<br>ಆ. |
| ಸಿ7 | ಹಾಲಿಗೆ ಪ್ರೋತ್ಸಾಹ ಧನ, ಅನಧಿಕೃತ ಹೆಚ್ಚುವರಿ ಮೊತ್ತ ಬೇಡಿಕೆಯಾಗುವದನ್ನು ತಡೆಗಟ್ಟಲು ಹಾಲಿನ ಒಕ್ಕೂಟದ ಮಟ್ಟದಲ್ಲಿ ಪರಿಶೀಲನೆ ಮತ್ತು ಸರಿದೂಗಿಸುವ ವ್ಯವಸ್ಥೆಗಳೇನಾದರೂ ಇದೆಯೆ? ಜೊತೆಗೆ ಹೆಚ್ಚುವರಿ ಮೊತ್ತ ಬೇಡಿಕೆಯಾಗುವದನ್ನು, ಮೊತ್ತ ನೀಡುವಲ್ಲಿ / ವರ್ಗಮಾಡುವಲ್ಲಿ ವಿಳಂಬನೀತಿ ಅನುಸರಿಸುವುದು, ಹಾಗೂ ಮೋಸ / ವಂಚನೆ ಮಾಡಿರುವುದಕ್ಕೆ ಏನಾದರೂ ಕ್ರಮಜರುಗಿಸಲಾಗಿದೆಯೆ? | ( ಗುರಿತಿಸಿ √)<br>ಹೌದು \|   \| ಇಲ್ಲ \|  <br>ಕ್ರಮ ತೆಗೆದುಕೊಂಡಿದ್ದರೆ ( ಗುರಿತಿಸಿ √)<br>ಅ. ಕಾಲಾನು ಕ್ರಮ ಆಡಿಟ್ ಮಾಡಿರುವುದು<br>ಆ. ಸಂಘದ ಮಟ್ಟದಲ್ಲಿ ಮೊತ್ತ ಬೇಡಿಕೆ ಪಟ್ಟಿಯನ್ನು ಪರಿಶೀಲನೆ ಮಾಡುವುದು<br>ಇ. ವಿಸ್ತರಣಾ ಅಧಿಕಾರಿಗಳಿಂದ ಬೇಡಿಕೆ ವಿವರಗಳ ಪರಿಸೀಲನೆ<br>ಈ. ಇನ್ನೇನಾದರೂ ಇದ್ದಲ್ಲಿ |
| ಸಿ8 | ಈ ಸ್ಕೀಂ/ಯೋಜನೆಯನ್ನು ಹೆಚ್ಚು ಸಮರ್ಥವಾಗಿ ಅನುಷ್ಠಾನ ಮಾಡಲು, ಹಾಗೂ ಇಚ್ಚಿಸಿದ ಉದ್ದೇಶಗಳನ್ನು ಸಾಧಿಸಲು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ? | ಅಧಿಕಾರಿಗಳು ನೀಡುವ ಸಲಹೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ?<br>ಅ. ಗ್ರಾಮಾಂತರ ಪ್ರದೇಶದಲ್ಲಿ ಹಾಲಿನ ಉತ್ಪಾದನಾ ದರ ಹಾಗೂ ನಿಗದಿ ಪಡಿಸಿದ ಖರೀದಿ ದರ ಪರಿಗಣಿಸಿ, ಪ್ರೋತ್ಸಾಹ ಧನ ನಿಗದಿ ಪಡಿಸುವ ಕುರಿತು.<br>ಆ. ಪ್ರೋತ್ಸಾಹ ಧನ ನೀಡುವ, ಆರ್ಥಿಕ ನಿರ್ವಹಣೆ ಮತ್ತು ಎಚ್ಚರಿಸುವ ವ್ಯವಸ್ಥೆ ಕುರಿತು.<br>ಇ. ಮೂಲಭೂತ ಸೌಕರ್ಯ ಮತ್ತು ಮಾನವ ಸಂಪನ್ಮೂಲ ವಸ್ತುಸ್ಥಿತಿ ಕುರಿತು.<br>ಈ. ಇತರೆ. |
| ಸಿ9 | ಸಂದರ್ಶಕರ ಹೆಸರು | ಸಹಿ |
| ಸಿ10 | ಸಂದರ್ಶನದ ದಿನಾಂಕ | |

**ಅನುಬಂಧ 4**

**ಕರ್ನಾಟಕ ಸರ್ಕಾರದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಇಲಾಖೆಯ "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ" 2008-2013**

**ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರ (ಕಮೌಪ್ರಾ)**

**ಪ್ರಶ್ನಾವಳಿ- ಪ್ರ 3**

**ಗ್ರಾಮಾಂತರ ಮಟ್ಟದಲ್ಲಿ, ಹಾಲು ಉತ್ಪಾದಕ "ಗುಂಪು ರೈತರಿಗೆ" ಸಂಭಂದಿಸಿದ ______________ಹಾಲು ಉತ್ಪಾದಕರ ಸಂಘದ "ಕಾರ್ಯದರ್ಶಿಯವರಿಗೆ"**

**ಭಾಗ-ಎ: ಸಾಮಾನ್ಯ ಮಾಹಿತಿ:**

| | | | | | |
|---|---|---|---|---|---|
| ಎ1. | ಹಾಲಿನ ಒಕ್ಕೂಟದ ಹೆಸರು | | ಎ2 | ಹಾಲು ಉತ್ಪಾದಕರ ಸಂಘದ ಹೆಸರು ಮತ್ತು ವಿಳಾಸ | |
| ಎ3 | ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿಯವರ ಹೆಸರು | | ಎ4 | ಸಂಪರ್ಕಕ್ಕೆ ದೂರವಾಣಿ ಸಂಖ್ಯೆ/ ಮೋಬೈಲ್ ಸಂಖ್ಯೆ | |
| ಎ5 | ನೊಂದಾವಣೆ ಸಂಖ್ಯೆ. | | ಎ6 | ಗ್ರಾಮದ ಹೆಸರು | |

**ಭಾಗ-ಬಿ: "ಮಾಧ್ಯಮಿಕ ದತ್ತಾಂಶ" :**

| ಬಿ1 | ಹಾಲು ಉತ್ಪಾದಕರ ಸಂಘಕ್ಕೆ ಹಾಲು ಹಾಕುತ್ತಿರುವ ರೈತರ ಸಂಖ್ಯೆಯ ವಾರ್ಷಿಕ ವಿವರ ನೀಡಿ? ಜೊತೆಗೆ ಪಜಾ, ಪಪಂ ಮತ್ತು ಒಟ್ಟು ವಿವರ ನೀಡಿ? | ವರ್ಷ | ನೊಂದಾಯಿತ ಪುರುಷರು | | | ನೊಂದಾಯಿತ ಮಹಿಳೆಯರು | | | ಒಟ್ಟು |
|---|---|---|---|---|---|---|---|---|---|
| | | | ಇತರೆ | ಪಜಾ | ಪಪಂ | ಇತರೆ | ಪಜಾ | ಪಪಂ | |
| | ಅ.ಯೋಜನೆ ಅನುಷ್ಟಾನ ಇಲ್ಲದ ಅವಧಿಯಲ್ಲಿ | 2007-2008 | | | | | | | |
| | ಆ.ಹಾಲಿಗೆ ಪ್ರೋತ್ಸಾಹ ಧನ ಯೋಜನೆಯ ಅವಧಿಯಲ್ಲಿ | 2008-2009 | | | | | | | |
| | | 2009-2010 | | | | | | | |
| | | 2010-2011 | | | | | | | |
| | | 2011-2012 | | | | | | | |
| | | 2012-2013 | | | | | | | |
| | | | | | | | | | |
| | | ಒಟ್ಟು | | | | | | | |
| ಗಮನಿಸಿದ ಅಂಶಗಳು:<br>ಅ. ಹಾಲು ಉತ್ಪಾದಕರ ಸಂಘಕ್ಕೆ ಹಾಲು ಹಾಕುತ್ತಿರುವ ರೈತರ ಸಂಖ್ಯೆಯು ಹೆಚ್ಚಿರುವುದನ್ನು 2007-08ಸಾಲಿಗೆ ಹೋಲಿಸಿ ಬರೆಯಿರಿ | | ಕನಿಷ್ಠ: | | | | | | | |
| | | ಗರಿಷ್ಠ: | | | | | | | |
| ಆ. ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆಯ ಖಚಿತವಾದ ಪ್ರಭಾವ ಪರಿಶಿಷ್ಠ ಜಾತೀ ಹಾಗೂ ಪರಿಶಿಷ್ಠ ಪಂಗಡದವರ ಮತ್ತು ಇತರೆ ಹಾಲು ಉತ್ಪಾದಕರ ಮೇಲೆ ಇದೆಯೆ? | | ಅಭಿಪ್ರಾಯ ( ಗುರಿತಿಸಿ √) | | | | | | | |
| | | ಇದೆ | | | | ಇಲ್ಲ | | | |

| ಬಿ2 | ಹಾಲು ಉತ್ಪಾದಕರಿಂದ ಪಡೆದ ಒಟ್ಟು ಹಾಲಿನ ವಾರ್ಷಿಕ ವಿವರವನ್ನು(ಲೀಟರ್ ನಲ್ಲಿ) ನೀಡಿ? | ವರ್ಷ | ನೊಂದಾಯಿತ ಪುರುಷರು | | | ನೊಂದಾಯಿತ ಮಹಿಳೆಯರು | | | ಒಟ್ಟು |
|---|---|---|---|---|---|---|---|---|---|
| | | | ಇತರೆ | ಪಜಾ | ಪಪಂ | ಇತರೆ | ಪಜಾ | ಪಪಂ | |
| | ಅ. ಯೋಜನೆ ಅನುಷ್ಟಾನ | | | | | | | | |

| | | | | | | | | | |
|---|---|---|---|---|---|---|---|---|---|
| | ಇಲ್ಲದ ಅವಧಿಯಲ್ಲಿ ಎಷ್ಟು? | 2007-2008 | | | | | | | |
| | ಆ. ಹಾಲಿಗೆ ಪ್ರೋತ್ಸಾಹ ಧನ ಯೋಜನೆಯ ಅನುಷ್ಟಾನ ಅವಧಿಯಲ್ಲಿ ಎಷ್ಟು? | 2008-2009 | | | | | | | |
| | | 2009-2010 | | | | | | | |
| | | 2010-2011 | | | | | | | |
| | | 2011-2012 | | | | | | | |
| | | 2012-2013 | | | | | | | |
| | | | | | | | | | |
| | | | | | | | | | |
| ಗಮನಿಸಿದ ಅಂಶಗಳು:<br>ಅ. ಹಾಲು ಉತ್ಪಾದಕರ ಸಂಘಕ್ಕೆ ಹಾಲು ಹಾಕಿರುವ ಒಟ್ಟು ಸಂಖ್ಯೆಯು ಹೆಚ್ಚಿರುವುದನ್ನು 2007-08 ಸಾಲಿಗೆ ಹೋಲಿಸಿ ಬರೆಯಿರಿ | | ಕನಿಷ್ಠ: | | | | | | | |
| | | ಗರಿಷ್ಠ: | | | | | | | |

| | | | | |
|---|---|---|---|---|
| ಆ. ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆಯ ಖಚಿತವಾದ/ಧನಾತ್ಮಕವಾದ ಪ್ರಭಾವ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ಮತ್ತು ಇತರೆ ಹಾಲು ಉತ್ಪಾದಕರ ಮೇಲೆ ಇದೆಯೆ? | ಅಭಿಪ್ರಾಯ (ಗುರಿತಿಸಿV) | | | |
| | ಇದೆ | | ಇಲ್ಲ | |
| | ಇದೆ, ಆದಲ್ಲಿ, ಆಗಿರುವ ಪ್ರಭಾವದ ಪ್ರಮಾಣವನ್ನು ತಿಳಿಸಿ? | | | |

| | | | |
|---|---|---|---|
| ಬಿ3 | ಒಂದು ಲೀಟರ್ ಹಾಲಿನ ಖರೀದಿ ದರದ ವಿವರ ರೂ.ಗಳಲ್ಲಿ ತಿಳಿಸಿ? | | ರೂ.ಗಳಲ್ಲಿ |
| | ಅ. ಯೋಜನೆ ಅನುಷ್ಟಾನ ಇಲ್ಲದ ಅವಧಿಯಲ್ಲಿ ಎಷ್ಟು? | 2007-2008 | |
| | ಆ. ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ ಯೋಜನೆಯ ಅನುಷ್ಟಾನ ಅವಧಿಯಲ್ಲಿ ಎಷ್ಟು? | 2008-2009 | |
| | | 2009-2010 | |
| | | 2010-2011 | |
| | | 2011-2012 | |
| | | 2012-2013 | |
| | | | |
| ಬಿ4 | ಹಾಲಿಗೆ ಪ್ರೋತ್ಸಾಹ ಧನ ಯೋಜನೆಯ, ವಾರ್ಷಿಕ ಮತ್ತು ಮಾಸಿಕ ಧನದ ಮೊತ್ತದ ಬೇಡಿಕೆ ಹಾಗೂ ಅದರ ದಿನಾಂಕ, ಒಕ್ಕೂಟದಿಂದ ಧನದ ಮೊತ್ತ ಪಡೆದಿರುವುದು ಹಾಗೂ ಅದರ ದಿನಾಂಕ, ಮತ್ತು ರೈತರಿಗೆ ಪಾವತಿಸಿದ ಧನದ ಮೊತ್ತ ಹಾಗೂ ಅದರ ದಿನಾಂಕ ವಿವರ ನೀಡಿ? | | |

ವರ್ಷ 2009 - 2010

| | ಬೇಡಿಕೆ | | ಪಡೆದಿರುವುದು | | ಪಾವತಿ | |
|---|---|---|---|---|---|---|
| ತಿಂಗಳು | ಮೊತ್ತ (ರೂಗಳಲ್ಲಿ) | ದಿನಾಂಕ | ಮೊತ್ತ (ರೂಗಳಲ್ಲಿ) | ದಿನಾಂಕ | ಮೊತ್ತ (ರೂಗಳಲ್ಲಿ) | ದಿನಾಂಕ |
| ಜುಲೈ | | | | | | |
| ಡಿಸೆಂಬರ್ | | | | | | |

ವರ್ಷ 2011-2012

| | ಬೇಡಿಕೆ | | ಪಡೆದಿರುವುದು | | ಪಾವತಿ | |
|---|---|---|---|---|---|---|
| ತಿಂಗಳು | ಮೊತ್ತ (ರೂಗಳಲ್ಲಿ) | ದಿನಾಂಕ | ಮೊತ್ತ (ರೂಗಳಲ್ಲಿ) | ದಿನಾಂಕ | ಮೊತ್ತ (ರೂಗಳಲ್ಲಿ) | ದಿನಾಂಕ |
| ಜುಲೈ | | | | | | |

| ಡಿಸೆಂಬರ್ | | | | | | |
|---|---|---|---|---|---|---|
| ಗಮನಿಸಿದ ಅಂಶಗಳು: | | | ವರ್ಷ | 2009-2010 | | 2011-2012 |
| ಅ. ಪ್ರೋತ್ಸಾಹ ಧನದ ಬೇಡಿಕೆಯ ಮೊತ್ತವನ್ನು ಸಂಘವು ಒಕ್ಕೂಟದಿಂದ ಪಡೆಯುವುದಕ್ಕೆ ತೆಗೆದುಕೊಂಡ ದಿನಗಳು. | | | ಕನಿಷ್ಠ: | | | |
| | | | ಗರಿಷ್ಠ: | | | |
| ಆ. ಪ್ರೋತ್ಸಾಹ ಧನದ ಬೇಡಿಕೆಯ ಮೊತ್ತವನ್ನು ಸಂಘವು ರೈತರಿಗೆ ಪಾವತಿಸಲು ತೆಗೆದುಕೊಂಡ ದಿನಗಳು. | | | ಕನಿಷ್ಠ: | | | |
| | | | ಗರಿಷ್ಠ: | | | |
| ಇ. ಮೊತ್ತ ಪಡೆಯುವಲ್ಲಿ ಅಥವ ಪಾವತಿಸುವಲ್ಲಿ ಅಸಮಾನ್ಯವಾದ ತಡವಾಗಿದ್ದಲ್ಲಿ ಇದಕ್ಕೆ ಕಾರಣಗಳನ್ನು ನೀಡಿ? | | | ಅ. | | | |
| | | | ಆ. | | | |
| ಈ. ಪಡೆದ ಅಥವ ಪಾವತಿಸಿದ ಮೊತ್ತದಲ್ಲಿ ವ್ಯತ್ಯಾಸಗಳು ಕಂಡುಬಂದರೆ ಅದಕ್ಕೆ ಕಾರಣಗಳನ್ನು ನೀಡಿ? | | | ಅ. | | | |
| | | | ಆ. | | | |

**ಭಾಗ-ಸಿ: ಸಂದರ್ಶನದ ಪ್ರಶ್ನೆಗಳು:**

| | | | |
|---|---|---|---|
| | | ವರ್ಷ | ರೂ ಗಳಲ್ಲಿ |
| ಸಿ1 | ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆಯ ಅನುಷ್ಠಾನಕ್ಕೆ ಮುಂಚೆ ಮತ್ತು ಅನುಷ್ಠಾನದ ಅವಧಿಯಲ್ಲಿ ಹಾಲು ಉತ್ಪಾದಕರ ಸಂಘ ಪಡೆದ ನಿವ್ವಳ ಲಾಭದ ವಿವರ ನೀಡಿ? | 2007-2008 | |
| | | 2008-2009 | |
| | | 2009-2010 | |
| | | 2010-2011 | |
| | | 2011-2012 | |
| | | 2012-2013 | |
| | | | |

| | | | | | | | | | | | | | |
|---|---|---|---|---|---|---|---|---|---|---|---|---|---|
| ಸಿ2 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಯ ಕುರಿತು ನಿಮ್ಮ ಅಭಿಪ್ರಾಯ ಈ ಕೆಳಗೆ ತಿಳಸಿರುವ ಅಂಶಕ್ಕೆ ನೀಡಿ.<br>ಒಂದು ಲೀಟರ್ ಹಾಲಿಗೆ ರೂ 4/- ಪ್ರೋತ್ಸಾಹ ಧನ ನೀಡುತ್ತಿರುವುದು, ತಮಗೆ ಸಂತೋಷ / ಸಂತ್ರುಪ್ತಿ ಇರುವುದೆ? | ಅಭಿಪ್ರಾಯ (ಗುರಿತಿಸಿ√) | | | | | | | | | | | |
| | | ಇದೆ | | | | ಇಲ್ಲ | | | | | | | |
| | | ಇಲ್ಲ ವಾದಲ್ಲ, ಪ್ರೋತ್ಸಾಹ ಧನ ಎಷ್ಟು ಇರಬೇಕು? ಗುರಿತಿಸಿ? | | | | | | | | | | | |
| | | ರೂ.ಗಳಲ್ಲಿ | 5 | | 6 | | 7 | | 8 | | 9 | 10 | |
| | | ಹೆಚ್ಚಿಸುವದಕ್ಕೆ ಕಾರಣಗಳನ್ನು ಗುರುತಿಸಿ? | | | | | | | | | | | |
| | | ಅ. ಮೇವು ಮತ್ತು ತಿಂಡಿಯ ಬೆಲೆ ಹೆಚ್ಚಿಳ ವಾಗಿರುವುದರಿಂದ | | | | | | | | | | | |
| | | ಆ. ಕೂಲಿಯ ಬೆಲೆ ಹೆಚ್ಚಿಳ ವಾಗಿರುವುದರಿಂದ | | | | | | | | | | | |
| | | ಇ. ಒಟ್ಟು ಹೈನು ನಿರ್ವಹಣೆಯ ಬೆಲೆ ಹೆಚ್ಚಳದಿಂದ | | | | | | | | | | | |
| | | ಈ. ಹೆಚ್ಚುವರಿ ಲಾಭಾಂಶ ಬೇಕಾಗಿರುವುದು | | | | | | | | | | | |
| | | ಉ. ಇತರೆ ಕಾರಣ ತಿಳಸಿದಲ್ಲಿ | | | | | | | | | | | |

| | | | | | |
|---|---|---|---|---|---|
| ಸಿ3 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಯ ಅನುಷ್ಠಾನದ ಪ್ರಭಾವದಿಂದ ಹೈನು ನಿರ್ವಹಣೆಗೆ ಸಂಭಂದಿಸಿದ ಆಹಾರ ನೀಡಿಕೆ, ಲಸಿಕೆ ಹಾಕಿಸುವುದು, ಜಂತು ಹುಳುಗಳಿಗೆ ಔಷಧ ನೀಡುವುದು, ಕರುಗಳ ನಿರ್ವಹಣೆ, ಹಾಗೂ ಸಮರ್ಥವಾಗಿ ಪಶು ಆಹಾರ-ಮೇವಿನ ಬಳಕೆ ಕುರಿತು ರೈತರಲ್ಲಿ ಹೆ'ಚ್ಚಿನ ತಿಳುವಳಿಕೆ ಮತ್ತು | ಅಭಿಪ್ರಾಯ (ಗುರಿತಿಸಿ√) | | | |
| | | ಇದೆ | | ಇಲ್ಲ | |
| | | ಇದೆ, ಆದಲ್ಲಿ, ಸುಧಾರಣೆಗಳು ಯಾವುದರಿಂದ ಆಗಿದೆ? | | | |
| | | ಅ. ಯಶಸ್ವಿ ರೈತರ ಕ್ಷೇತ್ರಗಳಿಗೆ ಬೇಟಿಯಿಂದ | | | |

| | | | |
|---|---|---|---|
| | ಸುಧಾರಣೆ ಕಂಡುಬಂದಿದೆಯೆ? | ಆ. ಹೆಚ್ಚುವರಿ ಅಲ್ಪಾವದಿ ತರಬೇತಿಗಳಿಂದ | |
| | | ಇ. ಹೆಚ್ಚುವರಿ ಆದಾಯ ಬರುತ್ತಿರುವುದರಿಂದ | |
| | | ಈ. ಇತರೆ ಕಾರಣಗಳು ತಿಳಿಸಿದಲಿ | |
| | | ಇಲ್ಲ, ಎನ್ನುವುದಾದರೆ, ರೈತ ತಿಳಿಸಿದ ಕಾರಣಗಳನ್ನು ಗುರಿತಿಸಿ? | |
| | | ಅ. ಹೆಚ್ಚುವರಿ ಆದಾಯ ಅತೀಕಡಿಮೆ | |
| | | ಆ. ಹೆಚ್ಚುವರಿ ಆದಾಯವು, ಕಚ್ಚಾ ಪದಾರ್ಥಗಳ ಬೆಲೆ ಹೆಚ್ಚಳದಲ್ಲಿ ಸೇರುವುದರಿಂದ | |
| | | ಎ. ಹೆಚ್ಚುವರಿ ಆದಾಯವನ್ನು ಪಾನೀಯಗಳಿಗೆ ಬಳಕೆ | |
| | | ಇ. ಇತರೆ ಕಾರಣ ಇದ್ದಲ್ಲಿ | |
| ಸಿ4 | ಹಾಲಿಗೆ ಪ್ರೋತ್ಸಾಹ ಧನವನ್ನು ರೈತರಿಗೆ ಪ್ರತಿ ತಿಂಗಳು ಸಕ್ರಮವಾಗಿ ಬೇಡಿಕೆ ಇದ್ದಷ್ಟು ಪಾವತಿಸಲಾಗುತ್ತಿದೆಯೆ? | ಅಭಿಪ್ರಾಯ (ಗುರಿತಿಸಿ√) | |
| | | ಇದೆ | ಇಲ್ಲ |
| | | ಇಲ್ಲ,ವಾದಲ್ಲಿ, ಇದಕ್ಕೆ ಕಾರಣಗಳನ್ನು ನೀಡಿ? | |
| | | ಅ. ಒಪ್ಪಿಗೆ ಇಲ್ಲದ, ಅನಧಿಕೃತ ಖರ್ಚುಗಳನ್ನು ಕಟಾಯಿಸಲಾಗುತ್ತದೆ | ಹೌದು / ಇಲ್ಲ |
| | | ಆ. ಕಟಾಯಿಸಲಾಗುತ್ತಿದ್ದರೆ, ಯಾವ ರೀತಿಯ ಬಾಕಿಗಳನ್ನು ಎನ್ನುವ ವಿವರ ನೀಡಿ? | |
| | | ಅ. | |
| | | ಆ. | |
| ಸಿ5 | ಪ್ರೋತ್ಸಾಹ ಧನವನ್ನು ರೈತರಿಗೆ ಪಾವತಿಸುವುದರ ಮಾಹಿತಿಯನ್ನು ಕಾಲಾನು ಕಾಲಕ್ಕೆ ಯಾರಿಂದಲಾದರು ಪರಿಶೀಲನೆ ಮಾಡಲಾಗುತ್ತದೆಯೆ? | ( ಗುರಿತಿಸಿ √) | |
| | | ಇದೆ | ಇಲ್ಲ |
| | | ತಿಂಗಳಿಗೆ ಒಂದುಬಾರಿ / ಮೂರು ತಿಂಗಳಿಗೆ ಒಂದುಬಾರಿ | ಅರ್ಧ ವರ್ಷಕ್ಕೆ ಒಂದುಬಾರಿ / ವರ್ಷಕ್ಕೆ ಒಂದುಬಾರಿ |
| ಸಿ6 | ಹಾಲಿಗೆ ಪ್ರೋತ್ಸಾಹ ಧನ ನೀಡುವುದರ ಪ್ರಭಾವದಿಂದ ಗ್ರಾಮಾಂತರ ಪ್ರದೇಶದಲ್ಲಿ ಯುವಕರು ಗ್ರಾಮ ಬಿಟ್ಟು ವಲಸೆ ಹೋಗುವುದು ಕಡಿಮೆಯಾಗಿ, ಗ್ರಾಮದಲ್ಲಿ ಹೈನುಗಾರಿಕೆ ಮಾಡಿಕೊಂಡಿರುವ ಘಟನೆಗಳು ನಿಮ್ಮಗಮನಕ್ಕೆ ಬಂದಿದೆಯೆ? | ( ಗುರಿತಿಸಿ √) | |
| | | ಹೌದು | ಇಲ್ಲ |
| | | ಗಮನಕ್ಕೆ ಬಂದಿದ್ದರೆ, ಕಾರ್ಯದರ್ಶಿಯವರಿಂದ ಎಲ್ಲಿ, ಎಷ್ಟು ಯುವಕರು ಎನ್ನುವ ಹೆಚ್ಚಿನ ಮಾಹಿತಿ ಪಡೆಯಿರಿ? | |
| | | ಯುವಕರ ಸಂಖ್ಯೆ: 1, 2, 3, 4, 5 | |
| | | ಇಲ್ಲವಾದಲ್ಲಿ, ಕಾರಣ ಗುರಿತಿಸಿ? | |
| | | ಅ. ಹೆಚ್ಚುವರಿ ಆದಾಯ ಬಹಳ ಕಡಿಮೆ | |
| | | ಆ. ಯುವಕರು ನಗರ ಪ್ರದೇಶದಲ್ಲಿ ದುಡಿಯಲು ಹೋಗುತ್ತಾರೆ | |

| | | | | | |
|---|---|---|---|---|---|
| ಸಿ7 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಯ ಅನುಷ್ಠಾನದ ಪ್ರಭಾವದಿಂದ ಸಂಘದಿಂದ ನೀಡುತ್ತಿರುವ ಸೇವೆಗಳಲ್ಲಿ, ಪಶು ಆಹಾರ-ಲವಣ ಮಿಶ್ರಣಗಳ ಮಾರಾಟ ಮತ್ತು ಪಶು ರೋಗಗಳ ಉದ್ರೇಕದಲ್ಲಿ ಬದಲಾವಣೆ ಕಂಡುಬಂದಿದೆಯೆ? | ಗಮನಿಸಿರುವುದನ್ನು( ಗುರಿತಿಸಿ √) | | | |
| | | ಹೆಚ್ಚಾಗಿದೆ | | ಬದಲಾವಣೆ ಇಲ್ಲ | |
| | ಅ. ಕೃತಕ ಗರ್ಭಧಾರಣೆ | | | | |
| | ಆ. ಪಶು ಆಹಾರ ಮಾರಾಟ | | | | |
| | ಇ. ಲವಣ/ಖನಿಜ ಮಿಶ್ರಣಗಳ ಮಾರಾಟ | | | | |
| | ಈ. ಯೂರಿಯಾ ಕಾಕಂಬಿ ಬ್ಲಾಕ್ | | | | |
| | ಉ. ಪಶು ರೋಗಗಳ ತಲೆದೋರೋಣ | | | | |
| | ಊ. ಇತರೆ ಇದ್ದಲ್ಲಿ | | | | |
| ಸಿ8 | "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ"ಯ ಅನುಷ್ಠಾನದ ಪ್ರಭಾವದಿಂದ ಸಂಘದ ವ್ಯಾಪ್ತಿಯಲ್ಲಿ ಹಾಲಿನ ಸಂಸ್ಕರಣಾ ಚಟುವಟಿಕೆಗಳು ಬದಲಾವಣೆ/ಹೆಚ್ಚಾಗಿದೆಯೆ? | ಗಮನಿಸಿರುವುದನ್ನು( ಗುರಿತಿಸಿ √) | | | |
| | | ಹೌದು | | ಇಲ್ಲ | |
| | | ಹೆಚ್ಚಾಗಿದ್ದರೆ, ಹೇಗೆ ಎಂಬುದಕ್ಕೆ ಕಾರಣ ನೀಡಿ? | | | |
| | | ಅ. | | | |
| | | ಆ. | | | |
| ಸಿ9 | ಕಾರ್ಯದರ್ಶಿಗಳು ವ್ಯಕ್ತಪಡಿಸಿದಂತೆ ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆಯ ಪ್ರಭಾವದಿಂದ ತಮ್ಮ ವ್ಯಾಪ್ತಿಯಲ್ಲಿ ವಿಶೇಷವಾದ ಅನಿರೀಕ್ಷಿತವಾದ ಬದಲಾವಣೆಗಳು ಕುಟುಂಬ ಅಥವ ಗ್ರಾಮ ಮಟ್ಟದಲ್ಲ್ ಕಂಡುಬಂದಿದೆಯೆ? | ( ಗುರಿತಿಸಿ √) | | | |
| | | ಹೌದು | | ಇಲ್ಲ | |
| | | ಧನಾತ್ಮಕ | | ಋಣಾತ್ಮಕ | |
| | | ಅ. | | ಅ. | |
| | | ಆ. | | ಆ. | |
| ಸಿ10 | ಈ ಯೋಜನೆಯನ್ನು ಹೆಚ್ಚು ಸಮರ್ಥವಾಗಿ ಅನುಷ್ಠಾನ ಮಾಡಲು, ಹಾಗೂ ಇಚ್ಚಿಸಿದ ಉದ್ದೇಶಗಳನ್ನು ಸಾಧಿಸಲು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ? | ಸಲಹೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ? | | | |
| | | ಅ. | | | |
| | | ಆ. | | | |
| | | ಇ. | | | |
| | | ಈ. | | | |
| ಸಿ11 | ಸಂಘದ ಕಾರ್ಯದರ್ಶಿಯವರ | ಸಹಿ(ಕಡ್ಡಾಯ) | | | |
| ಸಿ12 | ಸಂದರ್ಶಕರ ಹೆಸರು | ಸಹಿ | | | |
| ಸಿ13 | ಸಂದರ್ಶನದ ದಿನಾಂಕ | | | | |

**ಅನುಬಂಧ 5**

**ಕರ್ನಾಟಕ ಸರ್ಕಾರದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಇಲಾಖೆಯ "ಹಾಲಿಗೆ ಪ್ರೋತ್ಸಾಹ ಧನ ಸ್ಕೀಂ/ಯೋಜನೆ" 2008-2013**

**ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರ (ಕಮೌಪ್ರಾ)**

**ಪ್ರಶ್ನಾವಳಿ- ಪ್ರ 4**

**ಹಾಲು ಹಾಕುವವರ- ಹಾಲು ಉತ್ಪಾದಕರ ಸಂಘದ ಸದಸ್ಯ ರೈತರಿಗೆ (ಅಧ್ಯಯನ ಸಮೂಹ)**

**ಭಾಗ-ಎ: ಸಾಮಾನ್ಯ ಮಾಹಿತಿ:**

| | | | | | | | | | |
|---|---|---|---|---|---|---|---|---|---|
| 1 | ಒಕ್ಕೂಟದ ಹಸರು | | 2 | ಸಂಘದ ಹೆಸರು | | | | | |
| 3 | ಹಾಲು ಉತ್ಪಾದಕ ರೈತನ ಹೆಸರು | | 4 | ( ಗುರುತಿಸಿ √) | | | | | |
| | | | | ದೊಡ್ಡ ರೈತ | | ಸಣ್ಣ ರೈತ | | | |
| 5 | ( ಗುರಿತಿಸಿ √) | | | ಅತಿ ಸಣ್ಣ ರೈತ | | ಕೃಷಿ ಕಾರ್ಮಿಕ/ಭೂರಹಿತ | | | |
| | ಲಿಂಗ | ಪುರುಷ | | ಪರಿಶಿಷ್ಠ ಜಾತಿ | | ಪರಿಶಿಷ್ಠ ಪಂಗಡ | | ಇತರೆ | |
| | | ಮಹಿಳೆ | | | | | | | |
| 6 | ಸದಸ್ಯತ್ವದ ಸಂಖ್ಯೆ | | 7 | ಗ್ರಾಮದ ಹಸರು | | | | | |

**ಭಾಗ-ಬಿ: ಸಂದರ್ಶನದ ಪ್ರಶ್ನೆಗಳು ಮತ್ತು ದತ್ತಾಂಶಗಳು:**

| | | | | | |
|---|---|---|---|---|---|
| 1. | ಸಾಮಾನ್ಯವಾಗಿ, ಸಂಘಕ್ಕೆ ಹಾಲು ಹಾಕಿದ ಮೇಲೆ ನಿಮಗೆ ಪ್ರೋತ್ಸಾಹ ಧನ ತಲುಪಲು ಎಷ್ಟು ಅವಧಿ ಬೇಕಾಗಬಹುದು? | ( ಗುರುತಿಸಿ √) | | | |
| | | ಒಂದು ತಿಂಗಳ ಒಳಗೆ | | ಮೂರು ತಿಂಗಳ ಒಳಗೆ | |
| | | ಎರಡು ತಿಂಗಳ ಒಳಗೆ | | ನಾಲ್ಕು ತಿಂಗಳ ಒಳಗೆ | |
| | ಅ. ಈ ಅವಧಿ ಹೆಚ್ಚಾಗಿರುವುದೆ? | | | | |
| | ಆ. ಈ ಅವಧಿ ಸರಿ ಇರುವುದೆ? | | | | |
| | ಇ. ಈ ಅವಧಿ ಕಡಿಮೆ ಇರುವುದೆ? | | | | |
| 2. | ಅ. ನಿಮಗೆ ಕೊಡಬೇಕಾದ ಪ್ರೋತ್ಸಾಹ ಧನವು ಸಂಪೂರ್ಣವಾಗಿ ಕೈಸೇರುತ್ತಿದೆಯೆ? | ( ಗುರುತಿಸಿ √) | | | |
| | | ಇದೆ | | ಇಲ್ಲ | |
| | | ಇಲ್ಲವಾದಲ್ಲಿ, ಏತಕ್ಕಾಗಿ ಕಾರಣ ತಿಳಿಸಿ? | | | |
| | | ಅ. ಬಾಕಿಯನ್ನು ಕಡಿತಗೊಳಿಸಲಾಗುತ್ತಿದೆ | | | |
| | | ಆ. ಸೇವಾ ಶುಲ್ಕ ಹಿಡಿಯುತ್ತಾರೆ | | | |
| | | ಇ. ಕಡಿತಗೊಳಿಸಲಾಗುತ್ತಿದೆ ಆದರೆ ಕಾರಣ ತಿಳಿಯುವುದಿಲ್ಲ | | | |
| | | ಈ. ಇತರೆ ಕಾರಣಗಳು ಇದ್ದಲ್ಲಿ ತಿಳಿಸಿ | | | |
| | ಆ. ಪ್ರೋತ್ಸಾಹ ಧನವು ಪಾವತಿಯಾಗುವಾಗ ಕಾನೂನು ಬಾಹಿರವಾದ ಕಡಿತಗಳನ್ನು ಯಾವುದೇ ಹಂತದಲ್ಲಾಗಲಿ ಮಾಡಲಾಗುತ್ತದೆಯೆ? | ( ಗುರುತಿಸಿ √) | | | |
| | | ಹೌದು | | ಇಲ್ಲ | |
| | | ಹೌದು ಆದಲ್ಲಿ, ಏತಕ್ಕಾಗಿ ಕಾರಣ ತಿಳಿಸಿ? ಕಾರಣಗಳಿಗೆ ಈರೀತಿ ಗುರಿತಿಸಿ( √ ) | | | |
| | | ಅ. ಕಮಿಷನ್ ಹಿಡಿಯುತ್ತಾರೆ | | | |
| | | ಆ. ಹೆಚ್ಚುವರಿ ಖರ್ಚುಗಳನ್ನು ಸರಿದೂಗಿಸಲು | | | |
| | | ಕಡಿತಗೊಳಿಸಲಾಗುತ್ತಿದೆ ಆದರೆ ಕಾರಣ ತಿಳಿಯುವುದಿಲ್ಲ | | | |

| | | | | | |
|---|---|---|---|---|---|
